ಬೆಲೆ: ಎರಡು ಆಣೆ

ಕರ್ಮವೀರ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ ತರಿಸಿಕೊಂಡಲ್ಲಿ ೫ ಆಣೆ ಹೆಚ್ಚಿಗೆ ಬೀಳುವದು.

KARMAVEER
WEEKLY
HUBLI
★
JUNE 24
1946

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor : H. R. Purohit, M. A.

ಸಂಪುಟ ೧೮] ಹುಬ್ಬಳ್ಳಿ ಸೋಮವಾರ ತಾರೀಖು ೨೪ — ೬ — ೧೯೪೬ [ಸಂಚಿಕೆ ೧೨

ಕಾಶ್ಮೀರದ ಜನಜಾಗ್ರತಿಯ ಮಹಾನಾಟಕ

ಸ್ವಾತಂತ್ರ್ಯದೇವಿ ಹಿಂದುಸ್ತಾನದ ಬಾಗಿಲು ಬಡಿಯುತಿರುವಾಗ, ಹಿಂದುಸ್ತಾನದ ಸಂಸ್ಥಾನಗಳ ಕೋಟ್ಯಂತರ ಪ್ರಜೆಗಳು ತಮ್ಮ ಮಾನವೀ ಹಕ್ಕು ಬಾಧ್ಯತೆಗಳ ಸಂಪಾದನೆಯ ಕೊನೆಯ ಸಂಧಿಯಿದೆಂದರಿತು ಎಚ್ಚರಗೊಂಡು ಕಾರ್ಯ ಪ್ರವೃತ್ತರಾಗಿದ್ದಾರೆ. ಆದರೆ ಹಿಮಾಲಯದ ತಪ್ಪಲುಗಳಲ್ಲಿರುವ ಜಗತ್ತಿನ ಅತಿ ಸುಂದರ ಸ್ಥಾನಗಳಲ್ಲೊಂದಾದ ಕಾಶ್ಮೀರದ ಜನರು ಇದೀಗ ಎದ್ದು ನಿಂತಿರುವಷ್ಟು ದಿಟ್ಟತನದಿಂದ ಬೇರಾವ ಸಂಸ್ಥಾನದ ಪ್ರಜೆಗಳೂ ಎದ್ದು ನಿಂತಿಲ್ಲ; ಅಲ್ಲಿಯ ಸರಕಾರ ಕೈಕೊಂಡಷ್ಟು ಭಯಾನಕ ದಮನ ವ್ಯಾಪಾರವನ್ನೂ ಬೇರಾವ ಸಂಸ್ಥಾನವೂ ಕೈಕೊಂಡಿಲ್ಲ.

೧೫ ವರ್ಷಗಳ ಜಾಗ್ರತಿ

ಕಾಶ್ಮೀರದಲ್ಲಿ ಜನಜಾಗ್ರತಿ ೧೫ ವರ್ಷಗಳ ಕೆಳಗೆ ಪ್ರಾರಂಭವಾಯಿತು. ಆದೀಗ ಅತ್ಯಂತ ಧೈರ್ಯದಿಂದ ಕಾಶ್ಮೀರದ ಅರಸು ಮನೆತನವೇ ಪದಚ್ಯುತವಾಗಬೇಕೆಂದು ಕೇಳುವಷ್ಟು ಮಟ್ಟಿಗೆ ಬೆಳೆದಿದೆ. ಈ ಜಾಗ್ರತಿಯ ಶಿಲ್ಪಿ ಕಾಶ್ಮೀರದ ಪ್ರಚಂಡ ಧುರೀಣ ಶೇಖ ಮಹಮ್ಮದ ಅಬ್ದುಲ್ಲಾ ಅವರು. ಕೆಲ ದಿನಗಳ ಕೆಳಗೆ ಕಾಶ್ಮೀರದ ರಾಜಧಾನಿ ಶ್ರೀನಗರದಿಂದ ಕೆಲ ಮೈಲು ದೂರದಲ್ಲಿರುವ ಸುಂದರ ಸರೋವರ ತೀರದ ಪವಿತ್ರತರ ಮಸೀದೆಯೊಂದರ ಆವಾರದಲ್ಲಿ ಸೇರಿದ ೧೨೦೦೦ ಜನ ಸಂದಣಿಯ ಮುಂದೆ ಅವರು ಭಾಷಣ ಮಾಡುತ್ತ ಜಮ್ಮೂ—ಕಾಶ್ಮೀರಗಳನ್ನಾಳುವ ದೋಗ್ರಾ ಮನೆತನದವರಿಗೆ ಈ ೪೦ ಲಕ್ಷ ಪ್ರಜೆಗಳನ್ನು ಆಳುವ ಹಕ್ಕೇ ಇಲ್ಲವೆಂದು ಗುಡುಗಿದರು. ಹಿಂದುಸ್ತಾನದ ಪ್ರಾಯಶಃ ಎಲ್ಲ ಸಂಸ್ಥಾನಗಳಲ್ಲಿಯೂ ಹೊಣೆಗಾರ ಸರಕಾರಕ್ಕಾಗಿ ಚಳವಳಿ ನಡೆದಿದೆ. ಆದರೆ ಕಾಶ್ಮೀರದ ಈ ಮುಂದಾಳಿನಂತೆ ಅರಸು ಮನೆತನದ ಹಕ್ಕನ್ನೇ ಅಲ್ಲಗಳೆಯುವ ಧೈರ್ಯವನ್ನು ಬೇರಾವಲ್ಲಿಯೂ ಯಾರೂ ತೋರಿಸಿಲ್ಲ.

ಮೋಜಿನ ವ್ಯಾಪಾರ

ದೋಗ್ರಾ ಅರಸು ಮನೆತನದವರು ೪೦ ಲಕ್ಷಕ್ಕೂ ಮಿಕ್ಕಿದ ಪ್ರಜಾಸಂಖ್ಯೆಯುಳ್ಳ ಕಾಶ್ಮೀರದ ಒಡೆತನವನ್ನು ಪಡೆದ ಬಗೆ ಒಳ್ಳೆ ಮೋಜಿನ ಕಥೆಯಾಗಿದೆ. ನೂರು ವರ್ಷಗಳ ಕೆಳಗೆ ಈಸ್ಟ ಇಂಡಿಯಾ ಕಂಪನಿಯವರು ಕಾಶ್ಮೀರ ದೇಶವನ್ನು ಅದರ ಪ್ರಜೆಗಳ ಸಹಿತ ನೆರೆ ಸಂಸ್ಥಾನವಾದ ಜಮ್ಮೂದ ಅರಸ ಗುಲಾಬಸಿಂಗನಿಗೆ ಸುಮಾರು ೭೫,೦೦,೦೦೦ ರೂಪಾಯಿಗಳಿಗೆ ಮಾರಿದರು. ಇದಲ್ಲದೆ ವರ್ಷಕ್ಕೆ “ಒಂದು ಕುದುರೆ, ೧೨ ಆಡುಗಳು (ಆರು ಹೆಣ್ಣು ಆರು ಗಂಡು), ಮತ್ತು ಮೂರು ಜೋಡಿ ಕಾಶ್ಮೀರಿ ಶಾಲು” ಗಳ ಸಾಂಕೇತಿಕ ಕಪ್ಪವನ್ನು ಗುಲಾಬಸಿಂಗನೂ ಅವನ ಉತ್ತರಾಧಿಕಾರಿಗಳೂ ತೆರಬೇಕಾಗಿತ್ತು. ಇಂಥ “ವ್ಯಾಪಾರ” ಗಳು ಬ್ರಿಟಿಶ ಆಳಿಕೆಯ ಇತಿಹಾಸದಲ್ಲಿ ಅದ್ವಿತೀಯವಲ್ಲದಿದ್ದರೂ ವಿರಳವೇ ಸರಿ. ಹೀಗೆ ಕಾಶ್ಮೀರದ ಮೇಲೆ ದೋಗ್ರಾ ಮನೆತನದ ಯಾವ ಪರಂಪರಾಗತ ಸ್ವಾಮಿತ್ವವೂ ಇಲ್ಲ. ಆದುದರಿಂದ “ಯಾವುದೇ ಮಾರಾಟದ ಕರಾರು ಎಷ್ಟೇ ಅನುಲ್ಲಂಘನೀಯವಾಗಿರಲಿ, ೪೦ ಲಕ್ಷ ಸ್ತ್ರೀ-ಪುರುಷರನ್ನು ಅವರ ಇಚ್ಛೆಗೆ ವಿರುದ್ಧವಾಗಿ ನಿರಂಕುಶ ರಾಜನೊಬ್ಬನ ಆಳಿಕೆಗೆ ಅದು ಗುರಿಮಾಡಲಾರದು. ನಾವು ಕಾಶ್ಮೀರದ ಜನರು ನಮ್ಮ ಭವಿತವ್ಯವನ್ನು ನಾವೇ ರೂಪಿಸಿಕೊಳ್ಳಲು ನಿರ್ಧರಿಸಿದ್ದೇವೆ. ಮಂತ್ರಿಮಂಡಲ ರಾಯಭಾರಿಗಳು ನಮ್ಮ ಧ್ಯೇಯದ ಔಚಿತ್ಯವನ್ನೂ ಸತ್ವವನ್ನೂ ಮನಗಂಡು ಅಂಗೀಕರಿಸುವರೆಂದು ಹಾರೈಸುತ್ತೇವೆ” ಎಂದು ಕಾಶ್ಮೀರಿ ರಾಷ್ಟ್ರೀಯ ಪರಿಷತ್ತು ಮಂತ್ರಿತ್ರಯರಿಗೆ ಒಪ್ಪಿಸಿದ ಮನವಿಯಲ್ಲಿ ಹೇಳಿದೆ.

ಜಾತೀಯತೆಯನ್ನು ತೊರೆದು ರಾಷ್ಟ್ರೀಯತೆಯನ್ನು ಅಪ್ಪಿಕೊಂಡ ಶೇಖ ಅಬ್ದುಲ್ಲಾರ ಪ್ರಚಂಡ ವ್ಯಕ್ತಿತ್ವ

ಶೇಖ ಅಬ್ದುಲ್ಲಾರ ವ್ಯಕ್ತಿತ್ವ

ಕಾಶ್ಮೀರದ ಜನಜಾಗೃತಿಯ ಇತಿಹಾಸ ಶೇಖ ಅಬ್ದುಲ್ಲಾರ ಜೀವನದೊಡನೆ ಬಿಡಿಸಬಾರದಂತೆ ಹೆಣೆದುಕೊಂಡಿದೆ. ಆರಡಿ ನಾಲ್ಕಿಂಚು ಎತ್ತರದ ಈ ಅಜಾನುಬಾಹು ಮೊದಲ ನೋಟಕ್ಕೆ ನಮ್ಮನ್ನು ಸೆಳೆದುಕೊಳ್ಳುವಂಥ ವ್ಯಕ್ತಿತ್ವವುಳ್ಳವರು. ೧೯೦೫ ರಲ್ಲಿ ಕಾಶ್ಮೀರಿ ಶಾಲುಗಳ ವ್ಯಾಪಾರಿಯೊಬ್ಬನ ಮಗನಾಗಿ ಹುಟ್ಟಿದ ಇವರು ಬಾಲ್ಯದಲ್ಲಿಯೆ ತಂದೆ ತಾಯಿಗಳನ್ನು ಕಳೆದುಕೊಂಡು ಅಣ್ಣಂದಿರ ಪಾಲನೆಯಲ್ಲಿ ಬೆಳೆದರು. ಅವರ ಧೀರ ವ್ಯಕ್ತಿತ್ವಕ್ಕೆ ಮನಸೋತ ಅವರ ಬೆಂಬಲಿಗರು ಅವರಲ್ಲಿ ಅಕ್ಷುಣ್ಣವಾದ ವಿಶ್ವಾಸವನ್ನಿಟ್ಟಿದ್ದಾರೆ. ಅವರಲ್ಲಿ ಕಾಶ್ಮೀರಿ ಜನಸಾಮಾನ್ಯರಿಗೆ ಅಸಾಧಾರಣ ಭಕ್ತಿಯಿದೆ. ಅವರ ಪಾದ ಧೂಳಿಯನ್ನು ಮುತ್ತಿಡುವವರೆಷ್ಟೊ ಜನರನ್ನು ಕಾಶ್ಮೀರದ ಕಂದರಗಳಲ್ಲಿ ತಾನು ಕಂಡಿರುವದಾಗಿ “ಸ್ಟೇಟ್ಸಮನ್” ಪತ್ರಿಕೆಯ ಪ್ರತಿನಿಧಿ ಬರೆದಿದ್ದಾನೆ.

೧೯೩೧ ರಲ್ಲಿ, ಇನ್ನೂ ೨೫ ವಯಸ್ಸಿನವರಿರುವಾಗ, ಶೇಖ ಅಬ್ದುಲ್ಲಾರು ರಾಜಕೀಯ ಆಕಾಶ ಆಕಾಶದಲ್ಲಿ ಒಮ್ಮಿಂದೊಮ್ಮೆ ಉದಯಿಸಿದರು. ಅವರೆಗೆ ಅವರ ಹೆಸರು ಅರಿತವರು ವಿರಳ. ಪುಸ್ತಕ ಭಂಡಾರಗಳಲ್ಲಿ ಶೇಖ ಅಬ್ದುಲ್ಲಾರೂ ಅವರ ಯುವಕ ಗೆಳೆಯರೂ ವಹಿಸುತಿದ್ದ ಆಸ್ಥೆಯ ಪರಿಣಾಮವಾಗಿ ಅವರನ್ನು “ಪುಸ್ತಕ ಭಂಡಾರ ಪಕ್ಷ” ಎಂದು ಕರೆಯುತಿದ್ದುದುಂಟು. ಆದರೆ ಕಾಶ್ಮೀರಿಗಳನ್ನು ಸೈನ್ಯದಲ್ಲಿಯೂ ಸರಕಾರಿ ನೌಕರಿಗಳಲ್ಲಿಯೂ ಸೇರಿಸಿಕೊಳ್ಳದಿರುವ ಅಂದಿನ (ಮತ್ತು ಇಂದಿನ) ಸರಕಾರದ ಧೋರಣೆಯನ್ನು ನಿಷೇಧಿಸಿ ಅವರು ಸರಕಾರಕ್ಕೆ ಒಪ್ಪಿಸಿದ ಮನವಿಯ ಪರಿಣಾಮವಾಗಿ ಸೆಪ್ಟೆಂಬರ ೧೯೩೧ ರಲ್ಲಿ ಅವರ ಹೆಸರು ಹಠಾತ್ತಾಗಿ ಬೆಳಕಿಗೆ ಬಂತು.

ದೋಗ್ರಾ—ಪಂಡಿತ ಗುತ್ತಿಗೆ

ಶೇಖ ಅಬ್ದುಲ್ಲಾರ ಚಳವಳಿ ಆರಂಭದಲ್ಲಿ ಜಾತೀಯ ಸ್ವರೂಪದ್ದೇ ಇತ್ತು. ಅದು ಅನ್ಯಥಾ ಇರುವದು ಸಾಧ್ಯವಿರಲಿಲ್ಲ. ಕಾಶ್ಮೀರದ ಜನತೆಯಲ್ಲಿ ನೂರಕ್ಕೆ ೯೩ ಜನ ಮುಸ್ಲಿಮರು, ಏಳು ಜನ ಹಿಂದೂಗಳು ಮತ್ತು ಇತರರು. ಅರಸು ಮನೆತನ ಹಿಂದೂಗಳದು. ಸೈನ್ಯದಲ್ಲಿ ಕಾಶ್ಮೀರಿಗಳಿಗೆ- ಏಕೆ, ದೋಗ್ರಾ ಜನರಲ್ಲದವರಿಗೆ- ಪ್ರವೇಶವಿಲ್ಲ. ಈ ಕಾರಣದಿಂದ ದೋಗ್ರಾ ಹಿಂದೂ-ಮುಸ್ಲಿಮರು ಕಾಶೀರದಲ್ಲಿ ತಕ್ಕಮಟ್ಟಿಗೆ ಸಂತುಷ್ಟರಾದ ಜನರು. ಇನ್ನು ಸರಕಾರಿ ನೌಕರಿಗಳಲ್ಲಿ ಕಾಶ್ಮೀರಿ ಪಂಡಿತರ— ಬ್ರಾಹ್ಮಣರ— ಗುತ್ತಿಗೆ. ಹೀಗಾಗಿ ಕಾಶ್ಮೀರದ ರಾಜ್ಯಭಾರದಲ್ಲಿ ಮಹಾರಾಜರೂ ದೋಗ್ರಾರೂ ಪಂಡಿತರೂ ಪಾಲುಗಾರರಾಗಿ ಕಾಶ್ಮೀರದ ನಿವಾಸಿಗಳನ್ನು ಹೊರಗಿಟ್ಟಿದ್ದರು. ನೂರಕ್ಕೆ ನಾಲ್ಕರಷ್ಟು ಕೂಡ ಅಕ್ಷರಸ್ಥರಿಲ್ಲದ ಕಾಶ್ಮೀರಿ ಮುಸ್ಲಿಮರು ಶಾಶ್ವತವಾಗಿ ಕೀಳುದರ್ಜೆಗೆ ತಳಲ್ಪಟ್ಟಿದ್ದರು.

ಅದ್ದರಿಂದ ಶೇಖ ಅಬ್ದುಲ್ಲಾರ ಚಳವಳಿ ಮುಸ್ಲಿಮರಿಗೆ ಸರಕಾರಿ ನೌಕರಿಗಳಲ್ಲಿ ಹೆಚ್ಚಿನ ಪ್ರಾತಿನಿಧ್ಯದ ಬೇಡಿಕೆಯೊಡನೆ ಆರಂಭವಾದುದೂ ಸ್ವಾಭಾವಿಕವೆ. ಇದೂ ಅಲ್ಲದೆ ಜನತೆಯ ಮೇಲೆ ವಿಶೇಷ ಪ್ರಭಾವವುಳ್ಳ ಮುಲ್ಲಾರ ಸಹಾಯವಿಲ್ಲದೆ ಜನತೆಯನ್ನು ಸಂಘಟಿಸುವದು ಅಸಾಧ್ಯವೆಂದು ಅವರು ಅರಿತಿದ್ದರು. ಸುದೈವದಿಂದ ಮುಲ್ಲಾರ ಸಹಾಯ ಅವರಿಗೆ ದೊರಕಿತು. ಮಸೀದೆಗಳು ರಾಜಕೀಯ ಸಂಘಟನೆಯ ರಂಗವಾದವು.

ಗಲಭೆಗಳು

ಪರಿಣಾಮ ಸ್ವಾಭಾವಿಕವಾಗಿ ಎಲ್ಲೆಲ್ಲಿಯೂ ರಾಜಕೀಯ-ಜಾತೀಯ ಗಲಭೆಗಳ ಸ್ವರೂಪದಲ್ಲಿ ತೋರ್ಪಟ್ಟಿತು. ಹಿಂದೂ ಅರಸನಿದ್ದುದರಿಂದ ಹಿಂದುಗಳೆಲ್ಲ ಅರಸನಿಂದ ಅವಿಚ್ಛೇದ್ಯರೆಂಬ ಭಾವನೆ ಮುಸ್ಲಿಮರಲ್ಲಿ ಬೇರೂರಿತ್ತೆಂದು ತೋರುತ್ತದೆ. ೧೯೩೧ ಜುಲೈಯಲ್ಲಿ ದೊಡ್ಡ ದೊಡ್ಡ ಮುಸ್ಲಿಂ ಜನ ಸಮೂಹಗಳು ಹಿಂದೂಗಳ ಮೇಲೇರಿ ಹೋಗಿ ಸೇಡು ತೀರಿಸಿಕೊಂಡವು. ಜುಲೈ ೧೩ ನೆ ದಿನ ಚಿರಸ್ಮರಣೀಯವಾಗಿ ಉಳಿಯುವದು. ಶೇಖ ಅಬ್ದುಲ್ಲಾರನ್ನು ಸರಕಾರ ಬಂಧಿಸಿತು. ಹರಿ ಪರ್ವತ ಕೋಟೆಯಲ್ಲಿ ಅವರನ್ನು ಬಂಧಿಸಿಡಲಾಯಿತು. ಪ್ರಚಂಡ ದಬ್ಬಾಳಿಕೆ ನಡೆಯಿತು. ಪುಂಡುಗಂದಾಯಗಳು ಹೇರಲ್ಪಟ್ಟವು. ಜಮ್ಮೂ ಭಾಗದಲ್ಲಿ ಬ್ರಿಟಿಷ ಸೈನ್ಯವನ್ನು ಕರೆಸಿರದಿದ್ದರೆ ಆಗಲೆ ಅರಸು ಮನೆತನದ ಹಣೆ ಬರಹದ ನಿರ್ಧಾರವಾಗಿ ಹೋಗುತ್ತಿತ್ತು. ಹೇಗೋ ಹೇಗೋ ೧೯೩೨ ಫೆಬ್ರುವರಿ ಸುಮಾರಿಗೆ ಪರಿಸ್ಥಿತಿ ಹಿಡಿತಕ್ಕೆ ಬಂತು.

ಗ್ಲ್ಯಾನ್ಸಿ ಸಮಿತಿ

ಅದೇ ವರ್ಷ ಕಾಶ್ಮೀರದ ಪರಿಸ್ಥಿತಿಗೆ ಉಪಾಯಗಳನ್ನು ಸೂಚಿಸಲು (ಸರ್) ಬರ್ಟ್ರಂಡ ಗ್ಲ್ಯಾನ್ಸಿ (ವಿದೇಶ ಮತ್ತು ರಾಜಕೀಯ ಖಾತೆಯ ಅಧಿಕಾರಿ) ಯವರ ಅಧ್ಯಕ್ಷತೆಯಲ್ಲಿ ಇಬ್ಬರು ಹಿಂದೂ ಇಬ್ಬರು ಮುಸ್ಲಿಮರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು. ಮುಸ್ಲಿಂ ಧಾರ್ಮಿಕ ಕಟ್ಟಡಗಳನ್ನು ಮುಸ್ಲಿಮರಿಗೆ ಹಿಂದೆ ಕೊಡಬೇಕು, ಮುಸ್ಲಿಮರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹಬ್ಬಿಸಬೇಕು, ಮುಸ್ಲಿಂ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಬೇಕು, ಸರಕಾರಿ ನೌಕರಿಗೆ ಬಹಳ ಹೆಚ್ಚಿನ ಯೋಗ್ಯತೆಯ ಮಟ್ಟವನ್ನು ಹಾಕದೆ ಸಾಮಾನ್ಯರಿಗೆ ಅದು ಎಟಕುವಂತಿಡಬೇಕು, ಸರಕಾರದ ಒಡೆತನಕ್ಕೊಳಪಟ್ಟಿದ್ದು ಖಾಸಗಿ ಜನರ ಅನುಭೋಗದಲ್ಲಿದ್ದ ಭೂಮಿಗಳ ಒಡೆತನವನ್ನು ಆಯಾ ಜನರಿಗೇ ಕೊಡಬೇಕು, ಉತ್ಪಾದನೆಯ ಬಿಟ್ಟಿ ದುಡಿಮೆಯನ್ನು ರದ್ದುಗೊಳಿಸಬೇಕು ಎಂಬಿವೇ ಮೊದಲಾದ ಸೂಚನೆಗಳನ್ನು ಆ ಸಮಿತಿ ಮಾಡಿತು. ಇದರಿಂದ ಜಾಗೀರದಾರರ ಸ್ವೇಚ್ಛಾಚಾರಕ್ಕೆ ಬಲಿಯಾಗಿ ಬರಿ ಪಶುಗಳಂತೆ ದುಡಿಯಬೇಕಾಗುತ್ತಿದ್ದ ಮುಸ್ಲಿಮ ಜನ ಸಾಮಾನ್ಯಕ್ಕೆ ಸ್ವಲ್ಪ ಹಗುರೆನಿಸೀತೆಂದು ಆಶಿಸಲಾಗಿತ್ತು.

ಸಮಿತಿಯ ಸೂಚನೆಯ ಪರಿಣಾಮವಾಗಿ ೩೩ ಲೋಕನಿಯುಕ್ತ ಮತ್ತು ೪೧ ಸರಕಾರಿ ಅಧಿಕಾರಿ ಮತ್ತು ಸರಕಾರ ನಿಯುಕ್ತ ಸದಸ್ಯರುಳ್ಳ ೭೫ ಜನರ ಶಾಸನ ಸಭೆಯೊಂದು ಏರ್ಪಟ್ಟಿತು ಅದಕ್ಕೆ ಪ್ರಶ್ನೆ ಕೇಳುವ, ಗೊತ್ತುವಳಿ ಮಾಡುವ ಹಾಗು ಮುಂಗಡ ಪತ್ರಿಕೆಯನ್ನು ಚರ್ಚಿಸುವ ಅಧಿಕಾರ ಕೊಡಲ್ಪಟ್ಟಿತು.

ಎಲ್ಲಕ್ಕಿಂತ ಮಿಗಿಲಾಗಿ, ಪತ್ರಿಕಾ ಸ್ವಾತಂತ್ರ್ಯ ಮತ್ತು ಸಂಘ ಸ್ವಾತಂತ್ರ್ಯವನ್ನು ಬ್ರಿಟಿಶ ಹಿಂದುಸ್ತಾನದಲ್ಲಿದ್ದಷ್ಟೇ ಕೊಡಲಾಯಿತು.

ಇದರ ಪ್ರಯೋಜನ ಪಡೆದು ಮುಸ್ಲಿಮರು ೧೯೩೨ ರಲ್ಲಿ ಅಖಿಲ ಜಮ್ಮು—ಕಾಶ್ಮೀರ ಮುಸ್ಲಿಂ ಪರಿಷತ್ತನ್ನು ಸಂಘಟಿಸಿಕೊಂಡರು.

ಕಣ್ಮುಸುಕು ಹರಿಯಿತು

ಜಮ್ಮು-ಕಾಶ್ಮೀರ ಮುಸ್ಲಿಮ ಪರಿಷತ್ತು ನೌಕರಿಗಳಲ್ಲಿ ಮುಸ್ಲಿಮರ ಪ್ರಾತಿನಿಧ್ಯದ ಗ್ಲ್ಯಾನ್ಸಿ ಸೂಚನೆಗಳನ್ನು ಸರಿಯಾಗಿ ಆಚರಣೆಗಿಳಿಸಲಾಗುತ್ತದೋ ಇಲ್ಲವೋ ಎಂಬುದನ್ನು ಪರಿಶೀಲಿಸಿ ಟೀಕಿಸುವ ಕಡೆಗೇ ಹೆಚ್ಚು ಲಕ್ಷ್ಯ ವೇಧಿಸಿತು. ಆದರೆ ಜಾಗಿರದಾರರ ದಬ್ಬಾಳಿಕೆಗೊಳಗಾಗಿ ಬಡತನದ ಪರಮಾವಧಿಯಲ್ಲಿ, ಸಾಲದ ಸರಳಮಂಚದಲ್ಲಿ ಬಿದ್ದಿದ್ದ ಬಡ ರೈತರ ವಿಚಾರ ಅದರ ಗಮನಕ್ಕೆ ವಿಶೇಷವಾಗಿ ಬರಲಿಲ್ಲ. ಈಗಿನ ಮಹಾರಾಜರಿಗೋ ಅವರ ಪೂರ್ವಜರಿಗೋ ಏನೋ ಸಹಾಯ ಮಾಡಿದ ಕಾರಣದಿಂದ ಭೂಮಿಯ ಒಡೆತನವನ್ನು ಅನುಭವಿಸುತಿದ್ದ ಈ ಜಾಗಿರದಾರರು ಎಷ್ಟೋ ವೇಳೆ ಕಾಯಿದೆಯ ಹಿಡಿತಕ್ಕೆ ಕೂಡ ದೊರೆಯದಷ್ಟು ನಿರಂಕುಶರಾಗಿದ್ದರು, ಹಾಗೆಯೆ ಉಳಿದರು. ಸುವರ್ಣಭೂಮಿ ಕಾಶ್ಮೀರದ ದರಿದ್ರ ರೈತರ ಪಾಡು ಸುಧಾರಿಸಲಿಲ್ಲ.

ಗ್ಲ್ಯಾನ್ಸಿ ವರದಿಯನ್ನು ಕಾರ್ಯರೂಪಕ್ಕೆ ತರುವಲ್ಲಿ ಸರಕಾರವೇನೂ ಅಷ್ಟು ಆತುರ ತೋರಲಿಲ್ಲ ಅದ್ದರಿಂದ ೧೯೩೪ ರಲ್ಲಿ ಶೇಖ ಅಬ್ದುಲ್ಲಾರು ಪುನಃ ಚಳವಳಿ ಆರಂಭಿಸಿದರು. ಆದರೆ ಮುಸ್ಲಿಂ ಜನ ಸಾಮಾನ್ಯ ಅದಕ್ಕೆ ಹಿಂದಿನಂತೆ ಬೆಂಬಲವೀಯಲಿಲ್ಲ. ಆಂದೋಲನ ಕೆಲವೇ ವಾರಗಳಲ್ಲಿ ಮಣ್ಣು ಮುಕ್ಕಿತು.

ಕಾರಣ ಸ್ಫುಟವೇ ಆಗಿತ್ತು. ನೌಕರಿಗಳು ದೊರೆತ ಮುಸ್ಲಿಂರು ಸರಕಾರದ ಗುಲಾಮರಾದರು. ಮುಸ್ಲಿಮ ಅಧಿಕಾರಿಗಳು ಬಂದುದರಿಂದ ತಮ್ಮ ಅವಸ್ಥೆ ಸುಧಾರಿಸೀತೆಂದು ಬಗೆದಿದ್ದ ಜನತೆಯ ಆಶೆ ನಿರಾಶೆಯಾಯಿತು. ಕೆಲವೊಮ್ಮೆ ಮುಸ್ಲಿಮ ಜನರೇ ಈ ಹೊಸ ಮುಸ್ಲಿಂ ಅಧಿಕಾರಿಗಳನ್ನು ತೆಗೆದುಹಾಕಿ ಹಳೆಯ ಅನುಭವಿ ಹಿಂದು ಅಧಿಕಾರಿಗಳನ್ನು ತಿರುಗಿ ನೇಮಿಸಿರೆಂದು ಸರಕಾರವನ್ನು ಕೇಳಿಕೊಂಡದ್ದು ನೋಡಿ ಮುಸ್ಲಿಂ ಪರಿಷತ್ತು ದಿಙ್ಮೂಢವಾಯಿತು !

೧೯೩೪ ರಲ್ಲಿ ಆರಂಭವಾದ ಶಾಸನ ಸಭೆಯಲ್ಲಿಯೂ ಅಪೇಕ್ಷಿಸಿದಂತೆ ಕೆಲಸ ಸಾಧಿಸಲಿಲ್ಲ. ಲೋಕನಿಯುಕ್ತ ಮತ್ತು ಸರಕಾರ ನಿಯುಕ್ತರಲ್ಲಿ ಯಾವಾಗಲೂ ಮತಭೇದಗಳಿದ್ದು ಯಾವದೂ ಸರಿಯಾಗಿ ಸಾಗದಂತಾಯಿತು.

—೧೨ನೇ ಪುಟ ನೋಡಿರಿ

ಜೀವನ ಮತ್ತು ವಿಜ್ಞಾನ

ಹುಳಿಯಲ್ಲಿ 'ಸಿ' ಜೀವಸತ್ತ್ವ

ರಕ್ತ ಸೃಷ್ಟಿಗೂ ಮತ್ತು 'ಸ್ಕರ್ವಿ' ಎಂಬ ರೋಗವನ್ನು ದೂರ ಮಾಡುವದಕ್ಕೂ ಬೇಕಾಗುವ 'ಸಿ' ಜೀವ ಸತ್ತ್ವ ಅಥವಾ ಎಸ್ಕಾರಬಿಕ್ ಆಮ್ಲ ('Ascorbic Acid) ವು ಹೊಸ ಹಣ್ಣು ಮತ್ತು ತರಕಾರಿಗಳಲ್ಲಿ (ವಿಶೇಷವಾಗಿ ಹಸಿರು ಎಲೆಗಳಲ್ಲಿ) ಅಧಿಕವಾಗಿರುತ್ತದೆ. ಸಾಮಾನ್ಯವಾಗಿ ಬೇಳೆ ಹಾಗೂ ಧಾನ್ಯಗಳಲ್ಲಿ 'ಸಿ' ಜೀವಸತ್ತ್ವವಿರುವದಿಲ್ಲ. ಒಂದು ವೇಳೆ ಇವುಗಳನ್ನು ಮೊಳಕೆ ಬರುವ ವರೆಗೆ ಬಿಟ್ಟರೆ, ಮೊಳಕೆ ಬಂದ ಕಾಳುಗಳಲ್ಲಿ 'ಸಿ' ಜೀವಸತ್ತ್ವ ಹುಟ್ಟುತ್ತದೆ. ಹಣ್ಣು ಮತ್ತು ತರಕಾರಿಗಳಿಗಿಂತ, ಹುಣಸೆಯ ಹಣ್ಣಿನಲ್ಲಿ ಈ ಜೀವಸತ್ತ್ವವು ಹೆಚ್ಚಿನ ಪ್ರಮಾಣದಲ್ಲಿದೆ ಎಂದು ಇತ್ತೀಚಿನ ಸಂಶೋಧನೆಗಳಿಂದ ಕಂಡು ಬಂದಿದೆ. ಹಿಂದುಸ್ತಾನದ ಎಲ್ಲ ಅಡವಿಗಳಲ್ಲಿ ಹುಣಿಸೆಯ ಹಣ್ಣು ಹೆಚ್ಚಿನ ಪ್ರಮಾಣದಲ್ಲಿ ದೊರೆಯುವುದಲ್ಲದೆ ಇದರ ಬೆಲೆಯು ಕೂಡ ಅಗ್ಗವಾಗಿದೆ. ಇದರ ತಾಜಾ ರಸದಲ್ಲಿ 'ಸಿ' ಜೀವಸತ್ತ್ವದ ಪ್ರಮಾಣವು, ನಾರಂಗಿ ರಸಕ್ಕಿಂತ ಇಪ್ಪತ್ತು ಪಟ್ಟು ಹೆಚ್ಚು. ಇದರ ಮೂಲಕ ನೀಲಗಿರಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವ ಹುಣಿಸೆಯ ಹಣ್ಣಿನಿಂದ 'ಸಿ' ಜೀವಸತ್ತ್ವವನ್ನು ತಯಾರಿಸುವ ಕೆಲಸ ಭರದಿಂದ ಸಾಗಿದೆ. ಈ ಜೀವಸತ್ತ್ವವು ಕೆಟ್ಟ ರಕ್ತದಿಂದುಂಟಾಗುವ ಅನೇಕ ರೋಗಗಳಿಗೆ ಬಹಳ ಉಪಯೋಗವುಳ್ಳ ಔಷಧವೆಂದು ಪ್ರಯೋಗಗಳಿಂದ ಸಿದ್ಧವಾಗಿದೆ.

ಸಾಧಾರಣವಾಗಿ ಹೊಸ ಹಣ್ಣು ಮತ್ತು ತರಕಾರಿಗಳನ್ನು ಬೇಯಿಸಿದರೆ ಅಥವಾ ಒಣಗಿಸಿದರೆ ಅವುಗಳಲ್ಲಿದ್ದ 'ಸಿ' ಜೀವಸತ್ತ್ವದ ಬಹುಭಾಗವು ನಷ್ಟವಾಗಿ ಬಿಡುತ್ತದೆ. ಆದರೆ ಹುಣಿಸೆಯ ಹಣ್ಣಿನಲ್ಲಿದ್ದ ಜೀವ ಸತ್ತ್ವವು ಹೆಚ್ಚಾಗಿ ಬೇಯಿಸುವುದರಿಂದಾಗಲಿ ಅಥವಾ ಒಣಗಿಸುವುದರಿಂದಾಗಲಿ ನಷ್ಟವಾಗುವದಿಲ್ಲ. ಕಾರಣ ಇವತ್ತು ನಾಳೆ ಇದು 'ಸ್ಕರ್ವಿ' ಎಂಬ ರೋಗವನ್ನು ದೂರ ಮಾಡುವದಕ್ಕೆ ಹೆಚ್ಚಾಗಿ ಉಪಯೋಗವಾಗಹತ್ತಿದೆ.

ಆಹಾರ ರಕ್ಷಣಾ ವಿಧಾನಗಳು

ಆಹಾರ ಪದಾರ್ಥಗಳನ್ನು (ಅದರಲ್ಲಿ ವಿಶೇಷವಾಗಿ ಹಣ್ಣುಗಳು, ಹಾಲಿನಿಂದ ತಯಾರಾದ ಪದಾರ್ಥಗಳು ಮತ್ತು ಮಾಂಸ ಮುಂತಾದವುಗಳು) ಬಹಳ ದಿನಗಳ ವರೆಗೆ ಕೆಡದ ಹಾಗೆ ನೋಡಿಕೊಳ್ಳುವುದಕ್ಕೆ ಕೈಕೊಳ್ಳಬೇಕಾದ ವಿಧಾನಗಳು ಒಟ್ಟು ಮೂರು. ಮೊದಲನೆ ವಿಧಾನ ಹೆಪ್ಪುಗಟ್ಟಿಸುವುದು. ಪದಾರ್ಥಗಳನ್ನು ಕೆಡದಂತೆ ಇಡಲು ಇದು ಉತ್ತಮವಾದ ಉಪಾಯ. ಇದರಲ್ಲಿ ಆಹಾರ ಪದಾರ್ಥಗಳನ್ನು ತಣ್ಣಗೆ ಮಾಡುವ ಪಾತ್ರೆಯಲ್ಲಿಟ್ಟು (ರೆಫ್ರಿಜರೇಟರ್) ಹೆಪ್ಪುಗಟ್ಟಿಸುತ್ತಾರೆ. ಈ ರೀತಿ ಹೆಪ್ಪುಗಟ್ಟಿಸುವುದರಿಂದ ಆ ಪದಾರ್ಥದ ವಾಸನೆಯಾಗಲಿ ಅಥವಾ ಜೀವಸತ್ತ್ವವಾಗಲೀ ನಾಶವಾಗುವದಿಲ್ಲ.

ಆಹಾರವನ್ನು ರಕ್ಷಿಸುವ ಇನ್ನೊಂದು ವಿಧಾನ ಅದನ್ನು ಒಣಗಿಸುವುದು. ಈ ವಿಧಾನದಲ್ಲಿ ಆಹಾರ ಪದಾರ್ಥಗಳಲ್ಲಿದ್ದ ನೀರನ್ನು ಇಂಗಿಸುತ್ತಾರೆ. ಇದಕ್ಕೆ 'ಡಿಹೈಡ್ರೇಷನ್' (De hydration) ಎಂದು ಹೆಸರು. ಈ ರೀತಿಯಾಗಿ ಆಹಾರ ಪದಾರ್ಥಗಳಿಂದ ನೀರನ್ನು ಇಂಗಿಸುವುದರಿಂದಲೂ ಅಥವಾ ಆಹಾರ ಪದಾರ್ಥಗಳನ್ನು ಒಣಗಿಸುವದರಿಂದಲೂ ಆ ಪದಾರ್ಥವು ಕುಗ್ಗಿ ಗಾತ್ರದಲ್ಲಿ ಕಡಿಮೆ ಆಗಿ ಬಹಳ ದಿನಗಳ ವರೆಗೆ ಕೆಡದಂತೆ ಇರುತ್ತದೆ.

ಆಹಾರವನ್ನು ರಕ್ಷಿಸುವ ಮೂರನೆಯ ವಿಧಾನದಲ್ಲಿ ಆಹಾರ ವಸ್ತುಗಳನ್ನು ಗಾಳಿ ಸೋಂಕದ ಡಬ್ಬಿಗಳಲ್ಲಿ ಮುಚ್ಚಿಡುತ್ತಾರೆ. ಈ ವಿಧಾನಕ್ಕೆ 'ಕ್ಯಾನಿಂಗ್' (Canning) ಎಂದು ಹೆಸರು. ಈ ವಿಧಾನವನ್ನು ಎಲ್ಲಕ್ಕೂ ಮೊದಲು (Nicolas Appart) ಎಂಬಾತನು ೧೮೧೦ ರಲ್ಲಿ ಉಪಯೋಗದಲ್ಲಿ ತಂದನು. ಇದಲ್ಲದೆ ಈತನು "ಸಸ್ಯ ಹಾಗೂ ಪ್ರಾಣಿವರ್ಗದಿಂದ ಲಭಿಸುವ ಆಹಾರ ಸಾಮಗ್ರಿಗಳನ್ನು ರಕ್ಷಿಸುವ ವಿಧಾನಗಳು" ಎಂಬ ಪುಸ್ತಕವನ್ನು ಕೂಡ ಬರೆದನು. ಈ ಪುಸ್ತಕವನ್ನು ಬರೆದುದರಿಂದ ಈತನಿಗೆ ಹನ್ನೆರಡು ಸಾವಿರ ಫ್ರ್ಯಾಂಕುಗಳ ಬಹುಮಾನ ಕೊಡಲಾಯಿತು.



ಧ್ವಜ ರಕ್ಷಣೆ

ಲೇಖಕರು: ಶ್ರೀ ಪು. ತಿ. ನರಸಿಂಹಾಚಾರ್ಯ ಪ್ರಕಾಶಕರು: ಕಾವ್ಯಾಲಯ, ಮೈಸೂರು. ಕ್ರೌನ್ ಆ. ಪ. ೯೪ ಪುಟ, ಬೆಲೆ ರೂ. ೧/೪; (ಕ್ಯಾಲಿಕೊ ೨/೪)

ಈ ಸಂಗ್ರಹದಲ್ಲಿರುವ ಎಂಟು ಕತೆಗಳಲ್ಲಿ ಒಂದು ಹೊರತು ಉಳಿದವೆಲ್ಲ ಸ್ವತಂತ್ರವಾದವುಗಳು. "ಧ್ವಜರಕ್ಷಣೆ," ಸಂಗ್ರಹದ ಮೊದಲನೆ ಕತೆ, ಉತ್ತಮ ಕಲಾಕೃತಿ. ಅತ್ಯಂತ ಅಧೀರ ಸ್ವಭಾವದ ಸರಕಾರಿ ಕಚೇರಿಯ ಟೈಪಿಸ್ಟ ಮುಕುಂದರಾಯನು ಕೂಡ ಪೋಲೀಸರಿಂದ ರಾಷ್ಟ್ರಧ್ವಜಕ್ಕಾಗುತ್ತಿರುವ ಅವಮಾನವನ್ನು ಕಂಡು ಸೈರಿಸಲಾರದೆ ಅದರ ರಕ್ಷಣೆಗಾಗಿ ಪ್ರಾಣ ತೆತ್ತ ಕಥೆ ಹೃದಯಸ್ಪರ್ಶಿಯಾಗಿದೆ. "ವಿಷಾದ ಯೋಗ" ದಲ್ಲಿ ಆಲಸಪ್ರವೃತ್ತಿಯ ಭಗ್ನಮನೋರಥನೊಬ್ಬನ ನಿಸ್ಸಹಾಯ ಮನೋಲಹರಿಗಳ ಚಿತ್ರಣವಿದೆ. "ರಾಗಿಣಿ", ಕಂಟ್ರಾಕ್ಟರ ರಾವುಸಾಹೇಬರ ಮಗಳು, ಅವರ ಕೂಲಿ ಮೇಸ್ತ್ರಿಯಲ್ಲಿ ಅನುರಕ್ತಳಾಗಿ ಓಡಿ ಹೋದುದನ್ನು ಬದಲಿಸುತ್ತಿರುವ ಜಗತ್ತಿನ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದೆ. "ಕಾಲನೊಡನೆ ಅಶ್ವತ್ಥನ ಸ್ಪರ್ಧೆ" ಬಹುಶಃ ಸಂಗ್ರಹದಲ್ಲೆಲ್ಲ ಅತ್ಯುತ್ತಮ ಕಥೆ. ಕಥೆಯೇ ಇಲ್ಲದ ಈ ಕಥೆಯಲ್ಲಿ ಕಾಲನು ಸಹಸ್ರ ರೂಪಗಳಿಂದ ತನ್ನ ಮೇಲೆ ನಡೆಸಿದ ವೈವಿಧ್ಯಪೂರ್ಣ ವಂಚನೆಯನ್ನು—ಎಲ್ಲ ಅವನಿಗೆ ಎಲ್ಲಿಯೋ ಹೋಗದಂತೆ ವಿಘ್ನ ಮಾಡಲು—ಅಶ್ವತ್ಥನು ಬಣ್ಣಿಸಿದ್ದು ಅತ್ಯಂತ ಮಾರ್ಮಿಕವೂ ಸ್ವಾರಸ್ಯಪೂರ್ಣವೂ ಇದೆ. ಯುದ್ಧಕ್ಕೆ ಹೋದವರನ್ನು ಬೆಚ್ಚಗಿಡಲು ಬಡವರಿಂದ ಸಂಗ್ರಹಿಸಿದ ಉಣ್ಣೆಯರಿವೆಗಳನ್ನು ಹೇರಿದ "ಪ್ರದಾನ" ಹಡಗು ಅಗ್ನಿಗಾಹುತಿಯಾದ "ಪ್ರದಾನ" ದ ಕಥೆ ತುಸು ಗುರಿತಪ್ಪಿದ ಕಥೆಯಂತೆ ಕಾಣುತ್ತದೆ. "ಸಿಂಗಿಯೋ ಲವಂಗಿಯೋ" ದಲ್ಲಿ ಸ್ತ್ರೀಯ ಸರ್ವಂಸಹನೆ ಗಂಡಸಿನ ಮಹಾಪರಾಧಗಳನ್ನು ಕ್ಷಮಿಸುವ ರೀತಿಯನ್ನು ಚಿತ್ರಿಸಲಾಗಿದೆ. "ಕೊಳಂದೆ" ಈ ಸಂಗ್ರಹದ ಇನ್ನೊಂದು ಉತ್ತಮ ಕಥೆ. ದೇವಸ್ಥಾನದಲ್ಲಿ ನೀರು ಹೊರುವ ಎಂದೆಂದೂ ಹಿರಿಯನಾಗದ "ಕೊಳಂದೆ" (ಮಗು) ಯ ವಿಚಿತ್ರ ಮನೋವ್ಯಾಪಾರಗಳನ್ನು ಮನಮುಟ್ಟುವಂತೆ ಇದರಲ್ಲಿ ಚಿತ್ರಿಸಿದೆ. "ಬಸವನ ಹುಳು ಮತ್ತು ಗುಲಾಬಿಗಿಡ" ಹ್ಯಾನ್ಸ್ ಆಂಡ ಅರಸನ್ನರ ಕಥೆಯನುವಾದ.

ಈ ಕಥೆಗಳನ್ನೋದಿದ ಮೇಲೆ ಹೊಳೆಯುವ ಒಂದು ಮಾತೆಂದರೆ, ಶ್ರೀ ಪು. ತಿ. ನ. ಅವರು ಪ್ರಾಮುಖ್ಯತಃ ಕವಿಗಳು ಮತ್ತು ಆದ್ಯಂತವೂ ಕವಿಗಳು, ಎಂಬದು. ಕಥೆ ಬರೆಯುವಾಗಲೂ ಅವರು ತಮ್ಮ ಕವಿಯ ವ್ಯಕ್ತಿತ್ವವನ್ನು ಹಿನ್ನೆಲೆಗೆ ತಳ್ಳಲಾರದೆ ಹೋಗಿದ್ದಾರೆ. ಉತ್ತಮ ಕಥಾಕಲಾಕೃತಿಯ ಓಜಸ್ಸು ಮನೋವ್ಯಾಪಾರಗಳ ಸೂಕ್ಷ್ಮ, ವಿಸ್ತೃತ ಪೃಥಕ್ಕರಣದಿಂದ ಬೆಳೆಯುವದಾದರೂ ಶಬ್ದವನ್ನು ಕಾಮನಬಿಲ್ಲು ಮಾಡುವ ಕವಿತ್ವದ ಪ್ರಯೋಗ ಕಥೆಯಲ್ಲಿಯೂ ನಡೆದರೆ ಅದು ಅದರ ಸ್ವಾರಸ್ಯವನ್ನು ತೆಳ್ಳಗೆ ಮಾಡಿಬಿಡುವದು. ಈ ಕಥೆಗಳಲ್ಲಿ ಕೆಲವದರಲ್ಲಿ ಶ್ರೀ ಆಚಾರ್ಯರಲ್ಲಿರುವ ಕವಿಯೇ ಕಥೆಗಾರನನ್ನು ಮರೆಮಾಡಿ ನಿಂತಿರುವದರಿಂದ ಅವುಗಳ ಪರಿಣಾಮಕಾರಿತ್ವಕ್ಕೆ ಧಕ್ಕೆಯೊದಗಿದೆ. "ವಿಷಾದ ಯೋಗ" ದಲ್ಲಿ ಮುಖ್ಯವಾಗಿ ಇದನ್ನು ಕಾಣಬಹುದು. ಆದರೂ ಈ ಕಥೆಗಳಲ್ಲಿ ಯಾವುದೂ ತಲೆಬೇಸರ ಹಿಡಿಸುವಂತಿದೆಯೆಂದೆಣಿಸಬಾರದು. ಭಾವನಾತ್ಮಕ ಬಲವುಳ್ಳವರಿಗೆ ಇವೆಲ್ಲವೂ ಸರ್ವಾತ್ಮನಾ ರುಚಿಸುವದರಲ್ಲಿ ಸಂಶಯವಿಲ್ಲ. "ಧ್ವಜ ರಕ್ಷಣೆ," "ಕಾಲನೊಡನೆ ಅಶ್ವತ್ಥನ ಸ್ಪರ್ಧೆ," "ಕೊಳಂದೆ" ಗಳು ಈ ಸಂಗ್ರಹದ ಪ್ರಕಾಶನವನ್ನು ಪೂರ್ಣವಾಗಿ ಅಭಿನಂದನೀಯವಾಗಿ ಮಾಡಿವೆ.

ರೋಹಿಣಿ

ಲೇಖಕರು ಶ್ರೀ "ಬಾಲಶಶಿ" ಪ್ರಕಾಶಕರು ಆರ್. ಎನ್. ನ್ಯೂಸ್ ಏಜನ್ಸಿ ೬೬೫ ಚಿಕ್ಕಪೇಟೆ, ಬೆಂಗಳೂರು ನಗರ. ೯೨ ಪುಟ ಬೆಲೆ ೦—೧೨—೦

"ಬಾಲಶಶಿ"ಯವರ ಎಂಟುಕತೆಗಳನ್ನೊಳಗೊಂಡ "ಕೀರ್ತಿಕಿರಣ" ಗ್ರಂಥಮಾಲೆಯ ಏಳನೆ ಕುಸುಮವಾದ ಈ "ರೋಹಿಣಿ" ಯ ಕತೆಗಳಿಗಿಂತ ಅದರ ಹೊರಹೊದಿಕೆಯ ಚಿತ್ರ ಮುದ್ದಾಗಿದೆ. ಸಾಮಾನ್ಯವಾದ ವಸ್ತುಗಳನ್ನು ತೀರ ಸಾಮಾನ್ಯವಾದ ಶೈಲಿಯಲ್ಲಿ, ರೀತಿಯಲ್ಲಿ ಇಲ್ಲಿ ಬಣ್ಣಿಸಲಾಗಿದೆ. ಹೆಚ್ಚು ಸಮರ್ಥ ಲೆಕ್ಕಣಿಕೆಯಲ್ಲಿ ಅವುಗಳ ಸತ್ವ, ಸ್ವಾರಸ್ಯ ಹೆಚ್ಚಬಹುದಾಗಿತ್ತು. ಆದರೆ ಪ್ರಸ್ತುತ ಲೇಖಕರ ಕೈಲಿ ಅವು ಸಾಕಷ್ಟು ಬೆಳಗಿಲ್ಲ. ಇಲ್ಲಿ ಕೊಡಲಾದ ಎಂಟು ಕತೆಗಳಲ್ಲಿ "ನೆಟ್ಟದೃಷ್ಟಿ" "ಚಂಚಲದೃಷ್ಟಿ", "ರೋಹಿಣಿ" ಇವು ಮಾತ್ರ ಪುಸ್ತಕರೂಪದಲ್ಲಿ ಬರಲು ಯೋಗ್ಯವಾದ ಕತೆಗಳೆನ್ನಬೇಕು. ಉಳಿದವೆಲ್ಲ ಜೊಳ್ಳು. ಅದರಲ್ಲಿ ಕೂಡ "ನೆಟ್ಟದೃಷ್ಟಿ"ಯ ಮೃಗಾಲಯದ ಅಧಿಕಾರಿಗಳು ಮನುಷ್ಯಜೀವಕ್ಕಿಂತ ಸಿಂಹದ ಬೆಲೆಯನ್ನು ಹೆಚ್ಚಿನದೆಂದು ಬಗೆದುದು ತೀರ ಅಸಂಭವವೆಂದು ಕಾಣುತ್ತದೆ. ಲೇಖಕರು ಆ ಸನ್ನಿವೇಶದ ಪರಿಣಾಮಕಾರಿ ಕತೆಯನ್ನು ಹೆಚ್ಚಿಸಲು ಬೇರಾವ ಬಗೆಯಾಗಿಯೋ ಇದನ್ನು ತಿರುಗಿಸಬಹುದಾಗಿತ್ತು. ಆದರೂ ಪ್ರಯತ್ನಶೀಲತೆ, ಹೆಚ್ಚು ಏಕಾಗ್ರತೆಗಳಿಂದ ಲೇಖಕರು ಉತ್ತಮ ಕತೆಗಾರರಾಗಬಲ್ಲರೆಂಬುದು ಈ ಕಥೆಗಳು ಹೇಳುತ್ತವೆ.

ವಿಜಯಾ

ಮೂಲ: ಶರಚ್ಚಂದ್ರ ಚತರ್ಜಿ ಅನುವಾದ ಮ. ಗ. ಶೆಟ್ಟಿ, ಅಂಕೋಲಾ ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ೧೫೨ ಪುಟ ರೂ. ೧-೮

ಪ್ರತಿಭಾ ಗ್ರಂಥಮಾಲೆಯ ಮೂರನೆ ವರ್ಷದ ೨ ನೇ ಕಿರಣವಾಗಿ ಈ ಪುಸ್ತಕ ಬೆಳಕು ಕಂಡಿದೆ. ಪುನಃ ಸ್ತ್ರೀಚರಿತ್ರದ ದುರುಹ ಚಲನವಲನವನ್ನು ಮೂಲವಾಗಿಟ್ಟುಕೊಂಡ ಇಲ್ಲಿ ಸುಂದರ ಕಾದಂಬರಿಯೊಂದನ್ನು ಹೆಣೆದಿರುವರು. ಆದರೆ ಸಾಮಾನ್ಯವಾಗಿ ಮಾಡುವಂತೆ ಕಥೆಯನ್ನು ವಿಷಾದಾಂತವಾಗಿ ಮಾಡದೆ ವಿವಾಹಾಂತವಾಗಿ ಮಾಡಿದ್ದೊಂದು ವೈಶಿಷ್ಟ್ಯ. ಅನುವಾದ ಮಾಡುವಲ್ಲಿ ಶ್ರೀ ಶೆಟ್ಟಿಯವರು ಹಿಂದೀಗಿಂತ ಸುಧಾರಿಸಿದ್ದಾರೆ. ಆದರೂ ಕೊಂಕಣಿ ಭಾಷೆಯ ಪ್ರಭಾವ ಫಲವಾದ "ಅವನಿಗೆ ಹೊಡೆ" ಎಂಬ ಬಗೆಯ ಪ್ರಯೋಗಗಳಿಂದ ಪೂರ್ಣವಾಗಿ ತಪ್ಪಿಸಿಕೊಳ್ಳುವದು ಇನ್ನೂ ಅವರಿಗೆ ಸಾಧ್ಯವಾಗಿಲ್ಲ. ಶರಚ್ಚಂದ್ರರ ರತ್ನಭಾಂಡಾರವನ್ನು ಒಡೆದು ಕನ್ನಡಕ್ಕೆ ಇನ್ನೊಂದು ರತ್ನವನ್ನು ಕೊಟ್ಟದ್ದಕ್ಕೆ ಅನುವಾದಕರೂ ಪ್ರಕಾಶಕರೂ ಧನ್ಯವಾದಾರ್ಹರು. ಆದರೆ ಅನ್ಯಭಾಷಾ ಲೇಖಕರ ಕೃತಿಗಳ ಅನುವಾದವನ್ನು ಕೊಡುವಲ್ಲಿ ಒಂದು ಧೋರಣೆಯನ್ನನುಸರಿಸಿ ಆಯ್ಕೆ ಮಾಡುವದೊಳಿತಲ್ಲವೆ ? ಕನ್ನಡದಲ್ಲಿ ಈಗ ಬರುವ ಅನುವಾದಗಳನ್ನು ನೋಡಿದರೆ ಶರತ್‌ಬಾಬು ಹೊರತು ಬಂಗಾಲದಲ್ಲಿ ಉತ್ತಮ ಕಾದಂಬರೀಕಾರರೇ ಇಲ್ಲವೇನೋ ಎನಿಸುವಂತಿದೆ. ಇತ್ತ ಬಹುಭಾಷಾಭಿಜ್ಞರೂ ಅನುವಾದಕರೂ ಗಮನಿಸುವದೊಳಿತು.

ಸಾವಿನ ಮೇಜವಾನಿ

ಲೇಖಕರು; ಶ್ರೀ ಪಾಟೀಲ ಪುಟ್ಟಪ್ಪ. ಪ್ರಕಾಶಕರು: ಕರ್ನಾಟಕ ಸಾಹಿತ್ಯಮಂದಿರ, ಧಾರವಾಡ. ೧೧೫ ಪುಟ ರೂ. ೧|೬.

ಈ ಪುಸ್ತಕದ ಆರು ಕತೆಗಳಲ್ಲಿ ಒಂದಾದರೂ ಮನಮುಟ್ಟುವ ಒಂದೇ ಒಂದು ಕಥೆಯಾದರೂ ಇದೆಯೇನೆಂದು ಅರಸಿ ಪ್ರಕೃತ ವಿಮರ್ಶಕನು ನಿರಾಶನಾದನೆಂಬ ಕಠೋರ ಸತ್ಯವನ್ನು ಹೇಳದೆ ವಿಧಿಯಿಲ್ಲವಾಗಿದೆ. ಈ ಆರರಲ್ಲಿ ಐದು ಕತೆಗಳು ಸಮಾಜದ ದಲಿತ ಜನಸಾಮಾನ್ಯದ ಜೀವನದ ದುರಂತತೆಯನ್ನು ಬಣ್ಣಿಸಲು ಹೆಣಗಿವೆ. ಉಳಿದುದೊಂದು ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ಹೆಣೆದುದು. ಆದರೆ ಅವುಗಳಲ್ಲಿ ಯಾವುದೊಂದೂ ಕತೆಯಿದೆಂದೆನಿಸುವ ಹಾಗಿಲ್ಲ. ಶ್ರೀ ಪುಟ್ಟಪ್ಪನವರ ದಲಿತ ಬಾಂಧವ್ಯ, ಸಹಾನುಭೂತಿ, ಅಭಿನಂದನಾರ್ಹವಾಗಿದೆ. ಆದರೆ ದಲಿತ-ದಲಿತ ಎಂಬ ಸಹಾನುಭೂತಿಯೊಂದೇ ಉತ್ತಮ ಕತೆಯನ್ನು ಉಂಟುಮಾಡಲಾರದೆಂದು ಶ್ರೀ ಪುಟ್ಟಪ್ಪನವರಿಗೆ ತಿಳಿಯದ ಮಾತಲ್ಲ. ಈ ಕಥೆಗಳಲ್ಲಿ ಅತ್ಯಂತ ಪ್ರಮುಖವಾಗಿ ಎದ್ದು ಕಾಣುವದು ಏಕಾಗ್ರತೆಯ ಅಭಾವ. ಅನಾವಶ್ಯಕವಾಗಿ ಮಾತು ಬೆಳೆಸಿಕೊಂಡು ಹೋಗಿ ಸನ್ನಿವೇಶವನ್ನು ಹಿಡಿತ ತಪ್ಪಿಸಿ ಉದ್ದಿಷ್ಟವನ್ನು ಮುಸುಕು ಮಾಡುವಷ್ಟು ಮಾತುಗುಳಿತನದ ಮೋಹ ಶ್ರೀ ಪುಟ್ಟಪ್ಪನವರಿಗಿದೆ. "ಬಹುಶಃ ಏನಿದ್ದಿರಬಹುದಾಗಿದ್ದೀತು?" ಎಂಬೀ ಬಗೆಯ ವಿಚಿತ್ರ ಪ್ರಯೋಗಗಳು ಮೊದಲ ಪುಟದಲ್ಲಿಯೇ ಕಣ್ಣು ಕುಕ್ಕುತ್ತವೆ. ಲೇಖಕರು ಹೆಚ್ಚು ಸಂಯಮ, ಏಕಾಗ್ರತೆಗಳನ್ನು ತೋರಿಸದಿದ್ದರೆ ಅವರು ಇದಕ್ಕಿಂತ ಹೆಚ್ಚು ಯಶಸ್ವಿ ಕತೆಗಾರರಾಗುವದು ಅಸಂಭವವೇ ಸರಿ.

ಸಂಗೀತಾಚಾರ್ಯ

ಲೇಖಕರು: ಎಸ್. ಎನ್. ರಾವ ಹರಿದಾಸ, ಮಾರಾಟದ ಪೂರ್ಣಾಧಿಕಾರಿಗಳು ರಾಮಾಶ್ರಯ ಬುಕ್‌ಡಿಪೋ, ಧಾರವಾಡ ೧೨೯ ಪುಟ ರೂ. ೧-೪—೦.

ಈ ಪುಸ್ತಕದಲ್ಲಿ ೨೦ ಹಿಂದುಸ್ತಾನಿ ರಾಗಗಳಲ್ಲಿ ೨೦ ಕನ್ನಡ ಹಾಡುಗಳನ್ನು ಸ್ವರ ಪ್ರಸ್ತಾರ ಸಹಿತವಾಗಿ ಕೊಡಲಾಗಿದೆ. ಹಾಡುಗಳೆಲ್ಲ ಸ್ವಯಂ ಲೇಖಕರೇ ಬರೆದವುಗಳು ಮತ್ತು ಅವು ಹಿಂದುಸ್ತಾನಿ ರಾಗಗಳಲ್ಲಿ ಕನ್ನಡ ಹಾಡುಗಳು ಎಷ್ಟು ಅಸ್ವಾಭಾವಿಕವಾಗಿ ಕಾಣುವವೆಂಬುದಕ್ಕೆ ನಿದರ್ಶನಪ್ರಾಯವಾಗಿವೆಯೆಂದು ಹೇಳಬಹುದು. ಆದರೆ ಈ ಮಾತು ಸಂಗೀತಾಭ್ಯಾಸಿಗಳಿಗೆ ಈ ಪುಸ್ತಕ ನೀಡಬಲ್ಲ ಪ್ರಯೋಜನವನ್ನು ಕಡಿಮೆಮಾಡಿದೆಯೆಂದಲ್ಲ. ಹಾರ್ಮೋನಿಯಂ ಕಲಿವ ಹುಡುಗ ಹುಡುಗೆಯರಿಗೆ ಇವು ಬಹಳ ಉಪಯುಕ್ತವಾಗಿವೆ. ಇದು ಈ ಪುಸ್ತಕದ ದ್ವಿತೀಯ ಆವೃತ್ತಿಯೆಂಬುದು ಇದರ ಜನಪ್ರಿಯತೆಯ ದ್ಯೋತಕವಾಗಿದೆ.

ಕರ್ನಾಟಕದಲ್ಲಿ ಮುಖ್ಯಮಂತ್ರಿಗಳು

ಮುಂಬಯಿ ಪ್ರಾಂತದ ಮುಖ್ಯ ಮಂತ್ರಿಗಳಾದ ಶ್ರೀ ಬಾಳಾಸಾಹೇಬ ಖೇರರು ಇದೇ ೧೮--೧೯ ಎರಡು ದಿನ ಬಾಗಲಕೋಟೆ ವಿಜಾಪುರಗಳನ್ನು ಸಂದರ್ಶಿಸಿದ ಸುದ್ದಿ ಸಂಗತಿಗಳನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಪ್ರಕಟಿಸಿದ್ದೇವೆ. ಮಂತ್ರಿಗಳು ಸಂಚಾರದಲ್ಲಿ ಕನ್ನಡಿಗರಿಗೆ ಮಹತ್ವದ ಆಶ್ವಾಸನ ಕೊಟ್ಟಿರುವರು. ಅನೇಕ ವರ್ಷಗಳಿಂದ ಹಿಂದೊಡಲ್ಪಟ್ಟ ಕರ್ನಾಟಕವು ಮುಂದೆ ಬರುವಂತೆ ಎಲ್ಲ ರೀತಿಯಿಂದ ಪ್ರಯತ್ನಿಸುವುದಾಗಿ ಹೇಳಿರುವರು. ಇಷ್ಟು ದಿನಗಳ ವರೆಗೆ ಬೇರೆ ಭಾಗಗಳು ಕರ್ನಾಟಕದ ಋಣ ತಿಂದಿದ್ದು ಅದನ್ನೀಗ ತೀರಿಸುವದಾಗಿಯೂ ಸ್ವಲ್ಪ ತಾಳ್ಮೆಯಿಂದ ಕೆಲಸ ಮಾಡಿಸಿಕೊಳ್ಳಬೇಕೆಂದೂ ಕೇಳಿಕೊಂಡಿರುವರು. ಕರ್ನಾಟಕವು ಆರ್ಥಿಕ ಶೈಕ್ಷಣಿಕ, ಒಕ್ಕಲತನ ಮೊದಲಾದ ಎಲ್ಲ ದೃಷ್ಟಿಯಿಂದ ಹಿಂದೆ ಬಿದ್ದಿದೆ. ಒಕ್ಕಲತನದ ಅಭಿವೃದ್ಧಿಗಾಗಿ ನೀರಾವರಿ ಯೋಜನೆಗಳಿಲ್ಲ, ಒಕ್ಕಲತನ, ವೈದ್ಯಕೀಯ, ಎಂಜಿನಿಯರಿಂಗ ಮೊದಲಾದ ಕಾಲೇಜುಗಳಿಲ್ಲ. ಪುಣೆ ಮುಂಬಯಿಗಳಿಗೆ ನಮ್ಮ ವಿದ್ಯಾರ್ಥಿಗಳು ಹೋಗಬೇಕಾಗುತ್ತವೆ. ಶ್ರೀಮಂತರು ಮಾತ್ರ ಹೋಗಬಹುದು, ಹೋದರೂ ಪ್ರವೇಶ ದೊರೆಯುವದೊ ಇಲ್ಲವೊ ನಿಯಮವಿಲ್ಲ. ಸಾಮಾನ್ಯ ಜನರು ಹಣದ ಅಭಾವಕ್ಕಾಗಿ ಹೋಗುವದಿಲ್ಲ. ನೀರಾವರಿ ಇಲ್ಲದ್ದಕ್ಕಾಗಿ ಸಾಕಷ್ಟು ಮಳೆ ಬೀಳದ ಕರ್ನಾಟಕದ ಭಾಗಗಳಲ್ಲಿ ಆಗಾಗ ಬರ ಬೀಳುವುದು. ಜನ ಬಗೆಬಗೆಯಿಂದ ಬಳಲಬೇಕಾಗುವುದು. ಕನ್ನಡಿಗರು ಅನೇಕ ಸಲ ಕೇಳಿಕೊಂಡಂತೆ ಇವೆಲ್ಲ ಕೊರತೆಗಳನ್ನು ಹೋಗಲಾಡಿಸುವ ಉಪಾಯಗಳನ್ನು ಕೂಡಲೆ ಕೈಕೊಳ್ಳಬೇಕು. ಎಲ್ಲಕ್ಕೂ ಮಹತ್ವದ್ದಾದ ಕರ್ನಾಟಕ ಸ್ವತಂತ್ರ ಪ್ರಾಂತ ಕನ್ನಡಿಗರಿಗೆ ಸಿಕ್ಕುವಂತೆ ಮುಖ್ಯಮಂತ್ರಿಗಳು ಸರ್ವರೀತಿಯಿಂದ ಸಹಾಯ ಸಲ್ಲಿಸಬೇಕು. ಮುಖ್ಯಮಂತ್ರಿಗಳ ಆಶ್ವಾಸನ ಬೇಗನೆ ಕೃತಿಯಲ್ಲಿ ಇಳಿಯಲೆಂದು ಹಾರೈಸುತ್ತೇವೆ.

ಮಾತೃಭಾಷಾ ಮಾಧ್ಯಮ

ಮಾತೃಭಾಷೆಯ ಮುಖಾಂತರ ಶಿಕ್ಷಣ ಕೊಡಬೇಕಾದುದು ಶಿಕ್ಷಣ ಶಾಸ್ತ್ರದ ಮೂಲಭೂತ ನಿಯಮ. ಸ್ವತಂತ್ರ ರಾಷ್ಟ್ರಗಳಲ್ಲಿ ಈ ನಿಯಮವೆ ಎಲ್ಲೆಡೆ ಪಾಲಿಸಲ್ಪಡುತ್ತದೆ. ಆದರೆ ನಮ್ಮ ಹಿಂದುಸ್ತಾನವನ್ನು ಪರಕೀಯ ಬ್ರಿಟಿಶ್‌ರು ಹೇಗೋ ಗೆದ್ದು ಆಳುತಿರುವುದರಿಂದ ತಮ್ಮ ಆಳಿಕೆಗೆ ಸಹಾಯವಾಗುವುದಕ್ಕೆಂದು ಇಲ್ಲಿಯ ಶಿಕ್ಷಣ ಕ್ರಮವ ಗೊತ್ತುಪಡಿಸಿದರು. ಇಂಗ್ಲಿಷಿನಂಥ ಪರಕೀಯ ಮಾಧ್ಯಮದ ಮೂಲಕ ಶಿಕ್ಷಣ ಕೊಡಹತ್ತಿದರು. ಇದರಿಂದ ವಿದ್ಯಾರ್ಥಿಗಳಿಗೆಷ್ಟೊಂದು ತೊಂದರೆಯಾಗುತಿರುವುದೆಂಬುದು ಶಿಕ್ಷಣ ತಜ್ಞರ ಅನುಭವದ ಮಾತಾಗಿದೆ. ಮಹಾತ್ಮಾ ಗಾಂಧಿ ಮೊದಲಾದ ರಾಷ್ಟ್ರಮುಖಂಡರು ವಿಶೇಷ ಪ್ರಚಾರದ ಮೂಲಕ ಹಿಂದುಸ್ತಾನದಲ್ಲಿಯೂ ಮಾತೃಭಾಷಾ ಮಾಧ್ಯಮ ಅಂಗೀಕೃತವಾಗಹತ್ತಿದೆ. ಕೊಯಿಮತ್ತೂರ ಇಂಟರ ಮಿಜಿಯೇಟ ಕಾಲೇಜಿನಲ್ಲಿ ಸೇಲಂ ಮೊದಲಾದ ಕಡೆಗೆ ಈ ಮಾತೃಭಾಷಾ ಮಾಧ್ಯಮ ಜಾರಿಯಲ್ಲಿ ತರಲಾಗಿದೆ. ಇನ್ನಿತರ ಕಡೆಗಳಲ್ಲಿ ಈ ಉಪಕ್ರಮವನ್ನು ಕೈಕೊಳ್ಳಲಿರುವರು. ಮದ್ರಾಸ ಸರಕಾರದ ಈ ಉದಾಹರಣೆಯನ್ನು ಉಳಿದ ಪ್ರಾಂತದವರೂ ಅನುಸರಿಸಬೇಕು. ಉಭಯ ಭಾಷಾ ಪಂಡಿತರು ಅವಶ್ಯಕವಾದ ಪುಸ್ತಕಗಳನ್ನು ಕೂಡಲೆ ಪ್ರಸಿದ್ಧಿಸಬೇಕು. ಅಡಚಣಿಗಳೆಷ್ಟೇ ಇದ್ದರೂ ಮಾತೃಭಾಷಾ ಮಾಧ್ಯಮವನ್ನೆ ಇಟ್ಟುಕೊಂಡು ಮಕ್ಕಳ ಶಿಕ್ಷಣ ಪ್ರಗತಿಯನ್ನು ಸಾಧಿಸಬೇಕೆಂದು ಅಗ್ರಹಪಡಿಸುತ್ತೇವೆ.

ಲಂಚ ವಿರೋಧಕ ಪಡೆ

ಈ ಮೊದಲು ಆಶ್ವಾಸಿಸಿದಂತೆ ಮುಂಬಯಿ ಸರಕಾರದವರು ಪುಣೆ ಅಹಮದಾಬಾದ ಬೆಳಗಾವಿಗಳಲ್ಲಿ ಲಂಚ ವಿರೋಧಕ ಅಧಿಕಾರಿಗಳನ್ನು ನೇಮಿಸಿದ್ದಾರೆ. ಪೋಲೀಸ ಇನಸ್ಪೆಕ್ಟರ ಜನರಲ್‌ರ ಅಡಿಶನಲ್ ಅಸಿಸ್ಟಂಟರಾದ ಶ್ರೀ ವಿ. ಜಿ.

ಸಂಪಾದಕೀಯ* * * * * * * * *

ಟೀಕೆ-ಟಿಪ್ಪಣಿಗಳು

ಕಾನಿಟಕರರು ಇಡೀ ಮುಂಬಯಿ ಪ್ರಾಂತದ ಅಧಿಕಾರಿಗಳಾಗಿರುವರು. ಶ್ರೀ ಎನ್. ಟಿ. ಭೋಸಲೆಯವರು ಬೆಳಗಾವಿ ವಿಭಾಗದ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿರುವರು. ಲಂಚದ ಸಂಬಂಧದಲ್ಲಿ ತಕರಾರುಗಳನ್ನು ಕಳಿಸುವವರು ಈ ಅಧಿಕಾರಿಗಳ ಕಡೆಗೆ ಕಳಿಸಬೇಕೆಂದು ಸೂಚಿಸಲಾಗಿದೆ. ಬೇರೆ ಬೇರೆ ಕಾರಣಗಳಿಗಾಗಿ ಲಂಚಗುಳಿತನವು ಎಲ್ಲ ಶಾಖೆಗಳಲ್ಲಿ ತಲೆಯೆತ್ತಿದೆ. ತಮ್ಮ ಕೆಲಸ ಮಾಡಿಕೊಳ್ಳಲು ಜನರು ಲಂಚ ಕೊಡುತಿರುವರು. ಲಂಚ ಕೊಡುವುದು ಲಂಚ ತೆಗೆದುಕೊಳ್ಳುವಷ್ಟೇ ಅಪರಾಧವೆಂಬುದು ಸ್ಪಷ್ಟವಿದ್ದರೂ ಅನಿರ್ವಾಹವೆಂದು ಜನ ಲಂಚ ಕೊಡಲುದ್ಯುಕ್ತರಾಗುವರು. ಇದನ್ನು ತಡೆಯಬೇಕಾದರೆ ಸರಕಾರದ ದಕ್ಷತೆ ಅತ್ಯವಶ್ಯವಾಗಿದೆ. ಲಂಚದ ಸಂದರ್ಭಗಳೆ ಉಂಟಾಗದಂತೆ ನೋಡಿಕೊಳ್ಳುವುದು ಮೊದಲನೆಯ ಕೆಲಸ. ಅಲ್ಲದೆ ಲಂಚದ ಸಂದರ್ಭಗಳು ಕಂಡು ಬಂದಲ್ಲಿ ಉಗ್ರೋಪಾಯಗಳನ್ನು ಕೈಕೊಳ್ಳಬೇಕಾದುದು ಅಷ್ಟೇ ಮಹತ್ವದ್ದಾಗಿದೆ. ಇನ್ನು ಲಂಚದ ತಕರಾರು ಮಾಡುವವರಾದರೂ ಸಾಕಷ್ಟು ಆಧಾರಗಳನ್ನಿಟ್ಟುಕೊಂಡು ಮಾಡಬೇಕು. ಹಾರಿಕೆಯ ಸುದ್ದಿಗಳನ್ನು ನಂಬಿ ತಕರಾರು ಮಾಡಬಾರದು. ಈಗ ನಿಯಮಿಸಲ್ಪಟ್ಟವರು ಕೇವಲ ಅಧಿಕಾರಿಗಳಿದು ಅಧಿಕಾರೇತರರ ಸಮಿತಿ ನಿಯಮಿಸಿಲ್ಲೆಂಬ ತಕರಾರು ಅಲ್ಲಲ್ಲಿ ಕೇಳಬರುತ್ತದೆ. ಆದರೆ ಸರಕಾರದವರು ನೇಮಿಸಲ್ಪಟ್ಟ ಅಧಿಕಾರಿಗಳ ಮೇಲೆ ಹೆಚ್ಚು ಲಕ್ಷ್ಯವಿಟ್ಟರೆ ಅವರಿಂದ ಲಂಚದ ಪ್ರಕರಣಗಳು ಹೊರಬೀಳುವವೆಂಬಲ್ಲಿ ಸಂದರ್ಭವಿಲ್ಲ. ಒಂದು ವೇಳೆ ಈಗಿನ ಏರ್ಪಾಡಿನಿಂದ ಉದ್ದಿಷ್ಟ ಸಾಧಿಸದಿದ್ದರೆ ಸರಕಾರೇತರ ಸದಸ್ಯರ ಸಮಿತಿಗಳನ್ನೂ ನೇಮಿಸಬಹುದು. ಆದರೆ ಅಲ್ಲಿಯ ವರೆಗೆ ಸಾರ್ವಜನಿಕ ಕಾರ್ಯಕರ್ತರು ಸ್ವಸ್ಥ ಕೂಡ್ರದೆ ಈ ಅಧಿಕಾರಿಗಳೊಡನೆ ಎಲ್ಲ ರೀತಿಯಿಂದ ಸಹಕರಿಸಿ ಲಂಚದ ಹಾವಳಿಯನ್ನು ತಪ್ಪಿಸಬೇಕು. ಈ ಅಧಿಕಾರಿಗಳಾದರೋ ಕೇವಲ ತಮ್ಮ ಕಡೆಗೆ ಬಂದ ತಕರಾರುಗಳ ಬಗ್ಗೆಯಷ್ಟೇ ವಿಚಾರ ಮಾಡದೆ ತಾವೂ ತಮ್ಮ ಸಹಕಾರಿಗಳ ಸಹಾಯದಿಂದ ಲಂಚ ತೆಗೆದುಕೊಂಡವರನ್ನು ಬಯಲಿಗೆಳೆಯಬೇಕು. ಅವರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ಇಂಥ ಸಂದರ್ಭಗಳನ್ನು ಹುಡುಕಿ ತೆಗೆಯಲು ಈ ಅಧಿಕಾರಿಗಳ ಹತ್ತರ ಸಾಕಷ್ಟು ಸಾಧನ ಸಾಮುಗ್ರಿಗಳುಂಟು. ಹೀಗೆ ಎಲ್ಲ ಬಗೆಯ ಪ್ರಯತ್ನದಿಂದ ಲಂಚಗುಳಿತನವು ನಿರ್ಮೂಲವಾಗಿ ಜನರ ಸಂಕಷ್ಟಗಳು ನಿವಾರಿಸಲ್ಪಡಲೆಂದು ಬಯಸುತ್ತೇವೆ.

ಹಿಂಸಾಚಾರಿಗಳಿಗೆ ಎಚ್ಚರಿಕೆ

ಮುಂಬಯಿ ಸರಕಾರದ ಗೃಹಮಂತ್ರಿಗಳಾದ ಶ್ರೀ ಮುರಾರಜಿ ದೇಸಾಯರು ಸಾತಾರಾ ಜಿಲ್ಹೆಯ ಸಂಚಾರದಲ್ಲಿ ಹಿಂಸಾಚಾರಿಗಳಿಗೆ ಎಚ್ಚರಿಕೆ ಕೊಡುವ ಮಾತುಗಳನ್ನು ಹೇಳಿರುವರು ಸಾತಾರಾ ಜಿಲ್ಹೆಯು ೧೯೪೨ ನೇ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿ ಗ್ರಾಮ ಸಮಿತಿಗಳ ಮೂಲಕ ನ್ಯಾಯದಾನ ಮೊದಲಾದ ಕಾರ್ಯಗಳನ್ನು ಮಾಡಿದ್ದುಂಟು. ಇದಕ್ಕಾಗಿ ಕೆಲ ಸಂದರ್ಭಗಳಲ್ಲಿ ಹಿಂಸಾಚಾರವೂ ಆದುದುಂಟು. ಇದರ ದುರ್ಲಾಭ ಪಡೆದು ಕೆಲವು ಪುಂಡರು ಹೆಚ್ಚಾಗಿ ಹಿಂಸಾಚಾರ ಮಾಡಿದ್ದುಂಟು. ಮಂತ್ರಿಗಳು ಈ ಸಂದರ್ಭದಲ್ಲಿ ಹೇಳುತ್ತ ಕೆಲ ಕಾಂಗ್ರೆಸ್ಸಿಗರು ಇನ್ನೂ ಹಿಂಸೆಯಲ್ಲಿ ವಿಶ್ವಾಸವಿಟ್ಟ ಬಗ್ಗೆ ವಿಷಾದ ಪ್ರದರ್ಶಿಸಿ ದೇಶಭಕ್ತಿಪ್ರೇರಿತರಾಗಿ ಅಂಥ ಕೃತಿ ಮಾಡಿದಾಗ್ಯೂ ಇನ್ನು ಮುಂದೆ ಅವುಗಳನ್ನು ಕ್ಷಮಿಸುವದಿಲ್ಲೆಂದು ಹೇಳಿದರು. ಚಳವಳಿಯ ನೆವ ಮುಂದೆ ಮಾಡಿ ನಡೆಸಿದ ಹಿಂಸಾಚಾರಗಳನ್ನು ಕೂಡಲೆ ತಡೆಯುವದು ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ. ಗೃಹ ಮಂತ್ರಿಗಳು ಕೂಡಲೆ ಇತ್ತ ಗಮನಿಸಿ ಸಕಾಲಿಕ ಎಚ್ಚರಿಕೆ ಕೊಟ್ಟದ್ದು ಅಭಿನಂದನೀಯವಾಗಿದೆ. ಕ್ರಾಂತಿಕಾಲದಲ್ಲಿ ಏನೇ ಸಂಭವಿಸಿರಬಹುದಾದರೂ ಸದ್ಯದ ಶಾಂತಿ ಸಮಯದಲ್ಲಿ ಅಂಥ ಕೃತಿಗಳನ್ನು ಯಾವ ಸರಕಾರವೂ ಸಹಿಸದು. ಇದನ್ನು ನೆನೆದು ಹಿಂಸಾಚಾರಿಗಳು ಕೂಡಲೆ ತಮ್ಮ ಕಾಯಕಗಳನ್ನು ನಿಲ್ಲಿಸಬೇಕು. ಅಧಿಕಾರಿಗಳೂ ದಕ್ಷರಾಗಿ ಇಂಥ ಕೃತಿ ಮಾಡುವವರನ್ನು ಬಯಲಿಗೆಳೆದು ಜನತೆಗಾಗುತಿರುವ ಕಷ್ಟನಷ್ಟಗಳನ್ನು ನಿವಾರಿಸಬೇಕೆಂದು ಒತ್ತಾಯಪಡಿಸುತ್ತೇವೆ.

ಬೆಲ್ಲದ ಸೀದಾ

ಎಲ್ಲೆಲ್ಲಿಯೂ ಆದ ಬೆಲ್ಲದ ಬೊಬ್ಬಾಟದ ಬಗ್ಗೆ ಕಳೆದ ಸಲ ನಾವು ಬರೆದ ನಂತರ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ಧಾರವಾಡ ಜಿಲ್ಹಾ ಮ್ಯಾಜಿಸ್ಟ್ರೇಟರು ೧೪ ನೇ ತಾರೀಕು ಆಜ್ಞೆಯೊಂದನ್ನು ಪ್ರಸಿದ್ಧಿಸಿ ೨೨೪ ಪೌಂಡು ಮತ್ತು ಅದಕ್ಕಿಂತ ಹೆಚ್ಚು ಬೆಲ್ಲ ಸಂಗ್ರಹವಿದ್ದವರೆಲ್ಲ ತಮಗೆ ತಿಳಿಸಬೇಕೆಂದೂ ತಮ್ಮ ಅಪ್ಪಣೆ ಪಡೆಯದೆ ಯಾರೂ ಬೆಲ್ಲ ಮಾರಬಾರದೆಂದೂ ವಿಧಿಸಿದ್ದಾರೆ. ಅವರ ಅಪ್ಪಣೆಯಂತೆ ಅಧಿಕಾರಿಗಳು ಅಂಗಡಿ ವಖಾರಗಳನ್ನು ಶೋಧಿಸಿ ಬೆಲ್ಲದ ಸಂಗ್ರಹ ಹೊರದೆಗೆದು ಅಪ್ಪಣೆ ಪಡೆಯದೆ ಅದನ್ನು ಮಾರಬಾರದೆಂದು ವಿಧಿಸಿಬಿಟ್ಟಿದ್ದಾರೆ. ೧೪ ನೇ ತಾರೀಕು ಕಾರಹುಣ್ಣಿವೆಯ ದಿನವೆ ಈ ಆಜ್ಞೆ ಹೊರಟಿದ್ದರಿಂದ ಅಂದು ಬೆಲ್ಲ ಯಾರಿಗೂ ಸಿಕ್ಕಲಿಲ್ಲ ಕಾರಹುಣ್ಣಿವೆಯಂಥ ಹಲವೆ ಮಹತ್ವದ ಹಬ್ಬಗಳನ್ನು ಉಲ್ಲಾಸದಿಂದ ಮಾಡುತಿದ್ದ ಒಕ್ಕಲಿಗರಂತೂ ತುಂಬ ನಿರಾಶರಾದರು. ೧೪ ನೇ ತಾರೀಕಿಗೆ ಬೆಲ್ಲ ಜಪ್ತಾಗಿದ್ದರೂ ಈ ವರೆಗೆ ಅದರ ಮಾರಾಟದ ಬಗ್ಗೆ ಯಾವದೇ ಬಗೆಯ ಆಜ್ಞೆ ಹೊರಬೀಳದ್ದರಿಂದ ಜನರಿಗೆ ಬೆಲ್ಲವೆ ಸಿಕ್ಕದಂತಾಗಿದೆ. ಅಲ್ಲದೆ ಸದ್ಯಕ್ಕೆ ಮಳೆಗಾಲವಿದ್ದದ್ದರಿಂದ ಬೆಲ್ಲ ಇಟ್ಟಲ್ಲಿಯೆ ನೀರಾಗಹತ್ತಿ ಬಹಳಷ್ಟು ಸೋರಿ ಹೋಗುವ ಸಂಭವವೂ ಉಂಟು. ಬೆಲ್ಲದ ಕೊರತೆಯ ಈ ಸಮಯದಲ್ಲಿ ಹೀಗೆ ಬೆಲ್ಲ ನಾಶವಾಗಿ ಹೋದರೆ ಅದಕ್ಕೆ ಹೊಣೆಗಾರರಾರು? ಆಹಾರಾಭಾವಕ್ಕಾಗಿ ಯಾರೂ ಸಾಯದಂತೆ ನೋಡಿಕೊಳ್ಳುವುದಾಗಿ ಮುಖ್ಯ ಮಂತ್ರಿಗಳು, ಆಹಾರ ಮಂತ್ರಿಗಳು ಪದೇ ಪದೇ ಆಶ್ವಾಸನ ಕೊಟ್ಟಿರುವರು. ಆದರೆ ಬೆಲ್ಲದಂಥ ಅತ್ಯವಶ್ಯಕ ಪದಾರ್ಥ ಜನತೆಗೆ ಸಿಕ್ಕದಿರುವತ್ತ ಮಂತ್ರಿಗಳ ಲಕ್ಷವನ್ನೆಳೆಯಬಯಸುತ್ತೇವೆ. ಧಾರವಾಡ ಜಿಲ್ಹಾ ಮ್ಯಾಜಿಸ್ಟ್ರೇಟರ್‌ರು ಕೂಡಲೆ ಇತ್ತ ಗಮನಿಸಿ ಬೆಲ್ಲದ ಸೀದಾ ಗೊತ್ತುಪಡಿಸಿ ಸೀದಾ ಅಂಗಡಿಗಳಲ್ಲೊ ವ್ಯಾಪಾರಸ್ಥರಲ್ಲೊ ಬೆಲ್ಲ ಕೊಡುವ ಏರ್ಪಾಡು ಮಾಡಬೇಕಾಗಿ ಅಗ್ರಹಪಡಿಸುತ್ತೇವೆ. ಈ ಟಿಪ್ಪಣಿ ಬರೆಯುವುದಾದ ಬಳಿಕ ಈ ಸಂಬಂಧದಲ್ಲಿ ಧಾರವಾಡ ಜಿಲ್ಹಾಧಿಕಾರಿಗಳು ಪ್ರಕಟನೆಯೊಂದನ್ನು ಹೊರಡಿಸಿ ಬೆಲ್ಲದ ಸೀದಾ ಗೊತ್ತುಪಡಿಸಿದ್ದಾರೆ. ಪ್ರತಿಯೊಂದು ಯುನಿಟ್ಟಿಗೆ ವಾರಕ್ಕೆ ೨ ಔಂಸುಗಳಂತೆ ಬೆಲ್ಲ ಕೊಡಬೇಕೆಂದೂ ಇದೇ ೨೩ ನೇ ತಾರೀಕಿನಿಂದ ಇದು ಜಾರಿಯಲ್ಲಿ ಬರಬೇಕೆಂದೂ ವಿಧಿಸಿದ್ದಾರೆ. ಅಂತೂ ಒಂದು ವಾರದ ನಂತರವಾದರೂ ಜಿಲ್ಹಾಧಿಕಾರಿಗಳು ಬಡವರಿಗೆ ಬೆಲ್ಲದ 'ಚೈನಿ'ಗಾದರೂ ಅವಕಾಶ ಕಲ್ಪಿಸಿ ಕೊಟ್ಟದ್ದು ಅಭಿನಂದನೀಯ. ಆದರೆ ಒಬ್ಬರಿಗೆ ಒಂದು ತಿಂಗಳಿಗೆ ೨ ಸೇರು ಬೆಲ್ಲ ಎಂದರೆ ನಮ್ಮ ಭಾಗದಲ್ಲಿಯಾದರೂ ಬಹಳ ಕಡಮೆಯೆನಿಸುವುದು. ಆದರಲ್ಲಿಯೂ ಬೇರೆಯಾವುದೆ ರುಚಿಕರ ಪದಾರ್ಥ ಸಿಕ್ಕದಿದ್ದವರಿಗೆ ವಿಶೇಷ ಕಷ್ಟ. ಅದುದರಿಂದ ಈ ಸೀದಾ ಪ್ರಮಾಣ ಇಮ್ಮಡಿಸಿದರೆ ಹೆಚ್ಚು ಒಳಿತಾಗುವುದು. ಕಬ್ಬಿನ ಬೆಳೆ ಚೆನ್ನಾಗಿದ್ದು ಸಕ್ಕರೆ, ಬೆಲ್ಲದ ಉತ್ಪಾದನ ಚೆನ್ನಾಗಿ ಆಗಿದೆಂದು ಹೇಳುತಿದ್ದರೂ ಇಂತು ಬೆಲ್ಲದ ಅಭಾವವೇಕೋ ತಿಳಿಯದು. ಈ ಬಗ್ಗೆ ಸರಕಾರದವರು ವಿಚಾರಿಸಬೇಕೆಂದೂ ಬಿನ್ನವಿಸುತ್ತೇವೆ.

ರೇಲ್ವೆ ಕೆಲಸಗಾರರಲ್ಲಿ ಬಿನ್ನಹ

ಅಖಿಲ ಭಾರತ ರೇಲ್ವೆ ಮಹಾಮಂಡಳದವರು ಇದೇ ೨೭ನೇ ಮಧ್ಯರಾತ್ರಿಯಿಂದ ಸಾರ್ವತ್ರಿಕ ಸಂಪು ಹೂಡಬೇಕೆಂದು ನಿರ್ಧರಿಸಿರುವರಷ್ಟೆ. ಆ ದಿನವು ಸಮೀಪಿಸುತ್ತ ಬಂದಂತೆ ದೇಶದಲ್ಲಿಯ ಹೊಣೆಗಾರ ಜನರು ವಿವಂಚನೆಗೊಳಗಾಗಿದ್ದಾರೆ. ಸಂಪು ಹೂಡಿದ್ದಾದರೆ, ಮುಂದೇನು, ಆಹಾರಾಭಾವದಿಂದ ಬಳಲುವವರ ಗತಿಯೇನು ಎಂದು ಚಿಂತಾಕ್ರಾಂತರಾಗಿರುವರು. ರೇಲ್ವೆ ಕೆಲಸಗಾರರ ಬೇಡಿಕೆಗಳೆಷ್ಟೇ ನ್ಯಾಯ್ಯವಾಗಿದ್ದರೂ ಸದ್ಯದ ಪರಿಸ್ಥಿತಿಯಲ್ಲಿ ಅವರು ತಮ್ಮ ನಿರ್ಧಾರವನ್ನು ಮುಂದಕ್ಕೆ ಹಾಕುವುದೆ ಸಮಂಜಸವೆಂದು ಬಹುಸಂಖ್ಯಾಕರ ಅಭಿಪ್ರಾಯ. ಬೇಗನೆ ಸ್ಥಾಪಿತವಾಗಲಿರುವ ರಾಷ್ಟ್ರೀಯ ಸರಕಾರದ ಮೇಲೆ ತಮ್ಮ ಭವಿತವ್ಯದ ಹೊಣೆಯನ್ನು ಹೊರಿಸಿಯಾದರೂ ಕೆಲಸಗಾರರು ಸಂಪನ್ನು ಮುಂದಕ್ಕೆ ಹಾಕಬೇಕೆಂದೆನಿಸುತ್ತದೆ. ರೇಲ್ವೆ ಕೆಲಸಗಾರರು ಮತ್ತು ಸರಕಾರದಲ್ಲಿ ಮತಭೇದವೂ ಹೆಚ್ಚಿಗಿಲ್ಲೆಂದು ಹೇಳಬಹುದಾಗಿದೆ. ವಿಶೇಷತಃ ಸರಕಾರದವರು ರೇಲ್ವೆ ಸ್ಥಾಯೀ ಸಮಿತಿಯವರ ನಿರ್ಣಯಗಳನ್ನು ಸ್ವೀಕರಿಸಿದ್ದರಿಂದ ಈ ಮತಭೇದ ಮತ್ತಷ್ಟು ಕಡಮೆಯಾಗಿದೆ. ರೇಲ್ವೆ ಕೆಲಸಗಾರರು ಮೂರು ತಿಂಗಳ ಬೋನಸ್ಸು ಬೇಡಿದ್ದರೆ ಸ್ಥಾಯೀ ಸಮಿತಿಯವರು ೫ ಕೋಟಿ ರೂಪಾಯಿ ಅಂದರೆ ಕೆಳವರ್ಗದನೋಕರರಿಗೆ ೨ ತಿಂಗಳ ಬೋನಸ್ಸು ಕೊಡಿಸಿದ್ದಾರೆ. ಕೆಲತಿಂಗಳ ಹಿಂದೆಯೆ ಅವರಿಗೆ ತುಟ್ಟಿಭತ್ತೆಯೆಂದು ಕೊಟ್ಟ ೩ ಕೋಟಿ ರೂಪಾಯಿಗಳನ್ನು ಹಿಡಿದರೆ ಒಟ್ಟಿಗೆ ಮೂರು ತಿಂಗಳ ಬೋನಸ್ಸು ಅವರಿಗೆ ಸಿಕ್ಕಂತಾಗುವುದು. ಸ್ಥಾಯೀ ಸಮಿತಿಯವರ ಸಲಹೆಯಂತೆ ಕೊಡುವ ಪರಿಹಾರದಿಂದ ೮ ಕೋಟಿ ರೂಪಾಯಿ ಕೆಲಸಗಾರರಿಗೆ ದೊರೆಯುತಿದ್ದು ಇದರಿಂದ ರೇಲ್ವೆ ಉಳಿತಾಯವೆಲ್ಲ ಕರಗುವುದೆಂದು ಹೇಳಲಾಗಿದೆ. ಸಂಬಳದ ಗ್ರೇಡಿನ ಬಗ್ಗೆಯೂ ಪೇ ಕಮಿಶನ್ ನೇಮಿಸುವರು. ಸರಕಾರದವರು ಅವರ ಸಲಹೆಯಂತೆ ೧೯೪೭ನೇ ಜಾನೇವರಿಯಿಂದ ಸಂಬಳ ಹೆಚ್ಚಿಸಲಾಗುವುದೆಂದು ಸಾರಿದ್ದಾರೆ. ಕೆಲಸಗಾರರನ್ನು ತೆಗಿದಿದ್ದರ ಸಂಬಂಧದಲ್ಲಿದ್ದ ಮತಭೇದ ಮಹತ್ವದ್ದಾಗಿದೆ. ಈ ಪ್ರಶ್ನೆಯನ್ನು ಪಂಚಮಂಡಳಕ್ಕೊಪ್ಪಿಸಿರೆಂದು ಕೆಲಸಗಾರರ ಬೇಡಿಕೆ. ಆದರೆ ಇದು ವ್ಯಾಜ್ಯದ ವಿಷಯವಲ್ಲದ್ದರಿಂದ ಹಾಗೆ ಮಾಡಲು ಬರುವುದಿಲ್ಲೆಂದು ಸರಕಾರದ ಹೇಳಿಕೆ. ಆದರೆ ಈ ಸಂಬಂಧದಲ್ಲಿ ಅಧಿಕಾರೇತರ ಸದಸ್ಯರುಳ್ಳ ಒಂದು ಕಮೀಟಿ ನೇಮಿಸಲು ಸರಕಾರ ಒಪ್ಪಿದೆ. ಅಲ್ಲದೆ ಆದಷ್ಟು ಹೆಚ್ಚು ಜನರನ್ನು ನೋಕರಿಯಲ್ಲುಳಿಸುವ ಧೋರಣವನ್ನು ಸರಕಾರ ಇಟ್ಟುಕೊಂಡಿದೆ. ನಿರ್ವಿಕಾರ ಮನಸಿನಿಂದ ವಿಚಾರ ಮಾಡಿದರೆ ಇದು ಸಮಂಜಸವೆಂದು ಹೇಳಬಹುದು. ಆದರೆ ಇವೆಲ್ಲ ಪರಿಹಾರಗಳು ತಮ್ಮ ದೃಷ್ಟಿಯಿಂದ ಪರಿಪೂರ್ಣವೆನಿಸದಿದ್ದರೂ ನಾವು ಮೇಲೆ ಹೇಳಿದಂತೆ ಬರಲಿರುವ ರಾಷ್ಟ್ರೀಯ ಸರಕಾರಕ್ಕೂ ಒಂದುಬಗೆಯ ಅವಕಾಶ ಕೊಡುವ ದೃಷ್ಟಿಯಿಂದ ಸಂಪನ್ನು ಮುಂದಕ್ಕೆ ಹಾಕಬೇಕೆಂದು ನಾವು ಮಹಾಮಂಡಳದವರನ್ನು ಕೇಳಿಕೊಳ್ಳುತ್ತೇವೆ. ಸಂಪು ಹೂಡುವುದರಿಂದ ಕೋಟ್ಯವಧಿ ಜನರ ಆಹಾರ ಪದಾರ್ಥಗಳ ಹರಿದಾಟಕ್ಕೆ ವ್ಯತ್ಯಯವುಂಟಾಗಿ ಹಾಹಾಕಾರ ಪರಿಸ್ಥಿತಿಯುಂಟಾಗಬಹುದೆಂಬದನ್ನು ರೇಲ್ವೆ ಕೆಲಸಗಾರರು ಈ ಸಂದರ್ಭದಲ್ಲಿ ಮರೆಯತಕ್ಕದ್ದಲ್ಲ. ಈ ಟಿಪ್ಪಣಿ ಬರೆಯುವದು ಮುಗಿವಹೊತ್ತಿಗೆ ಮಹಾಮಂಡಳದವರು ಮತ್ತು ರೇಲ್ವೆ ಬೋರ್ಡಿನವರಲ್ಲಿ ನಡೆದ ಚರ್ಚೆಯ ಪರಿಣಾಮವಾಗಿ ಸಂಪು ಮುಂದರಿವ ಸಂಭವವಿದೆಂದು ಸುದ್ದಿ ಬಂದಿದೆ. ಇದನ್ನೋದಿ ಯಾರಿಗಾದರೂ ಸಂತೋಷವಾಗದಿರದು. ಸರಕಾರದವರು ಈ ಪ್ರಶ್ನೆಯನ್ನು ಹೆಚ್ಚು ಜಾಣತನದಿಂದ ಬಿಡಿಸಬೇಕೆಂದು ಸೂಚಿಸದಿರಲಾರೆವು.

ನಡುಗಾಲ ಸರಕಾರಕ್ಕೆ ವೈಸರಾಯರ ಯೋಜನೆ

ಕಾಂಗ್ರೆಸ—ಲೀಗುಗಳೆರಡರಲ್ಲೂ ಅನಿಶ್ಚಯದ ವಾತಾವರಣ— ಮಹಾತ್ಮರ ಆಕ್ಷೇಪಗಳು— ಕಾಶ್ಮೀರದಲ್ಲಿ ಜವಾಹರರ ಬಂಧನ !

ಅನೇಕ ದಿನಗಳ ಚಿಂತನೆ, ಚರ್ಚೆ ವಿಚಾರವಿನಿಮಯಗಳ ನಂತರ ಕಾಂಗ್ರೆಸ್ಸು ಬ್ರಿಟಿಶ ಮಂತ್ರಿಗಳ ಎರಡೂ ಯೋಜನೆಗಳನ್ನು— ನಡುಗಾಲ ಸರಕಾರ ಮತ್ತು ಘಟನಾ ಸಮಿತಿಯ ಯೋಜನೆಗಳನ್ನ ಕರಾರುಪೂರ್ವಕ ನಿರಾಕರಿಸಲು ತಾ. ೧೪ಕ್ಕೆ ನಿರ್ಧರಿಸಿತು.

ಅದಾದ ನಂತರ ಬ್ರಿಟಿಶ ಮಂತ್ರಿಗಳು, ಕಾಂಗ್ರೆಸ್—ಲೀಗುಗಳಲ್ಲಿ ಒಡಂಬಡಿಕೆಯನ್ನು ತಂದೊಡ್ಡಲು ಅಸಾಧ್ಯವಾದುದರಿಂದ ತಮ್ಮದೇ ಆದ ಯೋಜನೆಯನ್ನ ಹೇರಲು ನಿರ್ಧರಿಸಿದರು. ಅಂತೆಯೇ, ಆದಿತ್ಯವಾರ ದಿನ ವಾಯಿಸರಾಯರು ನಡುಗಾಲ ಸರಕಾರದಲ್ಲಿ ಮಂತ್ರಿಗಳಾಗಲು ೧೪ ಜನ ಮುಂದಾಳುಗಳಿಗೆ ಆಮಂತ್ರಣ ಕಳಿಸಿರುವದಾಗಿ ಘೋಷಿಸಿದರು. ಅವರಲ್ಲಿ ೬ ಜನ ಕಾಂಗ್ರೆಸ್ಸಿಗರು, ೫ ಜನ ಮುಸ್ಲಿಂ ಲೀಗದವರು, ಮೂವರು ಇತರರು ಇರುವರು.

ಮಂತ್ರಿಗಳಾಗಲು ಕರೆಬಂದವರು ಈ ಕೆಳಗಿನವರು:—

ಕಾಂಗ್ರೆಸ್

೧. ಪಂಡಿತ ಜವಾಹರಲಾಲ ನೆಹರೂ
೨. ಸರದಾರ ವಲ್ಲಭಭಾಯಿ ಪಟೇಲ
೩. ಡಾ. ರಾಜೇಂದ್ರ ಪ್ರಸಾದ
೪. ಸಿ. ರಾಜಗೋಪಾಲಾಚಾರ್ಯ
೫. ಹರೇಕೃಷ್ಣ ಮೆಹತಾಬ
೬. ಜನಜೀವನರಾಮ (ಹರಿಜನ)

ಮುಸ್ಲಿಂ ಲೀಗ

೭. ಎಂ. ಎ. ಜಿನ್ನಾ
೮. ನವಾಬಜಾದಾ ಲಿಯಾಕತ ಅಲ್ಲಿಖಾನ
೯. ಖ್ವಾಜಾ ಸರ್ ನಾಜೀಮುದ್ದೀನ
೧೦. ನವಾಬ ಮಹಮದ ಇಸ್ಮಾಯಿಲ
೧೧. ಸರದಾರ ಅಬ್ದುರ್ರಬ ನಿಶ್ತಾರ

ಇತರರು

ಸರದಾರ ಬಲದೇವ ಸಿಂಗ (ಸೀಖ)
ಸರ್ ಎನ್. ಪಿ. ಇಂಜಿನಿಯರ (ಪಾರ್ಸಿ)
ಡಾ. ಜಾನ್ ಮಥಾಯಿ (ಹಿಂದೀಕ್ರಿಶ್ಚನ)

ಸಮಪ್ರಾತಿನಿಧ್ಯವಲ್ಲ, ಸಮಪ್ರಾತಿನಿಧ್ಯ !

“ ಭಾರತದ ಪ್ರಮುಖ ರಾಜಕೀಯ ಪಕ್ಷಗಳೆರಡರ ಮತ್ತು ಕೆಲ ಅಲ್ಪ ಸಂಖ್ಯಾಕರ ನೆರವಿನಿಂದ ನಡುಗಾಲ ಸರಕಾರ ರಚಿಸುವ ಸಂಭಾವ್ಯತೆಯನ್ನು ವಾಯಿಸರಾಯರೂ ಬ್ರಿಟಿಶ ಮಂತ್ರಿಗಳೂ ವಿಚಾರಿಸಿದ್ದರು. ಆದರೆ ಇಂಥ ಸರಕಾರದ ರಚನೆಯ ತಳಹದಿಯನ್ನು ಈ ಎರಡು ಪ್ರಮುಖ ಪಕ್ಷಗಳು ಒಪ್ಪುವದರಲ್ಲಿ ಅನೇಕ ತೊಂದರೆಗಳಿವೆಯೆಂದು ಕಂಡುಬಂದಿದೆ....ಈಗ ಅತಿ ಮಹತ್ವದ ಗುರುತರ ಕಾರ್ಯಗಳನ್ನು ನಿರ್ವಹಿಸುವದಕ್ಕಾಗಿ ಕೇಂದ್ರದಲ್ಲಿ ಬಲಿಷ್ಠವಾದ ಪ್ರಾತಿನಿಧಿಕ ಸರಕಾರ ಸ್ಥಾಪಿಸುವದವಶ್ಯವಾಗಿದೆ'' ಎಂದು ವಾಯಿಸರಾಯರು ತಮ್ಮ ಆದಿತ್ಯವಾರದ ಘೋಷಣೆಯಲ್ಲಿ ಹೇಳಿದ್ದಾರೆ. ನಡುಗಾಲ ಸರಕಾರದ ಯೋಜನೆಯನ್ನು ಕಾಂಗ್ರೆಸ್ಸು ತಿರಸ್ಕರಿಸಲು ಮುಖ್ಯ ಕಾರಣ ಅದರಲ್ಲಿದ್ದ ಸಮಪ್ರಾತಿನಿಧ್ಯದ ತತ್ವ. ಆದರೆ ಈಗ ಸಾರಲ್ಪಟ್ಟಿರುವ ಹೆಸರುಗಳನ್ನು ನೋಡಿದರೆ, ಮತ್ತೆ ಪ್ರಚ್ಛನ್ನ ಸಮಪ್ರಾತಿನಿಧ್ಯವೇ ಅದರಲ್ಲಿ ಕಂಡುಬಾರದೆ ಇಲ್ಲ. ಇದು ಮುಸ್ಲಿಂಲೀಗ—ಕಾಂಗ್ರೆಸ ಸಮಪ್ರಾತಿನಿಧ್ಯವಲ್ಲ, ಸವರ್ಣ ಹಿಂದೂ ಮುಸ್ಲಿಂ ಸಮಪ್ರಾತಿನಿಧ್ಯ. ಹರಿಜನ ಪ್ರತಿನಿಧಿಯನ್ನು ಕಾಂಗ್ರೆಸ್ಸಿನಿಂದಲೇ ಆರಿಸಲಾಗಿದೆಯೆಂಬದಿಷ್ಟೇ ಭೇದ. ಇದರಿಂದ ಕಾಂಗ್ರೆಸ್ಸು ಸಿಟ್ಟುಗೊಂಡೀತೆಂದು ವಾಯಿಸರಾಯರು “ ಜಾತೀಯ ಸ್ವರೂಪದ ಬೇರೆ ಯಾವ ಪ್ರಶ್ನೆಯನ್ನು ಬಿಡಿಸುವದಕ್ಕೆ ಪೂರ್ವಭಾವಿಯಾಗಿ ಈ ನಡುಗಾಲ ಸರಕಾರವನ್ನು ರಚಿಸಲಾಗಿದೆಯೆಂದು ತಿಳಿದುಕೊಳ್ಳಬ್ಬಾರದು.... ಆದಷ್ಟು ಉತ್ತಮ ಸಂಯುಕ್ತ ಸರಕಾರವನ್ನು ರಚಿಸಲು ಮಾಡಿರುವ ಪ್ರಯತ್ನವಿದು. ” ಎಂದು ಹೇಳಿದ್ದಲ್ಲದೆ, ಪ್ರಮುಖ ಪಕ್ಷಗಳೆರಡೂ ಇದನ್ನು ಸ್ವೀಕರಿಸಿದ್ದಾದರೆ “ ಇದೇ ಜೂನ ೨೬ಕ್ಕೆ ನಡುಗಾಲ ಸರಕಾರದ ಉದ್ಘಾಟನೆಯನ್ನು ಮಾಡಿಬಿಡಬೇಕೆಂದು ವ್ಹಾಯಿಸರಾಯರು ಎಣಿಸಿದ್ದಾರೆ,'' ಎಂದು ಆಶೆ ತೋರಿಸಿದ್ದಾರೆ.

ಯೋಜನೆಯ ಗುಣದೋಷ

ಮೇಲೆ ಹೇಳಿದ ಆಶ್ವಾಸನದಿಂದ ಈ ಯೋಜನೆಯಲ್ಲಿರುವ ಮುಖ್ಯ ದೋಷದ ತೀವ್ರತೆ ಕಡಿಮೆಯಾಗಿದೆಯೆಂದೊಪ್ಪಬೇಕು. ಇದೂ ಅಲ್ಲದೆ ಕಾಂಗ್ರೆಸ್ಸು ಕೇಂದ್ರ ಸರಕಾರಕ್ಕೆ ಸೂಚಿಸಿದ ೧೫ ಹೆಸರುಗಳಲ್ಲಿ ೧೨ ಹೆಸರುಗಳು ಅಂಗೀಕೃತವಾಗಿವೆಯೆಂದು ಹೇಳಲಾಗಿದೆ. ಓಡಿಸಾದ ಸದ್ಯದ ಪ್ರಧಾನಮಂತ್ರಿ ಹರಿಕೃಷ್ಣ ಮೆಹತಾಬರ ಹೆಸರು ಮಾತ್ರ ವಾಯಿಸರಾಯರಿಂದಲೇ ಸೇರಿಸಲ್ಪಟ್ಟಿರಬೇಕು. ಅದು ಶರಚ್ಚಂದ್ರರ ಹೆಸರನ್ನು ಹಾರಿಸುವದಕ್ಕಾಗಿಯೇ ಸೇರಿಸಲ್ಪಟ್ಟದೆಯೆಂದು ಗಾಢವಾದ ಶಂಕೆಯಿದೆ. ಆದರೆ ವರಿಷ್ಠರ ಸಲಹೆಯ ಮೇರೆಗೆ ಶ್ರೀ ಮೆಹತಾಬರು ತಮ್ಮ ಓಡಿಸಾದ ಹೊಣೆಯನ್ನು ಜಾರಿಸಿಕೊಳ್ಳಲು ಬರುವದಿಲ್ಲಾದುದರಿಂದ ವಾಯಿಸರಾಯರ ಆಮಂತ್ರಣವನ್ನು ಅಂಗೀಕರಿಸಲು ನಿರಾಕರಿಸಿದ್ದಾರೆ. ಶ್ರೀ ಶರಚ್ಚಂದ್ರರನ್ನು ಸೇರಿಸಿಕೊಳ್ಳಲು ಕಾಂಗ್ರೆಸ್ಸು ಒತ್ತಾಯಗೊಳಿಸಿದೆಯೆಂದೂ “ಈಗ ಆಮಂತ್ರಿತರಾದವರಲ್ಲಿ ಯಾರಾದರೂ ಒಪ್ಪದಿದ್ದರೆ ಬೇರೆಯವರನ್ನು ಸೇರಿಸಿಕೊಳ್ಳುವ ವಿಚಾರ ಮಾಡಲಾಗುವದೆಂ”ದು ವಾಯಿಸರಾಯರು ಸಾರಿರುವದರಿಂದ ಶರಚ್ಚಂದ್ರರು ಎಷ್ಟೇ ಅಪ್ರಿಯರಾಗಿರಲಿ, ಆ ಒಂದೇ ಕಾರಣದಿಂದ ಯೋಜನೆ ಕುಸಿದು ಬೀಳುವಂತೆ ಮಾಡಲು ಅವರು ಸಿದ್ಧರಾಗಲಿಕ್ಕಿಲ್ಲೆಂದೂ ನಂಬಲಾಗಿದೆ. ಅವರನ್ನು ತೆಗೆದುಕೊಳ್ಳದಿದ್ದರೆ ಬಂಗಾಲ ಆಸಾಮುಗಳಿಂದ ಹಿಂದುವೊಬ್ಬನೂ ಕೇಂದ್ರದಲ್ಲಿಲ್ಲದಂತಾಗುವದೆಂದು ವಾಯಿಸರಾಯರಿಗೆ ತೋರಿಸಿಕೊಡಲಾಗಿದೆ. ಶೀಖರಲ್ಲಿ ಎಲ್ಲ ಪಕ್ಷದವರು ಕಾಂಗ್ರೆಸ್ಸಿಗೆ ಬೆಂಬಲವಾಗಿ ನಿಲ್ಲಲು ಒಪ್ಪಿದ್ದರಿಂದ ಬಲದೇವಸಿಂಗರ ಸಹಕಾರವೂ ಕಾಂಗ್ರೆಸ್ಸಿಗೆ ನಿಶ್ಚಿತವಾದಂತಾಯಿತು.

ವಾಯಿಸರಾಯರ ಯೋಜನೆಯಲ್ಲಿ ಮಹಾತ್ಮಾ ಗಾಂಧಿಯವರು ನಾಲ್ಕು ಮುಖ್ಯ ದೋಷಗಳನ್ನೆತ್ತಿ ತೋರಿದ್ದಾರೆ. ಅದರಲ್ಲಿ ಮೊದಲನೆಯದು ಶರಚ್ಚಂದ್ರರ ಹೆಸರನ್ನು ಹಾರಿಸಿದ್ದು. ಎರಡನೆಯದು ಯಾದಿಯಲ್ಲಿ ಒಬ್ಬ ರಾಷ್ಟ್ರೀಯ ಮುಸ್ಲಿಮನೂ ಇಲ್ಲದ್ದು. ಕಾಂಗ್ರೆಸ್ಸಿಗೆ ಹಿಂದೂಗಳ ಸಂಖ್ಯೆ ಕಡಮೆ ಮಾಡಬೇಕಾಗಿ ಬಂದರೂ ಲೆಕ್ಕಿಸದೆ ರಾಷ್ಟ್ರೀಯ ಮುಸ್ಲಿಮನೊಬ್ಬನಿಗೆ ಎಡೆಮಾಡಿಕೊಡಬೇಕೆಂದು ಅವರ ಅಭಿಪ್ರಾಯ. ಮೂರನೆಯದು ಪಾರ್ಸಿ ಪ್ರತಿನಿಧಿಯಾಗಿ ಚಕ್ರವರ್ತಿ ಸರಕಾರದ ನೌಕರನೊಬ್ಬನನ್ನು ತೆಗೆದುಕೊಂಡದ್ದು (ನೌಶೇರವಾನ ಇಂಜನಿಯರರು ಕೇಂದ್ರ ಸರಕಾರದ ಅಡ್ವೊಕೇಟ ಜನರಲ್ಲರಾಗಿದ್ದು ಸುಭಾಸ ಸೈನಿಕರ ವಿಚಾರಣೆಯಲ್ಲಿ ಸರಕಾರದ ಪಕ್ಷ ಮಂಡಿಸಿದವರು) ನಾಲ್ಕನೆಯದು ಪ್ರಾಂತಿಕ ಚುನಾವಣೆಯಲ್ಲಿ ಸೋತವರಾದ ಅಬ್ದುರ್ರಬ ನಿಶ್ತಾರರನ್ನು ಸೇರಿಸಿಕೊಂಡದ್ದು ಇವೆಲ್ಲವನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳಲು ಮಹಾತ್ಮರು ಕಾಂಗ್ರೆಸ್ಸಿಗೆ ಒತ್ತಾಯಪಡಿಸಿರುವರು. ಈ ವಿಷಯಗಳಲ್ಲಿ ಮಹಾತ್ಮರ ಭಾವನೆ ತೀವ್ರವಾಗಿದೆಯೆಂದು ಹೇಳಲಾಗಿದೆ ಇವುಗಳ ಮೇಲೆ ಹಟ ಹಿಡಿಯಬೇಕೇ ಬೇಡವೇ ಎಂಬ ಬಗ್ಗೆ ಮಹಾತ್ಮರಿಗೂ ಕಾಂಗ್ರೆಸ್ ಕಾರ್ಯಸಮಿತಿಗೂ ಭಿನ್ನಾಭಿಪ್ರಾಯವುಂಟಾಗಿದೆಯೆಂದೂ ಸುದ್ದಿ. ವಾಯಿಸರಾಯರೊಡನೆ ಜವಾಹರಲಾಲ, ಅಜಾದರು ಮಾಡಿದ ಭೆಟ್ಟಿಗಳಿಂದ ಬಹಳ ಪ್ರಯೋಜನವಾಗಿಲ್ಲವೆಂದು ಹೇಳಲಾಗಿದೆ. ಆದರೂ ಕಾಂಗ್ರೆಸ್ಸು ನಿಷೇಧಪೂರ್ವಕವಾಗಿ ಎರಡೂ ಯೋಜನೆಯ ದೇಶಹಿತ ದೃಷ್ಟಿಯಿಂದ ಒಪ್ಪಿಕೊಳ್ಳಬಹುದೆಂದು ಕೆಲವರ ತರ್ಕ . ಇಷ್ಟರಲ್ಲೇ ಈ ವಿಷಯದಲ್ಲಿ ಕಾಂಗ್ರೆಸ್ ನಿರ್ಣಯ ಹೊರಬೀಳಬಹುದೆಂದು ಈ ಬಗ್ಗೆ ಕೊನೆಯ ಗೊತ್ತುವಳಿ ಮಾಡುವ ಮೊದಲು ಖಾನ ಅಬ್ದುಲ ಗಫರಖಾನರನ್ನು ಕರೆಸಿಕೊಂಡು ಅವರ ಅಭಿಪ್ರಾಯ ತೆಗೆದುಕೊಂಡದ್ದಾಗಿದೆ.

ಮೂಲ ಯೋಜನೆಯ ತಿರಸ್ಕಾರವೇಕೆ ?

ಕಾಂಗ್ರೆಸ್ಸು ಯೋಜನೆಗಳೆರಡನ್ನೂ ಈಗ ಒಪ್ಪಿಕೊಳ್ಳಲು ಸಿದ್ಧವಾಗಿದ್ದೇಕೆ? ಎಂಬ ಪ್ರಶ್ನೆಗುತ್ತರವಾಗಿ ಅದು ಕಳೆದವಾರ ಕರಾರು ಸಹಿತ ಯೋಜನೆಯನ್ನು ತಿರಸ್ಕರಿಸಿದ ಕಾರಣಗಳನ್ನು ಮತ್ತು ಅನಂತರ ಆದ ಘಟನೆಗಳನ್ನು ಲಕ್ಷಿಸಬೇಕು. ನಡುಗಾಲ ಸರಕಾರದ ಯೋಜನೆಯನ್ನು ಅಮಾನ್ಯ ಮಾಡಲು ಸಮಪ್ರಾತಿನಿಧ್ಯ ತತ್ವವನ್ನು ವಾಯಿಸರಾಯರು ತಳಹದಿಯಾಗಿಟ್ಟುಕೊಂಡದ್ದೇ ಕಾರಣ. ದೀರ್ಘಕಾಲದ ಘಟನಾ ಸಮಿತಿಯ ಯೋಜನೆಯನ್ನು, ಬಂಗಾಲ ಆಸಾಮುಗಳಲ್ಲಿ ಯುರೋಪಿಯನ್ನರಿಗೆ ಘಟನಾ ಸಮಿತಿಯ ಚುನಾವಣೆಗಳಲ್ಲಿ ಹುರಿಯಾಳುಗಳಾಗಿ ಮತ್ತು ಮತದಾರರಾಗಿ ಭಾಗವಹಿಸಲು ಅವಕಾಶ ಕೊಟ್ಟಿರುವದರಿಂದ ತಿರಸ್ಕರಿಸಲಾಗಿತ್ತು. ಇದಾದ ನಂತರ ಕಾಂಗ್ರೆಸ್ಸಿನ ಈ ದೃಢತೆಯನ್ನು ಕಂಡು ಉಪಾಯವಿಲ್ಲದೆ ವಾಯಿಸರಾಯರು ಯುರೋಪಿಯನ್ನರನ್ನು ಒತ್ತಾಯಗೊಳಿಸಿರಬೇಕು. ಆದ್ದರಿಂದ ಬಂಗಾಲದಲ್ಲಿ ಯುರೋಪಿಯನ್ನ ಶಾಸನ ಸಭಾಸದಸ್ಯರು ಘಟನಾ ಸಮಿತಿಯ ಚುನಾವಣೆಗಳಲ್ಲಿ ಭಾಗವಹಿಸುವದಿಲ್ಲವಾಗಿ ಜಾಹೀರು ಪಡಿಸಿದರು. ಆದ್ದರಿಂದ ಘಟನಾ ಸಮಿತಿಯ ಯೋಜನೆಗಿದ್ದ ಆಕ್ಷೇಪ ದೂರವಾದಂತಾಯಿತು. ನಡುಗಾಲ ಸರಕಾರದ ಯೋಜನೆಯಲ್ಲಾದರೂ ವಾಯಿಸರಾಯರು ಕೆಲ ಬದಲಾವಣೆಗಳನ್ನು ಮಾಡಿದ್ದರಿಂದ ಅದರ ಅಪಾಯಕಾರಕತೆಯೂ ಕಡಿಮೆಯಾದಂತಾಯಿತೆಂದು ಕಾಂಗ್ರೆಸ್ಸು ತಿಳಿದುಕೊಂಡಿರಬಹುದು.

ಜಿನ್ನಾರಿಗೆ ಹೊಟ್ಟೆನೋವು

ಸಂಗತಿಗಳು ಈ ಬಗೆಯಾಗಿ ರೂಪಿಸುತ್ತಿರುವದನ್ನು ಕಂಡು ಮುಸ್ಲಿಂಲೀಗದವರು ಬಹಳ ಅಸಂತುಷ್ಟರಾಗಿದ್ದಾರೆ. ಮೊದಲನೆಯದಾಗಿ ಯುರೋಪಿಯನ್ನರು ಬಂಗಾಲದ ಘಟನಾ ಸಮಿತಿ ಚುನಾವಣೆಯಲ್ಲಿ ಭಾಗವಹಿಸುವದಿಲ್ಲವೆಂದು ನಿರ್ಣಯಿಸಿದ್ದೇ ಅವರಿಗೆ ಹೊಟ್ಟೆನೋವುಂಟುಮಾಡಿದೆ. ಯುರೋಪಿಯನ್ನರಿಗೆ ೬ ಸ್ಥಾನಗಳು ಬಂಗಾಲದಲ್ಲಿ ಸ್ವಾಭಾವಿಕವಾಗಿ ಸಿಗುತ್ತಿದ್ದವು. ಅವುಗಳೀಗ ಇತರರಿಗೆ ಸಿಗುವದರಿಂದ ಲೀಗದ ಬಲ ಕಡಿಮೆಯಾಗುವದೆಂದೂ ಆದ್ದರಿಂದ ಆ ೬ ಸ್ಥಾನಗಳನ್ನೇ ರದ್ದುಗೊಳಿಸಿ ಬಿಡಬೇಕೆಂದೂ ಅವರ ಬೇಡಿಕೆಯಿದೆಯಂತೆ. ಇದಲ್ಲದೆ ವಾಯಿಸರಾಯರು ಮೂಲತಃ ೧೨ ಸ್ಥಾನವಿದ್ದ ಕಾರ್ಯಕಾರಿ ಮಂಡಲವನ್ನು ೧೪ ಸ್ಥಾನಗಳಿಗೇರಿಸಿದ್ದು ಕಾಂಗ್ರೆಸ್ ಒತ್ತಾಯಕ್ಕೊಳಗಾಗಿಯೆ ಎಂದು ಅವರು ಹೇಳುತಿದ್ದಾರೆ. ಈ ಬಗ್ಗೆ ಜಿನ್ನಾರು ವಾಯಿಸರಾಯರಿಗೆ ಬರೆದ ಪತ್ರದಲ್ಲಿ ಕಾಂಗ್ರೆಸ್ಸನ್ನು ಸಂತುಷ್ಟಗೊಳಿಸಲು ಇನ್ನೇನೇನು ಬದಲಾವಣೆ ಮಾಡಲಿರುವಿರೆಂದು ಮೊದಲೇ ಹೇಳಿ ಬಿಡಿರಿ, ಎಂದು ಕೇಳಿರುವರಂತೆ. ಕಾಂಗ್ರೆಸ್ಸಿಗರು ತಮ್ಮ ಪಾಲಿನ ಸ್ಥಾನಗಳಲ್ಲಿ ಒಬ್ಬ ರಾಷ್ಟ್ರೀಯ ಮುಸ್ಲಿಂನಿಗೆ ಸ್ಥಾನ ಮಾಡಿಕೊಡುವದಕ್ಕೆ ಕೂಡ ಜಿನ್ನಾ ಸಾಹೇಬರು ಪ್ರಬಲ ವಿರೋಧವೊಡ್ಡಿರುವರೆಂದೂ “ ಅದರ ಪರಿಣಾಮ ಗಂಭೀರವಾಗಬಹುದು ” ಎಂದು ವಾಯಿಸರಾಯರನ್ನು ಬೆದರಿಸಿರುವರೆಂದೂ ತಿಳಿಯುತ್ತದೆ. ಆದರೆ ರಾಷ್ಟ್ರೀಯ ಮುಸ್ಲಿಮನನ್ನ ಸೇರಿಸಿಕೊಂಡೇ ತೀರಬೇಕೆಂದು ಕಾಂಗ್ರೆಸ್ಸಿನ ಹಟವಿರುವದರಿಂದ ಹೊಸದಿಲ್ಲಿಯಲ್ಲಿ ಪುನಃ ಬಿಕ್ಕಟ್ಟಿನ ವಾತಾವರಣವುಂಟಾಗಿದೆ. ಕಾಂಗ್ರೆಸ್ಸು ನಿರ್ಣಯ ಮಾಡಿದ ಹೊರತು ಮುಸ್ಲಿಂ ಲೀಗಿನವರು ತಮ್ಮ ನಿರ್ಣಯ ಹೇಳುವದಿಲ್ಲವೆಂದು ಸಾರಿದ್ದಾರೆ.

ಕಾಂಗ್ರೆಸ ಕಾರ್ಯಸಮಿತಿಯ ಪ್ರಮುಖ ಸದಸ್ಯರಾದ ಪಂ ಜವಾಹರಲಾಲ, ಆಸಫಅಲ್ಲಿ,ಶ್ರೀ ಶಂಕರರಾವದೇವ ಮತ್ತು ಪಂ ಗೋವಿಂದವಲ್ಲಭ ಪಂತರು ಬೇರೆ ಬೇರೆ ಕಡೆ ಹೊರಟುಹೋಗಿರುವದರಿಂದ ಕಾಂಗ್ರೆಸ್ಸು ಸಾಧಾರಣವಾಗಿ ತನ್ನ ನಿರ್ಣಯವನ್ನು ಮಾಡಿಬಿಟ್ಟಿರಬೇಕೆಂದೂ ಯಾವುದೋ ಒಂದು ವಿಷಯದ ನಿಶ್ಚಯವಾದೊಡನೆ ಅದರ ಗೊತ್ತುವಳಿ ಹೊರಬೀಳುವದೆಂದೂ ನಂಬಲಾಗಿತ್ತು. ಆದರೆ ಕಾಂಗ್ರೆಸ್ ಅಧ್ಯಕ್ಷರು ಪಂ. ಪಂತ ಮತ್ತು ದೇವರನ್ನು ಕೂಡಲೆ ಬರಲು ತಿಳಿಸಿದ್ದಾರೆ. ಮತ್ತೆ ವಿಚಾರ ವಿನಿಮಯ ನಡೆಯಲಿದೆಂದು ಇದರಿಂದ ತಿಳಿಯುತ್ತದೆ.

ಜವಾಹರರ ಬಂಧನ

ಕಾಶ್ಮೀರದಲ್ಲಿ ಶೇಖ ಅಬ್ದುಲ್ಲಾರ ಬಂಧನ ಮತ್ತು ಅದರಿಂದುಂಟಾದ ಉದ್ವೇಗ ಎಲ್ಲರಿಗೂ ಗೊತ್ತು. ಪಂ. ನೆಹರೂ ಅವರು ತಾ. ೧೯ಕ್ಕೆ ಕಾಶ್ಮೀರಕ್ಕೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಪ್ರತ್ಯಕ್ಷ ನೋಡಬೇಕೆಂದು ನಿರ್ಧರಿಸಿದರು. ಅಬ್ದುಲ್ಲಾರ ಬಿಡುಗಡೆಯಾಗದೆ ಪರಿಸ್ಥಿತಿ ಶಾಂತವಾಗುವದು ಅಸಂಭವವೆಂದು ಅವರಿಗೆ ಮನವರಿಕೆಯಾಗಿತ್ತು. ಅದ್ದರಿಂದ ಕಾಶ್ಮೀರ ಮಹಾರಾಜರು ಬರಬೇಡವೆಂದಿದ್ದರೂ ಅವರು ಕಾಶ್ಮೀರದಲ್ಲಿ ಪ್ರವೇಶಿಸಿದರು. ಕೋಹಲಾ (ಪಂಜಾಬ) ದಿಂದ ಕಾಶ್ಮೀರಕ್ಕೆ ಪ್ರವೇಶಿಸುವ ಗಡಿಯಲ್ಲಿ ಕಾಶ್ಮೀರದ ಜಿಲ್ಹಾ ಮ್ಯಾಜಿಸ್ಟ್ರೇಟರು ಅವರನ್ನು ತಡೆಯಲು ಸೈನ್ಯ, ಪೋಲೀಸ ಸಹಿತ ಸಿದ್ಧರಾಗಿದ್ದರು ಪಂಡಿತರು ಯಾವುದನ್ನು ಲೆಕ್ಕಿಸದೆ ಸಂಸ್ಥಾನದಲ್ಲಿ ಹೊಕ್ಕರು. ಅವರೊಡನೆ ಆಸಫಅಲ್ಲಿ, ಪಂ. ದ್ವಾರಕಾನಾಥ ಕಚರು, ದಿವಾಣ ಚಮನಲಾಲ ಮೊದಲಾದ ಪ್ರಮುಖರೂ ಇದ್ದರು. ಜಿಲ್ಹಾ ಮ್ಯಾಜಿಸ್ಟ್ರೇಟರು ನೆಹರೂ ಅವರನ್ನು ಹೊರತು ಉಳಿದವರನ್ನೆಲ್ಲ ಒಳಬಿಡಲು ಅಪ್ಪಣೆಯಿದೆಯೆಂದು ಹೇಳಿದರು. “ಯಾವ ಅಧಿಕಾರದಿಂದ?” ಎಂದು ನೆಹರೂ ಗುಡುಗುಡಿಸಿದಾಗ ನಡುಗುವ ಕೈಯಿಂದ ನಡಗುದನಿಯಿಂದ ಮ್ಯಾಜಿಸ್ಟ್ರೇಟರು ಅವರ ಪ್ರವೇಶವನ್ನು ಪ್ರತಿಬಂಧಿಸುವ ಆಜ್ಞೆಯನ್ನೊಪ್ಪಿಸಿದರು. “ಹಿಂದುಸ್ತಾನದ ರಾಷ್ಟ್ರೀಯ ಕಾಂಗ್ರೆಸ್ಸಿನ ನಿಯೋಜಿತ ಅಧ್ಯಕ್ಷರನ್ನು ತಾವು ತಡುಕುತ್ತಿರುವುದಾಗಿ ಕಾಶ್ಮೀರ ಸರಕಾರಕ್ಕೆ ಗೊತ್ತಿಲ್ಲವೆಂದು ತೋರುತ್ತದೆ.... ನಾನು ಏನೇ ಬಂದರೂ ಎಷ್ಟೇ ದಿನ ಹಿಡಿದರೂ ಶ್ರೀನಗರಕ್ಕೆ ಹೋಗುವವನೆ” ಎಂದು ಹೇಳಿ ಜವಾಹರರು ಮುನ್ನುಗ್ಗಿದರು. ದೊಡ್ಡ ಜನಜಂಗುಳಿ ಅವರೊಡನೆ ಸಾಗಿತ್ತು. ಜಯಘೋಷಗಳು ಅವಿರತವಾಗಿ ರಣರಣಿಸುತಿದ್ದವು. ಸೈನಿಕರಿಗೆ ಬಂದೂಕಿಗೆ ಮದ್ದು ತುಂಬಲು ಆಜ್ಞೆಯಾಯಿತು. ನೆಹರೂ ಅವರೂ ಅವರ ಪರಿವಾರವೂ ಮುಂದೆ ಹೋದಾಗ ಸೈನಿಕರ ಬಂದೂಕಿನ ತಿವಿಗತ್ತಿಗಳು ಅವರಿಗೆ ಅಲ್ಲಲ್ಲಿ ಗಾಯ ಉಂಟುಮಾಡಿದವು. ಜಿಲ್ಹಾ ಮ್ಯಾಜಿಸ್ಟ್ರೇಟರು ಮುಂಗಾಣದೆ ಸರಕಾರದೊಡನೆ ವಿಚಾರವಿನಿಮಯ ಮಾಡಿದರು. ಒಡನೆ ಯಾವ ನಿರ್ಣಯವೂ ಆಗಲಿಲ್ಲ. “ವಾಯಿಸರಾಯರೇ ಆಜ್ಞಾಪಿಸಲಿ ಮಹಾರಾಜರೇ ಅಪ್ಪಣೆ ಕೊಡಲಿ ನಾನು ಹಿಂದಿರುಗುವವನಲ್ಲ” ಎಂದು ನೆಹರೂ ಅವರು ಕಾರಿನಲ್ಲಿ ಮುಂದೆ ಸಾಗಿದರು. ಅವರೆಲ್ಲರೂ ರಾತ್ರಿ ಡೊಮೇಲಿಗೆ ತಲುಪಿ ಅಲ್ಲಿ ತಂಗಿದರು. ತಾ. ೨೦ ಮುಂಜಾನೆ ಕಾಶ್ಮೀರ ಸರಕಾರ ಅವರನ್ನು ಡೊಮೇಲಿನಲ್ಲಿ ಬಂಧಿಸಿ ಇಡೀ ಹಿಂದುಸ್ತಾನವನ್ನೇ ಕ್ಷೋಭದ ಕಡಲಲ್ಲಿ ಕೆಡಹಿತು. ಮುಂದಿನ ಸಂಗತಿ ತಿಳಿದಿಲ್ಲ.

ಅಂತರ್ ರಾಷ್ಟ್ರೀಯ

ವಿದೇಶ ಮಂತ್ರಿಗಳ ಸಭೆ

ಪ್ಯಾರೀಸಿನಲ್ಲಿ ಪುನಃ ಚತುರ್ರಾಷ್ಟ್ರ ವಿದೇಶ ಮಂತ್ರಿಗಳ ಸಭೆ ತಾ. ೧೫ ಶನಿವಾರ ಆರಂಭವಾಗಿ ತಾ. ೧೭ ಕ್ಕೆ ಯಥಾರ್ಥವಾಗಿ ಚರ್ಚೆ ಪ್ರಾರಂಭಿಸಿತು. ಇನ್ನೂ ರಶಿಯನ್ನರಿಗೂ ಸಭೆಯ ಇತರ ಸದಸ್ಯರಿಗೂ ಇದ್ದ ಮತಭೇದ ದೂರವಾಗಿದೆಯೆಂದೆನ್ನಲು ಬರದಿದ್ದರೂ ಸದಸ್ಯರ ಪರಸ್ಪರ ಧೋರಣೆ ಹೆಚ್ಚು "ಚಪಲ" ವಾಗಿ ಮಾರ್ಪಟ್ಟಿದೆಯೆಂದು ತೋರುತ್ತದೆ. ಏಕೆಂದರೆ, ಎರಡು ದಿನಗಳ ಸಭೆಯ ನಂತರ ಇಟೆಲಿಯಿಂದ ರಶಿಯಾ ಬೇಡುತಿರುವ ೧೦೦,೦೦೦,೦೦೦ ಡಾಲರ ಪರಿಹಾರವನ್ನು ಯಾವ ಬಗೆಯಾಗಿ ವಸೂಲ ಮಾಡಬೇಕೆಂಬ ಬಗ್ಗೆ ಬ್ರಿಟಿಶ ವಿದೇಶ ಮಂತ್ರಿ ಬೆವಿನ್ನರಿಗೂ ರಶಿಯನ್ ವಿದೇಶ ಮಂತ್ರಿ ಮಲಟೋವರಿಗೂ ಭಿನ್ನಾಭಿಪ್ರಾಯವಾಗಿದ್ದರೂ ಇಟೆಲಿಯ ಮೇಲೆ ಹೇರುವ ಶಾಂತಿ ಕರಾರುಗಳ ವಿಷಯದಲ್ಲಿ ೪ ಮುದ್ದೆಗಳ ಬಗ್ಗೆ ಒಮ್ಮತವಾಗಿದೆ. (೧) ಇಟೆಲಿಯಲ್ಲಿ ಮಿತ್ರ ರಾಷ್ಟ್ರಗಳ ಸೊತ್ತುಗಳಿಗಾದ ಹಾನಿಯ ಪರಿಹಾರದ ಪ್ರಶ್ನೆಯನ್ನು ನಿರ್ಧರಿಸಲು ಇಟಾಲಿಯನ್ ಪ್ರತಿನಿಧಿಗಳಿಂದೊಡಗೂಡಿದ ಯುಕ್ತರಾಷ್ಟ್ರ ಸಮಿತಿ ನೇಮಿಸಬೇಕು; (೨) ಯುಕ್ತರಾಷ್ಟ್ರ ಸದಸ್ಯ ರಾಷ್ಟ್ರಗಳಲ್ಲಿರುವ ಇಟಾಲಿಯನ್ ಸೊತ್ತುಗಳನ್ನು ಆಯಾ ರಾಷ್ಟ್ರವೇ ಇಟ್ಟುಕೊಳ್ಳಬೇಕು; (೩) ಯುಕ್ತರಾಷ್ಟ್ರಗಳ ವಿರುದ್ಧ ಇಟೆಲಿ ಯಾವದೇ ಪರಿಹಾರ ಬೇಡುವಂತಿಲ್ಲ; (೪) ಇನ್ನು ಮುಂದೆ ಇಟೆಲಿಯ ವ್ಯಾಪಾರದಲ್ಲಿ ಯುಕ್ತ ರಾಷ್ಟ್ರಗಳಿಗೆ ಹೆಚ್ಚು ಪಕ್ಷಪಾತ ತೋರಿಸಬೇಕು.

ರಶಿಯನ್ "ನಿಷ್ಠುರತೆ" ಕಡಿಮೆಯಾಗಲು ಅಧ್ಯಕ್ಷ ಟ್ರೂಮನ್ನರು ಸ್ಟಾಲಿನ್ನರಿಗೆ ಕಳಿಸಿದ ಸಂದೇಶ, ಮತ್ತು ಅಮೇರಿಕನ್ ವಿದೇಶ ಖಾತೆಯವರು ರಶಿಯಾ ಬೇಡಿದ ಸಾಲದ ಪ್ರಶ್ನೆಯಲ್ಲಿ ಪುನಃ ಮಾತುಕತೆ ನಡೆಸಲು ಸಿದ್ಧರಾಗಿದ್ದು ಕಾರಣವಾಗಿರಬಹುದು. ಈ ಸಾಲವನ್ನು ಕೊಡಲು ಮೊದಲು ಅಮೇರಿಕೆ ನಿರಾಕರಿಸಿತ್ತು.

—ಸಭೆ ಇನ್ನೂ ಸಾಗಿದೆ.

ಸ್ಪೇನ ಮತ್ತು ಯುಕ್ತರಾಷ್ಟ್ರಗಳು

ಯುಕ್ತ ರಾಷ್ಟ್ರ ಭದ್ರತಾ ಮಂಡಲದವರು ಸ್ಪೇನದ ಸಮಸ್ಯೆಯನ್ನು ಅಭ್ಯಸಿಸಲು ನೇಮಿಸಿದ ಸಮಿತಿಯು ವರದಿಯಲ್ಲಿ ಸ್ಪೇನದ ಸದ್ಯದ ಆಳಿಕೆ ಜಾಗತಿಕ ಶಾಂತಿಗೆ ಗಂಡಾಂತರಪ್ರಾಯವಾಗಿದೆಯೆಂದೂ ಯುಕ್ತರಾಷ್ಟ್ರ ಸದಸ್ಯರು ಅದರೊಡನೆ ಸಂಬಂಧ ಕಡಿದುಕೊಳ್ಳಬೇಕೆಂದೂ ಸೂಚಿಸಲಾಗಿತ್ತು. ಆ ಪ್ರಕಾರ ಮಾಡಬೇಕೆಂಬ ಗೊತ್ತುವಳಿಯೊಂದನ್ನು ಅಸ್ಟ್ರೇಲಿಯನ್ ಪ್ರತಿನಿಧಿ ಡಾ. ಇವ್ಹಾಟರು ಭದ್ರತಾ ಮಂಡಲದಲ್ಲಿ ಮಂಡಿಸಿದಾಗ ಬ್ರಿಟಿಶ ಪ್ರತಿನಿಧಿ ಅಲೆಗ್ಝಾಂಡರ ಕೆಡಗಾನರು, ಇದು ಸ್ಪೇನದ ಆಂತರಿಕ ಪ್ರಶ್ನೆಯಾಗಿರುವದರಿಂದ ಹೊರಗಿನವರು ಕೈಹಾಕಬಾರದು. ಈ ವಿಷಯದ ನಿರ್ಣಯವನ್ನು ಯುಕ್ತ ರಾಷ್ಟ್ರ ಸಾಮಾನ್ಯ ಸಭೆಗೇ ಬಿಡಬೇಕೆಂದು ಉಪಸೂಚನೆ ತಂದರು. ಆದರೆ ಆ ಉಪಸೂಚನೆ ಬಿದ್ದುಹೋಯಿತು. ಮೂಲ ಸೂಚನೆ ಒಂಭತ್ತು ಮತಗಳಿಂದ ಪಾಸಾದರೂ ರಶಿಯನ್ ಪ್ರತಿನಿಧಿ "ಸ್ಪೇನು ಆಕ್ರಮಣಶೀಲ ಕಾರ್ಯಗಳಲ್ಲಿ ಪ್ರವೃತ್ತವಾದ ವಿನಾ ಭದ್ರತಾ ಮಂಡಲ ಯಾವ ಕ್ರಮವನ್ನೂ ತೆಗೆದುಕೊಳ್ಳಬಾರದೆಂದು" ಗೊತ್ತುವಳಿಯನ್ನು ತಮ್ಮ ವಿಶೇಷಾಧಿಕಾರದಿಂದ ರದ್ದುಗೊಳಿಸಿದ್ದರಿಂದ ಸ್ಪೇನದ ವಿರುದ್ಧ ಕ್ರಮ ತೆಗೆದುಕೊಳ್ಳುವ ಮಾತು ಅಲ್ಲಿಗೆ ನಿಂತಿತು.

ಕೂಲಿಕಾರ ಪಕ್ಷ ಪರಿಷತ್ತು

ಬೋರ್ನಮೌಥ (ಇಂಗ್ಲಂಡ) ದಲ್ಲಿ ಕಳೆದ ವಾರ ಸೇರಿದ ಬ್ರಿಟಿಶ ಕೂಲಿಕಾರ ಪಕ್ಷದ ಸಭೆಯಲ್ಲಿ ಕೂಲಿಕಾರ ಸರಕಾರಕ್ಕೂ ಕೂಲಿಕಾರ ಪಕ್ಷಕ್ಕೂ ಇರುವ ಮತಭೇದ ಸ್ಪಷ್ಟವಾಗಿ ಗೋಚರಕ್ಕೆ ಬರುತಿತ್ತು. ಅಧ್ಯಕ್ಷ ಹೆರಾಲ್ಡಲಾಸ್ಕಿಯವರು ಪರಮಾಣು ಬಾಂಬಿನ ಗೋಪ್ಯತೆಯನ್ನೂ ಬ್ರಿಟಿಶ ಸರಕಾರ ಇನ್ನೂ ಬಿಡದಿರುವ ಹಳೆಯ ವಿದೇಶ ಧೋರಣೆಯನ್ನೂ ಟೀಕಿಸಿ ಮಾತಾಡಿದರು. ಒಂದು ಗೊತ್ತುವಳಿಯಂತೂ ರಶಿಯಾದೊಡನೆ ಬ್ರಿಟಿಶ ಸರಕಾರ ಹೆಚ್ಚು ಸ್ನೇಹದಿಂದಿರಬೇಕೆಂದು ಹೇಳಿದುದಲ್ಲದೆ ಸದ್ಯದ ವಿದೇಶ ಧೋರಣೆಯ ಮೇಲೂ ದೂಷಣೆಯನ್ನು ಎರಚಿತ್ತು. ವಿದೇಶ ಮಂತ್ರಿ ಬೆವಿನ್ನರು ತಮ್ಮ ಧೋರಣೆ ಸಮರ್ಥಿಸುತ್ತ ಈ ಗೊತ್ತುವಳಿಯನ್ನು ಪಾಸು ಮಾಡಿದರೆ ವಿದೇಶಗಳಲ್ಲಿ ಇದನ್ನು ಹೇಗೆ ತಿಳಿದುಕೊಳ್ಳುವರೆಂದು ಚಿಂತಿಸಿರಿ ಎಂದು ಪ್ರತಿನಿಧಿಗಳಿಗೆ ಕೇಳಿಕೊಂಡರು. ಸರಕಾರದ ಸ್ಪೇನಿಶ ಧೋರಣೆಯೂ ಕೂಲಿಕಾರರಿಗೆ ಹಿಡಿಸಿದಂತೆ ಕಾಣಲಿಲ್ಲ. ಮುಖ್ಯ ಮಂತ್ರಿ ಅಟ್ಲಿ, ಉಪ ಪ್ರಧಾನ ಮಾರಿಸನ್ನರು ಸಾಮ್ಯವಾದದ ಮಹತಿ, ಬ್ರಿಟಿಶ ಸರಕಾರದ ಉದಾತ್ತ ಧೋರಣೆಗಳನ್ನೆತ್ತಿ ಮಾತಾಡಿದರು. ಕೂಲಿಕಾರ ಪಕ್ಷದಲ್ಲಿ ಪ್ರವೇಶ ಕೇಳಿದ ಬ್ರಿಟಿಶ ಕಮ್ಯುನಿಸ್ಟರ ಪ್ರಾರ್ಥನೆಯನ್ನು ಇದೀಗ ಮೂರನೆ ಬಾರಿ ಕೂಲಿಕಾರ ಪಕ್ಷ ನಿರಾಕರಿಸಿದ್ದು ಮಾತ್ರ ಸರಕಾರಕ್ಕೆ ಪ್ರಿಯವಾಗಿರಬಹುದು. ಕಮ್ಯುನಿಸ್ಟರು ಇದರಿಂದ ಕಿಡಿಕಿಡಿಯಾಗಿದ್ದಾರೆ.

ಅಂಬರ್ಟೋನ ಪ್ರಯಾಣ

ಸಿಂಹಾಸನದಿಂದ ತಳ್ಳಲ್ಪಟ್ಟು ಇಟೆಲಿಯ ಕೊನೆಯ ಅರಸನೆಂದು ಇತಿಹಾಸದಲ್ಲಿ ಉಳಿಯುವ ಅಂಬರ್ಟೋನು ಜನಮತದ ವಿರುದ್ಧ ಕಳೆದವಾರ ಹೂಡಿದ "ದಂಗೆ"ಯನ್ನು ಬಿಟ್ಟುಕೊಟ್ಟು ಇದೀಗ ದೇಶತ್ಯಾಗ ಮಾಡಿದ್ದಾನೆ. ಆದರೂ ಅವನು ಸಂತೋಷದಿಂದ ಬೀಳ್ಕೊಡದೆ ಚುಚ್ಚುನುಡಿಗಳನ್ನಾಡಿ "ನಾನು ನನ್ನ ಅಧಿಕಾರವನ್ನು ಬಿಟ್ಟುಕೊಟ್ಟಿದ್ದೇನೆಂದಲ್ಲ, ಇಟೆಲಿಯಲ್ಲಿ ರಕ್ತಪಾತ ನನ್ನ ದೆಸೆಯಿಂದ ಬೇಡವೆಂದಿಷ್ಟೇ ಆಶಿಸಿ ಹೊರಟುಹೋಗುತಿದ್ದೇನೆ" ಎಂದು ಸಾರಿದನು.

ಮುಖ್ಯ ಮಂತ್ರಿ ಸಿನಾರ ಗಾಸ್ಪೇರಿಯನ್ನೆ ಇಟಾಲಿಯನ್ ಮಂತ್ರಿ ಮಂಡಲ "ರಾಷ್ಟ್ರಪತಿ"ಯಾಗಿ ನೇಮಿಸಿದೆ.

ಅರಸನು ಪೋರ್ತುಗಾಲಕ್ಕೆ ಪರಿವಾರ ಸಹಿತ ಹೊರಟುಹೋಗಿದ್ದಾನೆ.

ಒಂದು ಬೆಲ್ಗ್ರೇಡ ಚಮತ್ಕಾರ

ಯುಗೊಸ್ಲಾವಿಯಾ ರಾಜಧಾನಿಯಾದ ಬೆಲ್ಗ್ರೇಡಿನಲ್ಲಿ ಹಿಂದಿನ ದೇಶಪ್ರೇಮಿ ಮುಂದಾಳು ಮಿಕಲೊವೀಚನ ವಿಚಾರಣೆ ನಡೆಯುತಿದೆ. ಅಪರಾಧ: ದೇಶದ್ರೋಹ ಮತ್ತು ಶತ್ರುಗಳೊಡನೆ ಸಹಕಾರ. ಈ ಮಹನೀಯ ಮೊದಲು ಯುಗೊಸ್ಲಾವ ಕೂಟಯೋಧರ ಮುಂದಾಳು, ಜರ್ಮನರ ವೈರಿಯೆಂದು ಮಿತ್ರರ ಅನುಗ್ರಹಕ್ಕೆ ಪಾತ್ರನಾಗಿದ್ದ. ಮುಂದೆ ಅವನನ್ನೂ ಅವನ "ಚಿಟ್ನಿಕ" ದೇಶ ಪ್ರೇಮಿಗಳನ್ನೂ ಕೈಬಿಟ್ಟು ಆಂಗ್ಲೋ-ಅಮೇರಿಕನ್ನರು ಕಮ್ಯುನಿಸ್ಟ ಟಿಟೋಗೆ ಪಟ್ಟ ಕಟ್ಟಿದ್ದು ಎಲ್ಲರ ನೆನಪಿನಲ್ಲಿರಬಹುದು. ಟಿಟೋನೂ ಅವನ ಕಮ್ಯುನಿಸ್ಟರೂ ಯಾವಾಗಲೂ, ಮಿಕಲೋವೀಚನು ದೇಶ ಪ್ರೇಮಿಯಲ್ಲ ಫ್ಯಾಸಿಸ್ಟ, ಎಂದು ಆರೋಪಿಸುತಿದ್ದರು. ತನ್ನ ಗತಿ ವಕ್ರವಾದ ಮೇಲೆ ಕಣ್ಮರೆಯಾಗಿಬಿಟ್ಟಿದ್ದ ಮಿಕಲೊವೀಚನು ಈಗ ಟಿಟೋನ ಕೈಗೆ ಸಿಕ್ಕಿ ವಿಚಾರಣೆಗೆ ಗುರಿಯಾಗಿದ್ದಾನೆ. ಈ ಮನುಷ್ಯ, ನ್ಯಾಯಸ್ಥಾನದಲ್ಲಿ ಟಿಟೋನ ದೇಶ ಪ್ರೇಮಿಗಳನ್ನು ಕೊಲ್ಲನು ತಾನು ಇಟಾಲಿಯನ್ನರ ಸಹಾಯ ಪಡೆದದ್ದು ನಿಜವೆಂದು ಒಪ್ಪಿಕೊಂಡಿದ್ದಾನೆ! ಇಷ್ಟೇ ಅಲ್ಲ, ಕಮ್ಯುನಿಸ್ಟ ದೇಶಪ್ರೇಮಿಗಳನ್ನು ಸದೆಬಡೆಯಲು ತನಗೆ ಬ್ರಿಟಿಶ ಅಧಿಕಾರಿಗಳು ಸಹಾಯ ಕೊಡಮಾಡಿದ್ದರೆಂದು ಹೇಳಿ ಇಬ್ಬರು ಬ್ರಿಟಿಶ ಅಧಿಕಾರಿಗಳ ಪತ್ರ ಓದಿದ್ದಾನೆ. ಇದರಿಂದ ಇಂಗ್ಲಂಡಿನಲ್ಲಿ ಒಂದು ಬಗೆಯ ಉದ್ವೇಗವುಂಟಾಗಿದೆ. ಬ್ರಿಟಿಶ ವಿದೇಶ ಖಾತೆ ಮಿಕಲೊವೀಚನ ಕಥೆ ಸರ್ವಥಾ ಸ್ವಕಪೋಲ ಕಲ್ಪಿತವೆಂದು ಸಾರಿದ್ದರೂ ಸಂದೇಹ ಸಂದೇಹವಾಗಿಯೆ ಉಳಿದಿದೆ.

ಪಾಲಿಸ್ತಾನದಲ್ಲಿ ಹಿಂಸಾಚಾರ

ಬ್ರಿಟಿಶ ವಿದೇಶ ಮಂತ್ರಿ ಬೆವಿನ್ನರು ಕೂಲಿಕಾರ ಪರಿಷತ್ತಿನಲ್ಲಿ ಕೆಲ ನಿರ್ದಾಕ್ಷಿಣ್ಯ ಮಾತುಗಳನ್ನಾಡಿದ್ದರು. ೧ ಲಕ್ಷ ಯಹೂದ್ಯರಿಗೆ ಪಾಲಿಸ್ತಾನದಲ್ಲಿ ಆಶ್ರಯ ಕೊಡಬೇಕೆಂಬ ಅಮೇರಿಕನ್ನರ ಒತ್ತಾಯಕ್ಕೆ ಅಮೇರಿಕೆಯಲ್ಲಿ ಯಹೂದ್ಯರ ಸಂಖ್ಯೆ ಅತಿರೇಕ ಬೆಳೆದೀತೆಂಬ ಅವರ ಭಯವೇ ಕಾರಣವೆಂದು ಬೆವಿನ್ನರು ಟೀಕಿಸಿ ಅಮೇರಿಕನ್ನರನ್ನು ರೊಚ್ಚಿಗೆಬ್ಬಿಸಿದರು. ೧ ಲಕ್ಷ ಯಹೂದ್ಯರನ್ನು ಪಾಲಿಸ್ತಾನಕ್ಕೆ ಬರಗೊಡಿಗಿಸಿದರೆ ಅಲ್ಲಿರುವ ಅರಬರನ್ನು ಸುಮ್ಮನಿರಿಸಲು ಇನ್ನೊಂದು ದಲ ಬ್ರಿಟಿಶ ಸೈನ್ಯವನ್ನು ಅಲ್ಲಿ ಕಳಿಸಬೇಕಾದೀತೆಂದು ಹೇಳಿ ಅವರು ಅರಬರ ಮನೋಗತಿಯನ್ನು ಅಪ್ರತ್ಯಕ್ಷವಾಗಿ ಅಂದು ತೋರಿಸಿದ್ದರು. ಇದರ ಅರ್ಥ ಬ್ರಿಟಿಶರು ಪಾಲಿಸ್ತಾನ ಸಮಿತಿಯ ವರದಿಯನ್ನು ಸ್ವೀಕರಿಸಿ ಯಹೂದ್ಯರಿಗೆ ಪ್ರವೇಶ ಕೊಡುವಂತಿಲ್ಲ ಎಂದಾಯಿತು. ಇದರಿಂದ ಸಿಟ್ಟಿಗೆದ್ದ ಯಹೂದ್ಯರು ಪಾಲಿಸ್ತಾನದಲ್ಲಿ ಅನಾಹುತವನ್ನೇ ಆರಂಭಿಸಿದ್ದಾರೆ. ಸೀರಿಯಾ ಗಡಿಯಲ್ಲಿರುವ ಕೆಲ ಸಂಕಗಳನ್ನು ಅವರು ಕೆಡಹಿದ್ದಾರೆ; ಟೆಲ ಅವೀವ ನಗರದಲ್ಲಿ ಐವರು ಬ್ರಿಟಿಶ ಅಧಿಕಾರಿಗಳನ್ನು ಅಪಹರಿಸಿ ಅನೇಕರನ್ನು ಕೊಂದಿದ್ದಾರೆ. ಅಲ್ಲಿಯ ರೇಲ್ವೇ ಸ್ಟೇಶನದಲ್ಲಿ ಪ್ರತ್ಯಕ್ಷ ಕದನವೇ ಆಗಿ ರೇಲ್ವೇ ಕಾರಖಾನೆ ಉರಿಯುತಿದೆ....ಇತ್ಯಾದಿ ಇತ್ಯಾದಿ.

ಮಧ್ಯಪೂರ್ವದಲ್ಲಿ ಬ್ರಿಟಿಶ ವ್ಯೂಹ

ಮಧ್ಯಪೂರ್ವದಲ್ಲಿ ಬ್ರಿಟಿಶರ ನಿಗೂಢ ಚಲನವಲನಗಳು ಪ್ರಾರಂಭವಾಗಿವೆ. ಜನರಲ್ ಮಾಂಟಿಗೊಮರಿಯವರು ಈಗೊಂದು ವಾರದಿಂದ ಮಧ್ಯಪೂರ್ವದಲ್ಲಿ ತೋರಿಕೆಗೆ ಯಾವ ಕಾರಣವೂ ಇಲ್ಲದೆ ಅವಸರ ಅವಸರವಾಗಿ "ಪರಿಶೀಲನ" ಸಂಚಾರ ನಡೆಸಿದ್ದಾರೆ. ಜನರಲ್ ಆಂಡರ್ಸನ ಕಮ್ಯುನಿಸ್ಟ್‌ವೈರಿ ಪೋಲೀಶ ಪಡೆಗಳು ಸಾವಿರಾರು ಇರಾಕದಲ್ಲಿ ಬಂಡಿಳಿದಿವೆಯೆಂದು ಸುದ್ದಿ ಬಂದಿದೆ. (ಲಂಡನದಲ್ಲಿದ್ದ ಪೋಲೀಶ ಸರಕಾರದ ಕೈಕೆಳಗಿದ್ದ ಈ ಸೈನ್ಯ ಪೋಲಂಡದ ಸದ್ಯದ ಸರಕಾರಕ್ಕೆ ವಿಧೇಯವಾಗಲೊಪ್ಪದೆ ಬ್ರಿಟಿಶರ ಕೈಕೆಳಗೇ ಉಳಿದಿದೆ.) ಟ್ರಾನ್ಸ ಜಾರ್ಡನನ್ನು ಪ್ರಬಲ ಬ್ರಿಟಿಶ ಠಾಣೆಯಾಗಿ ಪರಿವರ್ತಿಸಲಾಗಿದೆಯೆಂದೂ ಕರ್ಣಾಕರ್ಣಿಕೆ. ಮಧ್ಯ ಪೂರ್ವಕ್ಕೆ ಅಮೇರಿಕನ್ ಪಡೆಗಳೂ ಬರುತ್ತಿವೆಯಂತೆ. ಸೀರಿಯಾದಲ್ಲಿರುವ ಬ್ರಿಟಿಶ ಠಾಣೆಗಳನ್ನು ಅವುಗಳಿಗಾಗಿ ಕೊಡಲಾಗಿದೆಯಂತೆ. ಇರಾಣದಲ್ಲಿರುವ ಬಲುಚಿಸ್ತಾನದ ಗುಡ್ಡಗಾಡಿನ ಜನರಿಗೆ ಬ್ರಿಟಿಶ ವಿಮಾನಗಳು ಶಸ್ತ್ರಾಸ್ತ್ರಗಳನ್ನೊದಗಿಸಿವೆಯೆಂದು ಸೋವಿಯೆಟ್ ಪತ್ರಿಕೆಗಳು ಆರೋಪಿಸಿವೆ. ಈ ಎಲ್ಲ ಹೊಂಚಿಕೆ ಸನ್ನಾಹಗಳು ಯಾರ ವಿರುದ್ಧ? ಏತಕ್ಕಾಗಿ?

ಅಝುರಬೈಜಾನ ಸಮಸ್ಯೆಯು ಮುಕ್ತಾಯ

ಕೊನೆಗೂಮ್ಮೆ ಅಝುರ ಬೈಜಾನ ಸ್ವಾಯತ್ತ ಪ್ರಾಂತ ಸಮಸ್ಯೆಯನ್ನು ಇರಾಣಿ ಮುಖ್ಯ ಮಂತ್ರಿ ಸುಲ್ತಾನೆಯವರು ಬಿಡಿಸಲು ಶಕ್ತರಾದರು. ಕಳೆದ ವಾರ ಅಝುರಬೈಜಾನದ "ಮುಖ್ಯ ಮಂತ್ರಿ" ಪಿಶೆವಾರಿಗೂ ಇರಾಣಿ ಸರಕಾರಕ್ಕೂ ಒಪ್ಪಂದವಾಗಿ, ಅಝುರಬೈಜಾನ ತನ್ನ ಸ್ವಾಯತ್ತತೆಯನ್ನು ಬಿಟ್ಟುಕೊಡಲು ಒಪ್ಪಿಕೊಂಡಿದೆ. ಅದರ ಪಾರ್ಲಿಮೆಂಟು ಇನ್ನು ಮುಂದೆ ಪ್ರಾಂತಿಕ ಶಾಸನ ಸಭೆಯಾಗುವದು. ಕೇಂದ್ರದಿಂದಲೇ ಆ ಪ್ರಾಂತಕ್ಕೆ ಗವ್ಹರ್ನರರನ್ನು ನೇಮಿಸಲಾಗುವದು. ಪಿಶೆವಾರಿಯ ಸರಕಾರ ಮುಟ್ಟುಗೋಲು ಹಾಕಿ ಜನರಿಗೆ ಹಂಚಿದ ಭೂಮಿಯ ಬಗ್ಗೆ ಅದರ ಒಡೆಯರಿಗೆ ಪ್ರಾಂತಿಕ ಖಜಾನೆಯಿಂದ ಪರಿಹಾರ ಕೊಡಲಾಗುವದು. (ಭೂಮಿಯನ್ನು ತಿರುಗಿ ಕೊಡುವದಿಲ್ಲ). ಅಝುರಬೈಜಾನ ಪ್ರಜಾತಂತ್ರಿ ಸೈನ್ಯಗಳು ಕೇಂದ್ರ ಸರಕಾರದ ಪಡೆಗಳಲ್ಲಿ ಸೇರಿಹೋಗುವದು.

ಈ ಒಪ್ಪಂದವಾದ ನಂತರ ಅಝುರಬೈಜಾನದ "ಮುಖ್ಯ ಮಂತ್ರಿ"ಯಾಗಿದ್ದ ಪಿಶೆವಾರಿ ನಿವೃತ್ತನಾಗಿ, ಆಂತರಿಕ ಮಂತ್ರಿಯಾಗಿದ್ದ ಡಾ. ಸಲಾಮುಲ್ಲಾ ಜವೀದರನ್ನು ನೇಮಿಸಲಾಗಿದೆ. ಪ್ರಾಂತಿಕ ಶಾಸನಸಭೆಗೆ ಪ್ರಾಂತದ ಕಂದಾಯದಲ್ಲಿ ೧೦೦ ಕ್ಕೆ ೭೫ ನ್ನು ನಿಯಂತ್ರಿಸುವ ಅಧಿಕಾರವುಂಟು.

ಆದರೆ ಈಗ ಇರಾಣದ ಇತರ ಪ್ರಾಂತಗಳು ಅಝುರಬೈಜಾನಕ್ಕೆ ಸಮಾನವಾದ ಸ್ಥಾನಮಾನವನ್ನು ಬೇಡತೊಡಗಿವೆ.

ಸಾಂಗಲಿಯಲ್ಲಿಯ ಶ್ರೀ ಬಾಳಾಜಿ ಗಿರಣಿ ಮತ್ತು ಶ್ರೀ ಗಜಾನನ ಮಿಲ್‌ದಲ್ಲಿಯ ಎಲ್ಲ ಕೆಲಸಗಾರರು ಶ್ರೀ ದಿವೇಕರ ಪಂಚಮಂಡಳದವರು ಕೊಟ್ಟ ನಿರ್ಣಯವನ್ನು ಜಾರಿಯಲ್ಲಿ ತರಬೇಕೆಂದು ೩ನೇ ತಾರೀಕಿನಿಂದ ಸಂಪು ಹೂಡಿರುವರು. ಒಡಂಬಡಿಕೆಯ ಪ್ರಯತ್ನಗಳೂ ನಡೆದವು ಆದರೆ ಗಜಾನನ ಮಿಲ್ಲಿನ ಒಡೆಯರು 'ನಮ್ಮ ಗಿರಣಿ ಪೂರಿ ಸ್ವಸ್ಥ ಕೂಡ್ರುವೆವು ಹೊರತು ಕೆಲಸಗಾರರ ಬೇಡಿಕೆಗಳಿಗೆ ಶರಣು ಹೋಗೆವೆಂದು' ಹಟ ಹಿಡಿದದ್ದರಿಂದ ಅದು ಸಾಧ್ಯವಾಗಲಿಲ್ಲ.

ದಾವಣಗೇರೆಯ ಅಶಕ್ತತೋಷಕ ಭವನದ ಪ್ರಾರಂಭೋತ್ಸವ ೨೪ ನೇ ತಾರೀಕು ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಸುಭಾಷಚಂದ್ರ ಬೋಸರ ಶಿಲಾಪ್ರತಿಮೆಯನ್ನು ಕಲಕತ್ತೆಯಲ್ಲಿ ಸರಕಾರಿ ಭವನದ ಮುಂದೆ ನಿಲ್ಲಿಸಬೇಕೆಂದು ಕಲಕತ್ತಾ ಕಾರಪರೇಶನದವರು ವಿಚಾರ ನಡೆಸಿದ್ದಾರೆ.

"ಬರಗಾಲವನ್ನು ತಪ್ಪಿಸಿಕೊಳ್ಳಲು ಎಲ್ಲರೂ ಕೆಲಸ ಮಾಡತಕ್ಕದ್ದು"

—ಶ್ರೀಮತಿ ನಾಯುಡು

ಫೆಬ್ರುವರಿ ೧೩ಕ್ಕೆ ಶ್ರೀಮತಿ ನಾಯುಡು ಅವರು ಹೈದರಾಬಾದ (ಡೆಕ್ಕನ)ದಲ್ಲಿ ಮಾತನಾಡುತ್ತ, "ಸದ್ಯದ ಪ್ರಸಂಗದಲ್ಲಿ ಬಳಲುವವರಿಗೆ ನೀವು ಮುಂದೆಬಂದು ಸಹಾಯಮಾಡುವಿರೋ ಅಥವಾ ಇಲ್ಲವೋ? ಭಾರತದ ದೆಸೆಯು ಎಲ್ಲರಿಗೂ ಒಂದೇ; ಅದು ಅಭಿನ್ನವಾಗಿದೆ. ಆದ್ದರಿಂದ ಈಗ ಒದಗಿದ ಸಂಕಟ ಸಮಯದಲ್ಲಿ, ದೊಡ್ಡ ಸಂಸ್ಥಾನಗಳನ್ನು ಮತ್ತು ರಾಜ್ಯಗಳನ್ನು ಆಳುವ ಬಲಶಾಲಿಗಳಾದ ರಾಜಕುಮಾರರಾಗಲಿ ಇಲ್ಲವೆ ಗುಡಿಸಲುಗಳಲ್ಲಿ ಬಡವಾಗಿರುವ ಮಕ್ಕಳನ್ನು ಮತ್ತು ಉಪವಾಸದಿಂದ ಸಾಯುವ ಹೆಂಡಂದಿರನ್ನು ರಕ್ಷಣೆಮಾಡುವ ಕೆಲಸದಲ್ಲಿ ತೊಡಗಿದ ಹಸಿದ ಒಕ್ಕಲಿಗರಾಗಲಿ—ಯಾರಾದರೂ ಸಹ ತಮ್ಮ ಕರ್ತವ್ಯವನ್ನು ಮಾಡಲು ತಪ್ಪುವಂತಿಲ್ಲ. ಹಸಿದವರ ಹೊಟ್ಟೆಗಳನ್ನು ತುಂಬುವುದಕ್ಕೆ ನೆರವಾಗುವುದರಲ್ಲಿ ದೊಡ್ಡವರು ಸಣ್ಣವರು ಎಂಬ ಭೇದ ಉಳಿಯಲಾರದು." ಹೀಗೆಂದು ಹೇಳಿದರು.

ನಮ್ಮ ಪ್ರತಿಜ್ಞೆ ಮತ್ತು ಬಿನ್ನಹ

ಕೊರತೆಯ ಭಾಗಗಳಲ್ಲಿರುವವರಿಗೆ ನಾವು ಸಂಪೂರ್ಣ ಬೆಂಬಲ ನೀಯುವ ಬಗ್ಗೆ ಪ್ರತಿಜ್ಞೆ ಮಾಡುತ್ತೇವೆ. ದೇಶದ ಯಾವತ್ತೂ ಸಾಧನ ಸಾಮಗ್ರಿಯನ್ನು ಒಂದುಗೂಡಿಸಿ ಅವರಿಗೆ ತ್ವರಿತವಾಗಿ ನೆರವನ್ನು ನೀಡಲಾಗುತ್ತಿದೆ. ಅವರಿಗಿರುವ ಆಹಾರದ ಕೊರತೆಯಲ್ಲಿ ದೇಶದ ಉಳಿದ ಭಾಗವು ಪಾಲು ವಹಿಸುವದಲ್ಲದೆ ಸಮಪಾಲು ವಹಿಸುವದು. ಪ್ರತಿಯೊಬ್ಬನಿಗೆ ಯೋಗ್ಯ ಪ್ರಮಾಣದಲ್ಲಿ ಆಹಾರವು ದೊರೆಯುವಂತೆ ಮಾಡುವದಕ್ಕಾಗಿ ಶಿದಾ ಪದ್ಧತಿಯನ್ನು ವಿಸ್ತರಿಸಲಾಗುತ್ತಿದೆ. ಬೆಲೆ ನಿಯಂತ್ರಣವನ್ನು ತಪ್ಪದೆ ಸಾಗಿಸಲಾಗುವುದು. ಶಾಂತತೆ ಮತ್ತು ಆತ್ಮ ವಿಶ್ವಾಸದಿಂದ ನಡೆದುಕೊಳ್ಳಿರಿ. ನಿಮಗೆ ಅವಶ್ಯವಿರುವದಕ್ಕಿಂತ ಹೆಚ್ಚಿಗೆ ಕೊಂಡುಕೊಳ್ಳಬೇಡಿರಿ. ಲಾಭಬಡಕರೊಡನೆ ಯಾವದೇ ಖರಿದಿ ಸಂಬಂಧವನ್ನಿಟ್ಟುಕೊಳ್ಳಬೇಡಿರಿ.

ಹೆಚ್ಚುಳಿದ ಭಾಗಗಳಲ್ಲಿರುವವರಿಗೆ ಸಂಪೂರ್ಣ ಸಹಾಯವನ್ನು ಒದಗಿಸಬೇಕೆಂದು ನಾವು ಅವರಿಗೆ ಬಿನ್ನವಿಸಿಕೊಳ್ಳುತ್ತೇವೆ. ನಿಮ್ಮಲ್ಲಿ ಹೆಚ್ಚಾಗಿ ಇರುವ ಕಾಳನ್ನು ನೀವು ಕೊಟ್ಟುಬಿಡಬೇಕಾಗಿದ್ದರೂ ನಿಮಗೆ ಸಾಕಷ್ಟು ಕಾಳು ಉಳಿಯುವುದು. ನಿಮ್ಮ ಪಟ್ಟಣದಲ್ಲಿ ಶಿದಾ ಕ್ರಮವನ್ನು ಬಳಿಕೆಯಲ್ಲಿ ತಂದರೆ ನಿಮ್ಮ ದೇಶಬಾಂಧವರಿಗೆ ನೆರವಾಗುವುದಕ್ಕಾಗಿ ಹೀಗೆ ಮಾಡಲಾಗಿದೆಯೆಂದು ನೆನಪಿನಲ್ಲಿಡಿರಿ. ಇಷ್ಟೆಲ್ಲ ಆಗಿಯೂ ನಿಮ್ಮ ಹತ್ತರ ಸಾಕಷ್ಟು ಉಳಿಯುವುದು. ಸ್ವಲ್ಪಾದರೂ ಕೂಡಿಹಾಕಿ ಇಡಬೇಡಿರಿ. ಅಧಿಕಾರಿಗಳೊಡನೆ ಸಹಕರಿಸಿರಿ.

ಆಹಾರದ ಕೊರತೆಯನ್ನು ಹೋಗಲಾಡಿಸಿರಿ

ಹಿಮ್ಮುಸುಸ್ಸಿನಿಂದ ದುಡಿಯಿರಿ ಎಲ್ಲರೂ ಪಾಲುಗಾರರಾಗಿರಿ

ವ್ಯಾಪಾರಿಗಳಿಗೆ ಮತ್ತು ಬೆಳೆಯುವವರಿಗೆ ಸಂದೇಶ

ನಿಮಗೆ ಶಕ್ಯವಿದ್ದಷ್ಟು ಕಾಳನ್ನೆಲ್ಲ ಹೊರಗೆಡವಿರಿ; ನೀವು ಕೂಡಿಡುವ ಪ್ರತಿಯೊಂದು ಮಣ ಕಾಳು ಒಬ್ಬ ದೇಶಬಾಂಧವನ ಮರಣಕ್ಕೆ ಕಾರಣವಾಗುವುದು. ನಿಯಂತ್ರಿತ ಬೆಲೆಗಳಿಗಷ್ಟೇ ಮಾರಿರಿ–ಅವು ನಿಮಗೆ ಹಾಗೂ ಗ್ರಾಹಕರಿಗೆ ಇಬ್ಬರಿಗೂ ಯೋಗ್ಯವಾಗಿವೆ. ಎರಡನೇಯವರಿಗೆ ದುಃಖ ಕೊಟ್ಟು ಹಣ ಗಳಿಸುವುದು ಪಾಪವೆಂದು ತಿಳಿಯತಕ್ಕದ್ದು.

ಲಾಭಬಡಕರನ್ನು ಮತ್ತು ಕಳ್ಳಪೇಟೆಗಾರರನ್ನು ತಮ್ಮ ಯಾವತ್ತೂ ಶಕ್ತಿಯನ್ನು ಉಪಯೋಗಿಸಿ ಹತ್ತಿಕ್ಕಬೇಕೆಂದು ಸರಕಾರ ಹಾಗೂ ಜನತೆಯು ನಿಶ್ಚಯಿಸಿರುತ್ತದೆ. ಕಳ್ಳಪೇಟೆಯನ್ನು ತಪ್ಪಿಸಿರಿ; ಅದು ಅಪರಾಧವಾಗಿದೆ.

(ಹಿಂದುಸ್ಥಾನ ಸರಕಾರದ ಆಹಾರ ಖಾತೆ, ಹೊಸದಿಲ್ಲಿ, ಇವರ ಪ್ರಕಟಣೆ)

ಕರ್ಮವೀರ
ಹರಿಜನ ಪುರವಣಿ

ಯುರೋಪಿಯನರಿಗೆ ಮತಾಧಿಕಾರ

ಯುರೋಪಿಯನ್ ಸಂಘದ ಅಧ್ಯಕ್ಷರಂಥ ಮಹಾ ವ್ಯಕ್ತಿಗಳು ಹುಲಿಯುಗರನ್ನು ಪ್ರದರ್ಶಿಸಿರುವರು. ಅದು ಸ್ಪಷ್ಟ ಸತ್ಯವೆಂದು ತೋರುತ್ತದೆ. ನಿಜವಾದ ಘಟನಾ ಸಮಿತಿ ರಚಿಸಲ್ಪಡುವದಿದ್ದರೆ ಅದರಲ್ಲಿ ಯುರೋಪಿಯನ್‌ರಿಗೆ ಮತಾಧಿಕಾರವಿರತಕ್ಕದ್ದಲ್ಲ ಯುರೋಪಿಯನ್‌ರು ಆ ಚುನಾವಣೆಯಲ್ಲಿ ಉಮೇದ್ವಾರರಾಗಲಾರರೆಂಬುದು ಸ್ಪಷ್ಟವಿದೆ. ಹಿಂದುಸ್ತಾನದಲ್ಲಿ ಬ್ರಿಟಿಶ್ ಅಧಿಕಾರ ಚತುರ್ಬಾಹುಯುತವಾಗಿದೆ- ಅಧಿಕೃತ ದಂಡು, ಅಧಿಕೃತ ನಾಗರಿಕ, ಅನಧಿಕೃತ ನಾಗರಿಕ ಮತ್ತು ಅನಧಿಕೃತ ದಂಡು. ಅದುದರಿಂದ ಅನಧಿಕೃತ ಯುರೋಪಿಯನ್‌ರ ಮೇಲೆ ತಮ್ಮ ನಿಯಂತ್ರಣವಿಲ್ಲೆಂದು ಆಳುವ ಅರಸರು ಹೇಳುವುದೆಂದರೆ ಹುಚ್ಚು ಚ್ಯಾರವೆಂದೇ ಹೇಳಬೇಕಾಗುವುದು. ಅಧಿಕಾರಿಗಳ ಅಸ್ತಿತ್ವ ಅಧಿಕಾರೇತರರಿಗಾಗಿ ಇದೆ. ಅಧಿಕಾರೇತರರಿಲ್ಲದಿದ್ದರೆ ಅಧಿಕಾರಿಗಳಿಗೆ ಕೆಲಸವೇ ಉಳಿಯದು. ಬ್ರಿಟಿಶ ವಾಣಿಜ್ಯದ ಜತೆಯಲ್ಲಿಯೆ ಬ್ರಿಟಿಶ್ ಸಶಸ್ತ್ರ ಹಡಗ ಬಂದಿತು. ಇಡೀ ಹಿಂದುಸ್ತಾನವು ಆಕ್ರಮಿತ ಪ್ರದೇಶವು. ಈ ದೃಷ್ಟಿಯಿಂದ ನಾವು ಯುರೋಪಿಯನ್ ಸಂಘದ ಅಧ್ಯಕ್ಷರ ಸುಲಿಗೆಯನ್ನು ವಿಮರ್ಶಿಸಬೇಕು. ಅಧಿಕಾರಮದದಲ್ಲಿ ಅವರು ತಮ್ಮ ಜನಾಂಗಕ್ಕೆ ಘಟನಾ ಸಮಿತಿಯಲ್ಲಿ, ಸರಕಾರದ ಘೋಷಣ ಪತ್ರಿಕೆಯಲ್ಲಿ ಶಾಸನ ಬದ್ಧ ಅಧಿಕಾರ ಕೊಡಲಾಗಿದೆಯೊ ಇಲ್ಲವೊ ಎಂಬದನ್ನು ವಿಚಾರಿಸುವ ಗೋಜಿಗೂ ಹೋಗಿರುವುದಿಲ್ಲ. ಅವರ ಮತ್ತು ಅವರ ಮತದಾರರ ತಿಳುವಳಿಕೆಗಾಗಿ ನಾನು ದಿಲ್ಲಿಯಲ್ಲಿಯ ವಕೀಲ ಧುರೀಣರ ಅಭಿಪ್ರಾಯವನ್ನು ಪಡೆದಿರುವೆನು. ಅದನ್ನು ಇದೇ ಸಂಚಿಕೆಯಲ್ಲಿ ಬೇರೆಡೆ ಕೊಟ್ಟಿದೆ.

ತಮ್ಮ ನೈತಿಕ ಮತ್ತು ಶಾಸನ ಬದ್ಧ ಸ್ಥಾನಮಾನಗಳೇನೆಂಬ ಬಗ್ಗೆ ಮಂತ್ರಿತ್ರಯರನ್ನು ಕೇಳುವ ನಮ್ರತೆಯನ್ನು ಕೂಡ ಅಧ್ಯಕ್ಷರು ತೋರಿಸಲಿಲ್ಲ. ಬ್ರಿಟಿಶ ಸಾಮ್ರಾಜ್ಯತ್ವವನ್ನು ಹೊಡೆದು ಹಾಕಲು ಹೋರಾಡುತಿರುವ ಬ್ರಿಟಿಶ ಕೂಲಿಕಾರ ಪ್ರತಿನಿಧಿಗಳಾದ ಮಂತ್ರಿತ್ರಯರು ಮತ್ತು ವಾಯಿಸರಾಯರು ನಿಜವಾದ ಸಾಮ್ರಾಜ್ಯತ್ವದ ಪ್ರತಿನಿಧಿಗಳಾದ ಅಧ್ಯಕ್ಷ ಮಹಾಶಯರಿಗೆ ಕಃಪದಾರ್ಥವೆನಿಸಿದರೊ?

ಗಾಳಿಯು ಎತ್ತ ಬೀಸುತಿದೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಯುರೋಪಿಯನ್ ಸಂಘದವರು ಅಕಾಲಿಕವಾಗಿ ಪ್ರದರ್ಶಿಸಿದ ಈ ಪ್ರಯೋಗ ಮಂತ್ರಿ ತ್ರಯರ ಕಾರ್ಯದ ಬಗ್ಗೆ ವಿಶ್ವಾಸವನ್ನು ಹಾರಿಸಿಬಿಡುವ ದೊಡ್ಡ ಕಾರಣವಾಗಿ ಪರಿಣಮಿಸಿದೆ. ಈ ಶಿಷ್ಟ ಮಂಡಳವು ಅಕಾಲಿಕವಾಗಿ ಇಲ್ಲಿಗೆ ಬಂದಿದೆಯೊ? ಹಿಂದುಸ್ತಾನದಲ್ಲಿರುವ ಫಿರಂಗಿ ರಕ್ಷಿತ ಯುರೋಪಿಯನ್‌ರು ತಮ್ಮ ತೋಫುಗಳ ಸಪ್ಪಳವನ್ನು ನಿಲ್ಲಿಸಿ ಅಂಡ್ರ್ಯೂಜರಂತೆ ತಮ್ಮ ಭವಿತವ್ಯವನ್ನೆಲ್ಲ ಹಿಂದುಸ್ತಾನದ ಜನಸಾಮಾನ್ಯರ ವಿಶುದ್ಧ ಸದ್ಭಾವನೆಗಳೊಡನೆ ಪಣಕ್ಕೆ ಹಚ್ಚುವರೊ? ಇಲ್ಲವ ತಮ್ಮ ತಲೆಮಾರಿನಲ್ಲಿಯೂ ಹಿಂದುಸ್ತಾನದಲ್ಲಿ ಪರಕೀಯ ಸತ್ತೆಯನ್ನು ಕಾಯಂವಾಗಿ ಹೇರಬಯಸುವರೊ?

ತಾವು 'ಒಪ್ಪಂದಕ್ಕೆ ಅನುಕೂಲರಾಗಿರುವುದಿಲ್ಲೆಂ'ದು ಅವರು ಹೇಗೆ ಹೇಳಬಲ್ಲರು? ಆ ಘೋಷಣೆಯು ಒಪ್ಪಂದ ವಿರೋಧಕ ಸಂಗತಿಗಳಿಂದ ಹೊಲಸು ನಾರುತ್ತದೆ. ಅವರು ಬಂಗಾಲ ಮತ್ತು ಆಸಾಮದಲ್ಲಿ ಬೇಕೇತೆ ಜಾತೀಯ ಮತದಾರಿಕೆಯನ್ನು ಹೇರಿರುವರು. ಶಾಸನ ಸಭೆಗಳಲ್ಲಿ ಇರುವ ಅಧಿಕಾರ ಅವರಿಗೆಲ್ಲಿಂದ ಬಂದಿತು? ಬಂಗಾಲ ಆಸಾಮುಗಳಲ್ಲಿ ಜಾತಿ ಜಾತಿಗಳಲ್ಲಿ ಭೇದ ಕಲ್ಪಿಸಿ ಜನತೆಯನ್ನು ತೊಂದರೆಗೀಡು ಮಾಡುವದರ ಹೊರತು ಅವರು ಈ ಎರಡು ಶಾಸನ ಸಭೆಗಳಲ್ಲಿ ಯಾವ ಶತಕೃತ್ಯ ಮಾಡಿರುವರು? ಅವರ ಮೇಲೆ ಈ ಭಾರ ಹೇರಲ್ಪಟ್ಟಿರಲಿಲ್ಲ. ಅವರು ಅದನ್ನು ಅಲ್ಲಗಳೆದಿದ್ದರೆ ಅವರ ಶ್ರೇಷ್ಠತೆ ಮತ್ತಷ್ಟು ಹೆಚ್ಚುತ್ತಿದ್ದಿತು. ತದ್ವಿರುದ್ಧವಾಗಿ ಅವರು 'ಬಿಳಿಯ ಮನುಷ್ಯನ ಭಾರ'ವನ್ನು ಸ್ವಾಗತಿಸಿದರು. ಮತ್ತು ಈಗಲೂ ಸದ್ಯದ ಜಾಗ್ರತ ಕಾಲದಲ್ಲಿಯೂ ಘಟನಾ ರಚನೆಯಲ್ಲಿ ಸಂತೋಷದಿಂದ ಸಹಾಯ ಮಾಡಬಲ್ಲರು. 'ನಾನೇನು ಒಪ್ಪಂದಕ್ಕೆ ವಿರೋಧಿಯಿಲ್ಲ' ಎಂದು ಹೇಳುವ ಪ್ರತಿಯೊಬ್ಬ ನಿಜವಾಗಿ ಹಾಗಿರುವನಿಲ್ಲ. ಬಾಯಿಂದ ಏನೂ ಹೇಳದೆ ಕೇವಲ ಕೃತಿಗಳಿಂದಲೆ ತಮ್ಮ ಭಾವನೆಗಳನ್ನು ಯಾರು ಸ್ಪಷ್ಟವಾಗಿ ವ್ಯಕ್ತಪಡಿಸುವರೊ ಅವರು ಒಪ್ಪಂದಕ್ಕೆ ವಿರೋಧಕರಾಗಿರುವದಿಲ್ಲ.

ತಮಗಾಗಿ ತಾವು ಮತ ಹಾಕುವುದಿಲ್ಲ. ಅದರೆ ಹಿಂದೀ ಚರ್ಮವನ್ನು ಧರಿಸಿದ ತಮ್ಮ ಹಸ್ತಕರ ಆಯ್ಕೆಯಲ್ಲಿ ತಮ್ಮ ಮತಾಧಿಕಾರದ ಉಪಯೋಗ ಮಾಡುವದಾಗಿ ಇತ್ತೀಚೆ ಹೊರಡಿಸಿದ ಪ್ರಕಟನೆಯಿಂದ ಅವರು ಮತ್ತಷ್ಟು ಮೂರ್ಖತನವನ್ನು ಪ್ರದರ್ಶಿಸಿರುವರು. ತಾವು ಕೆಲವೆ ಜನರಿದ್ದರೂ ಹಿಂದುಸ್ತಾನದ ಕೋಟ್ಯವಧಿ ಮೂಕ ಪ್ರಾಣಿಗಳ ಕುತ್ತಿಗೆ ಹಿಚುಕಲು ಸಹಾಯಕವಾದ ಗತ್ತುಗಾರಿಕೆಯನ್ನೆ-ಸಾಧ್ಯವಾದರೆ-ಅವರು ಅನುಸರಿಸತಕ್ಕವರು. ಈ ಬಗೆಯ ಪ್ರಾಣಸಂಕಟವನ್ನು ಎಲ್ಲಿಯ ವರೆಗೆ ಅನುಸರಿಸಬೇಕು? ಈ ಅಪವಿತ್ರ ಮಹತ್ವಾಕಾಂಕ್ಷೆಗೆ ಬೆಂಬಲ ಕೊಟ್ಟು ಮಂತ್ರಿಗಳು ಘಟನಾಸಮಿತಿಯೆಂಬ ಮುಳುಗುತಿರುವ ತಮ್ಮ ಹಡಗನ್ನು ಸಮುದ್ರದಲ್ಲಿ ನೂಕಲು ಆಶಿಸುವರೊ? ಹಿಂದೀಯರು ಶಿಷ್ಟಮಂಡಳದ ಸ್ಪಷ್ಟವಾದ ಕರ್ತವ್ಯವನ್ನು ಅವರ ಪರವಾಗಿ ನೆರವೇರಿಸಲಾರರು.

ಹೊಸದಿಲ್ಲಿ ಮೋ. ಕ. ಗಾಂಧಿ
೧೭—೬—೪೬

ಅದೇ ರೀತಿಯಾಗಿ ಸುಶಿಕ್ಷಿತ ಜನರು ಅಥವಾ ವಿದ್ಯಾರ್ಥಿಗಳು ಹರಿಜನರಿಗೆ ಹೊಸ್ಟೆಲುಗಳಲ್ಲಿ ಪ್ರವೇಶ ನಿರಾಕರಿಸುವದು ಮೂಢಭಾವನೆಯ, ಅಜ್ಞಾನದ ಅತಿರೇಕವೆಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಶ್ರೀ ಪರೀಕ್ಷಿತಲಾಲ ಮುಜುಮದಾರ ಮತ್ತು ಹೇಮಂತ ಕುಮಾರ ನೀಲಕಂಠ ಇವರು ತಮ್ಮ ಸಹಿಯಿಂದ ಹೊರಡಿಸಿದ ಪತ್ರಿಕೆಯತ್ತ ವಿದ್ಯಾರ್ಥಿಗಳು ಮತ್ತು ಹೊಸ್ಟೆಲಗಳ ಸುಪರಿಂಟೆಂಡೆಂಟರು ಗಮನಿಸಬೇಕೆಂದು ನಾನು ವಿಶೇಷವಾಗಿ ಕೇಳಿಕೊಳ್ಳುತ್ತೇನೆ. ಆ ಪತ್ರಿಕೆಯನ್ನು ಕಾಳಜಿಯಿಂದ ಪರೀಕ್ಷಿಸಿ ಆ ಬಗ್ಗೆ ವಿಚಾರ ಮಾಡಿ ಕೃತಿಯಲ್ಲಿಳಿಸಬೇಕೆಂದು ಬಿನ್ನವಿಸುತ್ತೇನೆ. ಕೆಲ ವಿಶಿಷ್ಟ ಜಾತಿ ಮತ್ತು ಉಪಜಾತಿಗಳಿಗಾಗಿ ಬೇಕಂತೆ ಕಾಯ್ದಿಟ್ಟ ಹೊಸ್ಟೆಲ್‌ಗಳನ್ನು ಮಾತ್ರ ಅಪವಾದವೆಂದು ಅವರು ಆ ಪತ್ರಿಕೆಯಲ್ಲಿ ಕಲ್ಪಿಸಿರುವರು. ಆದರೆ ಈ ಜಾತಿ ಉಪಜಾತಿಯವರು ಅಸ್ಪೃಶ್ಯತೆಯನ್ನು ತಮ್ಮ ಮನಸಿನೊಳಗಿಂದ ಸಂಪೂರ್ಣವಾಗಿ ಕಿತ್ತಿಹಾಕಿರುವರೆಂಬದನ್ನು ಸಿದ್ಧಪಡಿಸಬೇಕಾಗಿದ್ದರೆ ಈ ವಿಶಿಷ್ಟ ಹೊಸ್ಟೆಲಗಳಲ್ಲಿಯೂ ಹರಿಜನರಿಗೆ ಅನಿರ್ಬಂಧ ಪ್ರವೇಶವಿರಬೇಕೆಂದು ನನ್ನ ಅಭಿಪ್ರಾಯ.

ಹೊಸದಿಲ್ಲಿ ಮೋ. ಕ. ಗಾಂಧಿ
೧೫-೬-೪೬ (ಹರಿಜನ ಬಂಧವಿನಿಂದ)

ಪಶುಬಲಿ

ಪತ್ರಲೇಖಕನೊಬ್ಬನು ಬರೆಯುತ್ತಾನೆ—

"ಮೈಸೂರಿನ ಹರಿಜನರು ಅಲ್ಲಿನ ಮಂದಿರಗಳಲ್ಲಿ ನಿಯಮಿತವಾಗಿ ಪಶುಬಲಿಯನ್ನು ಸಮರ್ಪಿಸುತ್ತಾರೆ. ಕೃಷ್ಣರಾಜನಗರ ತಾಲೂಕಿನಲ್ಲಿ ಇದಕ್ಕಾಗಿ ಪ್ರತಿ ವರ್ಷ ಕೆಲ ವಿಶಿಷ್ಟ ಪ್ರದೇಶಕ್ಕೆ ಯಾತ್ರಿಕರು ಹೋಗುತ್ತಾರೆ. ಈ ವರ್ಷದ ಜಾನೇವಾರಿ ೩ ರಿಂದ ೨೫ ರ ವರೆಗೆ ಇಂಥದೊಂದು ಜಾತ್ರೆ ನಡೆಯಿತು. ಅಲ್ಲಿ ಪ್ರತಿ ದಿನ ಮೂರು ನಾಲ್ಕು ಅಜಬಲಿ ಕೊಡಲಾಯಿತು.

"ತ್ರಾವಣಕೋರದಲ್ಲಿ ಪ್ರತಿಶನಿವಾರ ಮತ್ತೊಂದು ಯಜ್ಞ ನಡೆಯುತ್ತದೆ. ಇದರಲ್ಲಿ ಕೇವಲ ಹರಿಜನರಷ್ಟೇ ಅಲ್ಲ. ಆದರೆ ಹಿಂದೂ ಧರ್ಮದ ರಕ್ಷಕರೆಂದು ಹೇಳಿಕೊಳ್ಳುವ ವೈದಿಕರೂ ಭಾಗವಹಿಸ್ಸುವರು. ಈ ಯಜ್ಞದಲ್ಲಿ ಭಾಗವಹಿಸುವವರು ಮದ್ಯಪಾನವನ್ನೂ ಮಾಡುವರು.

"ಎಲ್ಲಕ್ಕೂ ವಿಷಾದಕರ ಸಂಗತಿಯೆಂದರೆ ಗೋಮಾಂಸವೂ ತಿನ್ನಲಾಗುತ್ತದೆ. ಪರಮಾತ್ಮನ ಮಂದಿರದ ಎದುರಿಗೆ ಈ ಪಶುವಧೆ ನಡೆಯುತಿದೆಂಬುದು ಪ್ರತಿಯೊಬ್ಬ ಹಿಂದುವಿಗೆ ಅತ್ಯಂತ ನಾಚಿಕೆಗೇಡಾದ ಮಾತು."

ಈ ಲೇಖಕನು ಬರೆಯುವುದು ಸತ್ಯಸಂಗತಿಯಾಗಿದ್ದರೆ, ಒಂದರ್ಥದಲ್ಲಿ ಇದು ಪ್ರತಿಯೊಬ್ಬ ಹಿಂದುವಿಗೆ ನಾಚಿಕೆಗೇಡಾದ ಮಾತು. ಆದರೆ ಕೇವಲ ಶಬ್ದದಿಂದ ನಿಷೇಧ ಮಾಡುವದರಿಂದ ಯಾವ ಪಾಪದ ಪ್ರಕ್ಷಾಲನೆಯೂ ಆಗದು. ಅಲ್ಲದೆ ಸಮಾಜದ ಅಪರಾಧದಿಂದ ವ್ಯಕ್ತಿಯೂ ತನ್ನ ಕರ್ತವ್ಯದಿಂದ ಕ್ಷಮಿಸಲ್ಪಡಲಾರನು. ಅದುದರಿಂದ ಮೊದಲನೆಯದಾಗಿ ಈ ಸುಧಾರಣೆ ಮಾಡುವ ಭಾರವು ಈ ಪತ್ರಲೇಖಕನ ಹೊಣೆಯಾಗಿದೆಂದು ನನ್ನ ಅಭಿಪ್ರಾಯ. ಯಾವ ಸ್ಥಳದಲ್ಲಿ ಪಶುಯಜ್ಞ ನಡೆಯುತಿದೆಯೋ ಅಲ್ಲಿನ ಜನರ ಹೊಣೆ. ಆ ಸಂಸ್ಥಾನದ ಅರಸು ಮತ್ತು ಜನತೆಯ ಮೇಲೆ ಇದೆ. ಅನಂತರ ಅದರ ಹೊಣೆ ಕರ್ನಾಟಕದ ಮೇಲೆ, ಮದ್ರಾಸ ಪ್ರಾಂತದ ಮೇಲೆ ಮತ್ತು ಇಡೀ ಹಿಂದುಸ್ತಾನದ ಮೇಲೆ ಇರುವದು. ಆಯಾ ಸ್ಥಳಗಳಲ್ಲಿ ಎಲ್ಲರೂ ಕ್ರಮಬದ್ಧವಾಗಿ ಕಾರ್ಯವನ್ನು ಸಾಗಿಸುವುದಾದರೆ ಅಂಥ ಕಾರ್ಯ ಅಹಿಂಸಾತ್ಮಕವಾಗಿ ಸಾಗಿದರೆ ಮಾತ್ರ ಯಶಸ್ವಿಯಾಗುವುದು— ಯುಗಾಂತರಗಳಿಂದ ಸಾಗಿ ಬಂದ ಈ ದುಷ್ಟ ಪದ್ಧತಿಯ ನಿರ್ನಾಮವಾಗಬಹುದು.

ಆದುದರಿಂದ ಈ ಪತ್ರಲೇಖಕನೆ ಈ ಕಾರ್ಯವನ್ನು ಪ್ರಾರಂಭಿಸಲಿಕ್ಕೆಬೇಕು. ಸುಧಾರಣೆಯ ಕಾರ್ಯವನ್ನು ಹೇಗೆ ಪ್ರಾರಂಭಿಸಬೇಕೆಂಬ ಬಗ್ಗೆ ಈ ಮೊದಲು ನಾನು ಸಾಕಷ್ಟು ಬರೆದಿರುವೆನು.

ಹೊಸದಿಲ್ಲಿ ಮೋ. ಕ. ಗಾಂಧಿ
೧೫—೬—೪೬
(ಹರಿಜನ ಸೇವಕದಿಂದ)

ಯುರೋಪಿಯನ್‌ರ ಮತಾಧಿಕಾರದ ಬಗ್ಗೆ ಕಾಯದೆ ಪಂಡಿತರ ಅಭಿಪ್ರಾಯ

ಸರಕಾರದವರು ಮೇ ೧೬, ೧೯೪೬ ನೇ ದಿನ ಹೊರಡಿಸಿದ ಘೋಷಣಾ ಪತ್ರಿಕೆಯಲ್ಲಿ ಹೇಳಿದಂತೆ ಹಿಂದುಸ್ತಾನದ ಭಾವೀ ರಾಜ್ಯಘಟನೆಯನ್ನು ಸಿದ್ಧಪಡಿಸುವಲ್ಲಿ ಯುರೋಪಿಯನ್‌ರಿಗೂ ಭಾಗವಹಿಸುವ ಹಕ್ಕಿದೆಂಬ ಪ್ರಶ್ನೆಯ ಸಂಬಂಧದಲ್ಲಿ ಗಾಂಧೀಜಿಯವರು ಪಡೆದ ಕಾಯಿದೆ ಪಂಡಿತರ ಅಭಿಪ್ರಾಯ ಇಂತಿದೆ—

"ಬ್ರಿಟಿಶ ಮಂತ್ರಿಮಂಡಳದವರು ಮೇ ೧೬, ೧೯೪೬ ನೇ ದಿನ ಹೊರಡಿಸಿದ ಘೋಷಣಾ ಪತ್ರಿಕೆಯಲ್ಲಿಯ ಪ್ರಕಟನೆಯನ್ನುಲ್ಲೇಖಿಸಿ ಕೆಳಗಿನ ಪ್ರಶ್ನೆಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಕೇಳಲಾಗಿದೆ.

ಅ) ಭಾವೀ ಘಟನಾ ಸಮಿತಿಯ ಚುನಾವಣೆಯಲ್ಲಿ ಮತ ಹಾಕುವ ಹಕ್ಕು ಯುರೋಪಿಯನರಿಗೆ (ಪರದೇಶಸ್ಥರು ಮತ್ತು ಪರಜನಾಂಗದವರು) ಇದೆಯೆ?

ಬ) ಆ ಸಮಿತಿಯ ಸದಸ್ಯರ ಆಯ್ಕೆಗೆ ಉಮೇದ್ವಾರರಾಗುವ ಹಕ್ಕು ಇದೆಯೆ?

ಹಿಂದುಸ್ತಾನದ ಭಾವೀ ರಾಜ್ಯ ಘಟನೆಯನ್ನು ರಚಿಸಲು ಸದ್ಯಕ್ಕೆ ಘಟನಾ ರಚನಾಸಮಿತಿಗೆ ಈ ಪ್ರಶ್ನೆ ಸಂಬಂಧಿಸುತ್ತದೆಂದು ನನಗನಿಸುತ್ತದೆ.

ಸಂಕ್ಷೇಪತಃ ನನ್ನ ಉತ್ತರ ಹೀಗಿದೆ—

೧) ಹಿಂದುಸ್ತಾನದ ಭಾವೀ ಘಟನೆಯನ್ನು ಹಿಂದೀಯರು ನಿರ್ಧರಿಸುವಂತೆ ಕೂಡಲೆ ವ್ಯವಸ್ಥೆ ಮಾಡಬೇಕೆಂದು ಮೂರನೆ ಪ್ಯಾರಾದಲ್ಲಿ ಉಲ್ಲೇಖಿಸಿದೆ. ಇದರ ಅರ್ಥವೆಂದರೆ ಘಟನಾ ರಚನಾ ಸಮಿತಿಯಲ್ಲಿ ಹಿಂದೀಯರೇ ಇರತಕ್ಕದ್ದು.

೨) ೧೬ ನೇ ಪ್ಯಾರಾದಲ್ಲಿ ಹೀಗೆ ಹೇಳಿದೆ—

"ಹಿಂದೀಯರಿಗಾಗಿ ಹಿಂದೀಯರೆ ಘಟನೆಯನ್ನು ಸಿದ್ಧಪಡಿಸುವ ಯೋಜನೆಯನ್ನು ಕೂಡಲೆ ಕಾರ್ಯರೂಪದಲ್ಲಿ ತರುವದೆ ಉದ್ದೇಶವಾಗಿದೆ.

೩) ೧೮ ನೇ ಪ್ಯಾರಾದಲ್ಲಿ ಹೀಗೆ ಹೇಳಿದೆ- ಹೊಸ ಘಟನೆಯ ಸ್ವರೂಪವನ್ನು ನಿರ್ಧರಿಸುವದಕ್ಕಾಗಿ ಹೊಸದಾಗಿ ಆರಿಸಲ್ಪಟ್ಟ ಪ್ರಾಂತಿಕ ಶಾಸನ ಸಭೆಗಳನ್ನೆ ಚುನಾವಣೆ ಸಂಸ್ಥೆಗಳೆಂದು ಪರಿಗಣಿಸುವದೊಂದು ವ್ಯವಹಾರ್ಯವಾದ ವಿಕಲ್ಪವಾಗಿದೆ.

೪) ಇದಕ್ಕಾಗಿ ಹಿಂದುಸ್ತಾನದಲ್ಲಿ ಸಾಮಾನ್ಯ, ಮುಸಲ್ಮಾನ ಮತ್ತು ಶೀಖ ಈ ಮೂರೇ ಮುಖ್ಯ ಜಾತಿಗಳನ್ನು ಪರಿಗಣಿಸಿದರೆ ಸಾಕೆಂದು ೧೮ ನೇ ಪ್ಯಾರಾ ಮುಂದೆ ಹೇಳುತ್ತದೆ. ಉಳಿದ ಸಣ್ಣ ಸಣ್ಣ ಜಾತಿಗಳಿಗಾಗಿ ೨೦ ನೇ ಪ್ಯಾರಾದಲ್ಲಿ ಅವಕಾಶ ಕಲ್ಪಿಸಲಾಗಿದೆ.

೫) ೧೯ ನೇ ಪ್ಯಾರಾದಲ್ಲಿ ಪ್ರತಿನಿಧಿತ್ವದ ಪರಿಶಿಷ್ಟವನ್ನು ಕೊಡಲಾಗಿದೆ.

ಪರದೇಶಸ್ಥರಿಗೆ ಮತ್ತು ಪರಜನಾಂಗದವರಿಗೆ ಚುನಾವಣೆಯಲ್ಲಿ ಮತ ಹಾಕಲು ಇಲ್ಲವೆ ಉಮೇದವಾರರಾಗಿ ನಿಲ್ಲಲು ಹಕ್ಕಿದೆಯೊ ಹೇಗೆಂಬುದೆ ನಿರ್ಣಾಯಕ ಮುದ್ದೆಯಾಗಿದೆ.

"೩ ನೇ ಮತ್ತು ೧೬ ನೇ ಪ್ಯಾರಾದಲ್ಲಿ ಘಟನಾ ಸಮಿತಿ ರಚನೆಯ ಬಗ್ಗೆ ಮಾಡಿದ ಘೋಷಣೆಗೆ ೧೮ ನೇ ಮತ್ತು ೧೯ ನೇ ಪ್ಯಾರಾಗಳ ವಿಷಯವಾಗಿದ್ದು ಅವು ಕೇವಲ ಹಿಂದೀಯರಿಗೆ ಮಾತ್ರ ಘಟನೆಯನ್ನು ರಚಿಸುವ ಅಧಿಕಾರ ಕೊಡುವವಲ್ಲದೆ ಹಿಂದೀಯೇತರರಿಗಲ್ಲ—

ಶಿವನಾರಾಯಣ (ಹಿರಿಯ)
ಅಡ್ವೋಕೇಟ ಹಾಯ ಕೋರ್ಟ ಮತ್ತು ಸೀನಿಯರ ಅಡ್ವೋಕೇಟ ಫೆಡರಲ್ ಕೋರ್ಟ್ ಆಫ ಇಂಡಿಯಾ.

ಟೀಕೆ—ಟಿಪ್ಪಣೆಗಳು

ಭ್ರಾಂತಿ

ಬಗೆ ಬಗೆಯ ಮೂಢಭಾವನೆ, ಭೂತ ಸಂಚಾರ ಭ್ರಾಂತಿ ಮೊದಲಾದವುಗಳಿಂದ ನಮಗೆ ವಿಷಾದವಾಗುತ್ತದೆ. ಅವು ಸಂಪೂರ್ಣವಾಗಿ ಮನಸ್ಸೃಷ್ಟಿ; ಆದರೆ ಎಲ್ಲಿಯ ವರೆಗೆ ಅವುಗಳ ಅಭ್ಯಾಸ ಆಗುವುದಿಲ್ಲವೊ ಅಲ್ಲಿಯ ವರೆಗೆ ಅವುಗಳಿಂದ ಬಾಧೆಯೆ. ರಜ್ಜುವೆ ಸರ್ಪವೆಂದು ನಾವು ಭಾವಿಸಬಹುದು ಮತ್ತು ಅದನ್ನು ಹೊಡೆಯುವುದಕ್ಕಾಗಿ ನಮ್ಮ ಕೈಯನ್ನು ಎತ್ತಬಹುದು. ಅದರಂತೆ ವಿಷಹೀನ ಸರ್ಪವನ್ನು ವಿಷಾರಿ ಸರ್ಪವೆಂದು ಭಾವಿಸಿ ಅಜ್ಞಾನದಿಂದ ಅದನ್ನು ಕೊಂದು ಗೆಳೆಯನೊಬ್ಬನನ್ನು ಕಳೆದುಕೊಳ್ಳಬಹುದು. ಸನ್ಮಾನ್ಯ ನಾಗರಿಕನೊಬ್ಬನನ್ನು ತಪ್ಪಿನಿಂದ ಕಳ್ಳನೆಂದು ಭಾವಿಸಿ ಅಂಜಿಕೆಯ ಆವೇಶದಲ್ಲಿ ಅವನನ್ನು ಕೊಂದ ಕತೆಗಳನ್ನು ಯಾರು ಕೇಳಿಲ್ಲ? ಹಳ್ಳಿಗಳಲ್ಲಿ ಪ್ಲೇಗ ಪ್ರಾರಂಭವಾದರೆ ಮೂರ್ಖತನದಿಂದ ಹರಿಜನರೆ ಅದಕ್ಕೆ ಕಾರಣರೆಂದು ಭಾವಿಸಿ ಆದಕ್ಕಾಗಿ ಅವರನ್ನು ವಿಚಾರಣೆಯಿಲ್ಲದೆ ದಂಡಕ್ಕೆ ಗುರಿ ಮಾಡುವ ಸಂದರ್ಭಗಳೇನು ದುರ್ದೈವದಿಂದ ವಿರಳವಿಲ್ಲ.

ಆಶೆ — ಭಯ

ಸಂಕ್ಷಿಪ್ತ ವಿರಾಮದ ನಂತರ ಗಾಂಧೀಜಿಯವರು ಕಳೆದ ಶನಿವಾರ ಸರಿರಾತ್ರಿ ಕಳೆದ ಮೇಲೆ ಮಸೂರಿಯಿಂದ ಹಿಂತಿರುಗಿ ಬಂದರು. ಅವರ ಶ್ರಮ ಎಷ್ಟೋ ಪರಿಹಾರವಾಗಿತ್ತು. ಅವರು ಮತ್ತೆ ತಮ್ಮ ತಡೆದು ನಿಲ್ಲಿಸಿದ ಪರಿಶ್ರಮವನ್ನು ಪ್ರಾರಂಭಿಸಿದರು. ಅಂದಿನಿಂದೀಚೆಗಿನ ದಿನಗಳಲ್ಲಿ ಜನರ ಹೃದಯದಲ್ಲಿ ಆಶೆ-ಭೀತಿಗಳ ಕಣ್ಣುಮುಚ್ಚಾಲೆ ನಡೆದಿವೆ. ಸಾಯಂ ಪ್ರಾರ್ಥನಾ ಕಾಲಕ್ಕೆ ನೆರೆದ ಉತ್ಕಂಠಿತ ಜನಸಮೂಹಗಳಿಗೆ ದಿನದಿನವೂ ಗಾಂಧೀಜಿ ವಿಶ್ವಾಸ, ಸ್ಥೈರಣೆಗಳ ಉಪದೇಶವನ್ನು ಕೊಡುತ್ತ ಬಂದಿದ್ದಾರೆ. ಅರೆ-ಬೆಂದ ಭಕ್ಷ್ಯಗಳನ್ನು ಹೇಗೆ ಸ್ವಯಂಪಾಕಿಯಾದವನು ಅತಿಥಿಗಳಿಗೆ ಬಡಿಸಲಾರನೋ ಹಾಗೆಯೆ ಅವರು ಅಪೂರ್ಣ ವಿಷಯಗಳನ್ನು ಕುರಿತು ಆಡಲಾರದಾಗಿದ್ದರು. ನಮ್ಮೊಳಗಿನ ಜಗಳಗಳನ್ನು ನಾವೇ ತೀರಿಸಿಕೊಳ್ಳಲಾರದೆ ಇರುವುದು ವಿಚಿತ್ರವೇ ಸರಿ. ಆದರೆ ನಾವು ಸಾಕಷ್ಟು ಬಲಿಷ್ಠರಾಗಿದ್ದರೆ ಈ ದುರ್ದೈವಕ್ಕಾಗಿ ನಮ್ಮ ಆಳರಸರನ್ನು ದೂರಲಾರೆವು. ಅವರನ್ನು ದೂರುವುದಕ್ಕಿಂತ ನಮ್ಮನ್ನೇ ದೂರಿಕೊಳ್ಳುವುದು ಲೇಸು. ಹೀಗೆ ಗಾಂಧೀಜಿಯ ಅಭಿಪ್ರಾಯವಾಗಿತ್ತು. ಈ ವಿಷಯವನ್ನು ಇನ್ನಷ್ಟು ಬಿತ್ತರಿಸುತ್ತ, ಗಾಂಧೀಜಿ ತಮ್ಮ ಮೌನ ದಿನದ ಲಿಖಿತ ಹಿಂದುಸ್ತಾನಿ ಸಂದೇಶದಲ್ಲಿ ಹೇಳಿದ್ದು, "ಎಲ್ಲವೂ ದೇವರ ಇಚ್ಛೆಯಂತೆ ಆಗುವದೆಂದು ನಾವು ನಂಬಿದಷ್ಟು ಕಾಲ, ನಾವು ಚಿಂತಿಸುವ ಕಾರಣವಿಲ್ಲ. ನಾವು ಪರಮಾತ್ಮಸಾಕ್ಷಿಯಾಗಿ ಎಲ್ಲವನ್ನೂ ಮಾಡಬೇಕು. ಇದೊಂದೇ ನಾವು ಆಚರಿಸತಕ್ಕ ನಿಯಮ. ಅವನೇ ಜಗನ್ನಿಯಾಮಕನು. ನಾವು ನಮ್ಮ ಕರ್ಮಫಲವನ್ನಷ್ಟೇ ಭೋಗಿಸುವವರು. ಆದುದರಿಂದ ಆತನ ನಿಯಮಕ್ಕೆ ವಿಧೇಯರಾಗಿರತಕ್ಕದ್ದು ನಮ್ಮ ಕರ್ತವ್ಯ. ಫಲದಲ್ಲಿ ನಾವು ಆಸಕ್ತರಾಗಿರತಕ್ಕದ್ದಲ್ಲ."

ಸಂಬಂಧಪಟ್ಟ ಮೂರೂ ಪಕ್ಷಗಳು ಮಾತುಕತೆ ಕುಸಿದು ಬೀಳದಂತೆ ಹೆಣಗುತ್ತಿವೆ. ಎಂದು ಮರುದಿನ ಅವರು ಮುಂದುವರಿಸಿದರು. ಆದುದರಿಂದ ಜನರು ನಿರಾಶರಾಗಬಾರದು. "ಮಂತ್ರಿ ರಾಯಭಾರದ ಕೀರ್ತಿಯೇ ಇಲ್ಲಿ ಪಣಕ್ಕೆ ಹಚ್ಚಲ್ಪಟ್ಟಿದೆ. ಅವರು ಮಾತುಕತೆ ಮುರಿದು ಬೀಳಗೊಡಲಾರರು. ಮತ್ತು, ಎಲ್ಲರ ಧ್ಯೇಯವೂ ಅವರು ಹೇಳಿಕೊಳ್ಳುವಂತೆ ಒಂದೇ, ಅಂದರೆ ಹಿಂದುಸ್ತಾನದ ಸ್ವಾತಂತ್ರ್ಯವೇ ಆಗಿರುವುದು ನಿಜವಾದರೆ, ಕಾಂಗ್ರೆಸ್ ಮತ್ತು ಮುಸ್ಲಿಂಲೀಗ ಪಕ್ಷಗಳ ಕಾರಣದಿಂದಾದರೂ ಮುರಿವು ಬರಬಾರದು." ಆದ್ದರಿಂದ ಗಾಂಧೀಜಿ ಸ್ಥೈರಣೆಯನ್ನು ಬೋಧಿಸಿದರು. "ಧ್ವಂಸ ಮಾಡುವದು ಸುಲಭ ಆದರೆ ಕಟ್ಟುವದು ವಿಲಂಬಿತವಾದ, ಪರಿಶ್ರಮಪೂರ್ಣವಾದ ಕಾರ್ಯ. ೪೦ ಕೋಟಿ ಜನರ ಸ್ವಾತಂತ್ರ್ಯವೆಂಬುದು ಮಾಟಗಾರನ ಮಾವಿನ ಗಿಡವಲ್ಲ" ಮುರಿವನ್ನು ತಪ್ಪಿಸಲು ಕಾಂಗ್ರೆಸ್ ಕಾರ್ಯಸಮಿತಿ ಇನ್ನೂ ಶ್ರಮಿಸುತ್ತಿದೆ. ಇನ್ನು ಇಷ್ಟೆಲ್ಲ ಪ್ರಯತ್ನದ ನಂತರವೂ ಕೊನೆಗೆ ಮಾತುಕತೆ ಮುರಿದೇಬಿದ್ದರೆ, ಜನರು ದೇವರ ಇಚ್ಛೆಯೇ ಹಾಗಿತ್ತೆಂದು ಯೋಗ್ಯವಾದ ವೈರಾಗ್ಯ ಭಾವದಿಂದ ಅಂಗೀಕರಿಸಿ, ಉದ್ವೇಗಕ್ಕಾಗಲಿ ನಿರಾಶೆಗಾಗಲಿ ಎಡೆಗೊಡದೆ ತಾಳಬೇಕು. ಅಂದರೆ ಮಾತ್ರ ಅವರಿಗೆ ದೇವರಲ್ಲಿರುವ ವಿಶ್ವಾಸ ಸಾರ್ಥಕವಾದಂತೆ.

ಎದುರಿಗಿರುವ ಕೋಡುಗಲ್ಲು

ಅವರ ಆಶಾವಾದಕ್ಕೂ ವಿಶ್ವಾಸಕ್ಕೂ ಬಹಳ ಬೇಗನೆ ಪರೀಕ್ಷಾಕಾಲ ಬಂತು. "ಹೆಸರಿಲ್ಲದ ಹೆದರಿಕೆಯೊಂದು ನನ್ನನ್ನು ಆವರಿಸಿಬಿಟ್ಟಿದೆ. ಎಲ್ಲವೂ ಕಲ್ಯಾಣಕರವಾಗಿಲ್ಲೆಂದು ನನಗನಿಸುತ್ತಿದೆ," ಎಂದು ಗೆಳೆಯರೊಬ್ಬರಿಗೆ ಸಹಜವಾಗಿ ಹೇಳಿದರು. "ಪರಿಣಾಮವಾಗಿ ನನ್ನ ನರವೇ ಕುಂದಿದಂತೆ ಅನಿಸತೊಡಗಿದೆ. ಆದರೆ ನನ್ನ ನಿರಾಧಾರ ಶಂಕೆಗಳನ್ನು ನಿಮಗೆ ಹೇಳಿ ನಿಮ್ಮ ಮನಸ್ಸನ್ನು ಕಲುಷಿತಗೊಳಿಸಲಾರೆ." ಘಟನಾ ರಚನೆಯಲ್ಲಿ ಭಾಗ ವಹಿಸುವ ತಮ್ಮ ಹಕ್ಕನ್ನು-ಅದು ಅವರ ಹಕ್ಕೇ ಅಲ್ಲ- ಉಪಯೋಗಿಸುವದಾಗಿ ಯುರೋಪಿಯನ್ನರು ಸಾರಿದ್ದೇ ಮುಂದಿರುವ ಕೋಡುಗಲ್ಲುಗಳ ಮೊದಲನೆಯ ಪೂರ್ವಸಂಕೇತವಾಯಿತು.

ಈ ಪ್ರಶ್ನೆಯನ್ನು ಗಾಂಧೀಜಿ ಈ ಸಂಚಿಕೆಯಲ್ಲಿಯೇ ಬೇರೆಡೆಯಲ್ಲಿ ವಿಸ್ತಾರವಾಗಿ ವಿವೇಚಿಸಿದ್ದಾರೆ. ಪ್ರಾಂತಿಕ ಶಾಸನ ಸಭೆಗಳ ಆರಿಸಿ ಬಂದ ಸದಸ್ಯರಿಂದ ಘಟನಾ ಸಮಿತಿ ರಚಿಸಲ್ಪಡಬೇಕು. ೧೯೩೫ರ ಹಿಂದುಸ್ತಾನ ಸರಕಾರ ಕಾಯಿದೆ ಯುರೋಪಿಯನ್ನರಿಗೆ ಶಾಸನ ಸಭೆಗಳಲ್ಲಿ ಅನೇಕ ಸ್ಥಾನಗಳನ್ನು ಕೊಟ್ಟಿದೆ. ಉದಾಹರಣೆಗಾಗಿ ಬಂಗಾಲವೊಂದರಲ್ಲೇ ೨೫ ಯುರೋಪಿಯನ್ನರ ಪ್ರಬಲ ಗುಂಪೊಂದು ಇದೆ. ಆಸಾಮದಲ್ಲಿ ೯ ಜನರಿದ್ದಾರೆ. ಅವರಲ್ಲಿ ಅನೇಕರು ನವಕೋಟಿ ನಾರಾಯಣರೋ ಅವರ ಪ್ರತಿನಿಧಿಗಳೋ ಇದ್ದಾರೆ. ಅವರು ವಿದೇಶಿಯರು, ರಾಜ ಜಾತಿಗೆ ಸೇರಿದವರು. ಹೀಗಿರುವಾಗ ಅವರಿಗೆ ಘಟನಾ ಸಮಿತಿಯಲ್ಲಿ ಹುರಿಯಾಳುಗಳಾಗಿಯಾಗಲಿ ಮತದಾರರಾಗಿಯಾಗಲಿ ಸ್ಥಾನವಿರಕೂಡದು. ಹಿಂದೀಯರೇ ಘಟನೆಯನ್ನು ರಚಿಸತಕ್ಕವರೆಂದು ಮಂತ್ರಿಮಂಡಲದ ಯೋಜನೆಯು ಸ್ಪಷ್ಟವಾಗಿ ಹೇಳಿದೆ.

ಈ ವಿಷಯವನ್ನು ನ್ಯಾಯಸ್ಥಾನಕ್ಕೆ ಒಯ್ದರೆ ತೀರ್ಪು ನಿಶ್ಚಯವಾಗಿಯೂ ಯುರೋಪಿಯನ್ನರ ವಿರುದ್ಧವೇ ಆಗುವದೆಂದು ಕಾಯಿದೆ ಪಂಡಿತರು ಗಾಂಧೀಜಿಗೆ ಅರುಹಿದ್ದಾರೆ. ಆದರೆ ಅವರು ತಮಗುಂಟೆಂದು ಭಾವಿಸಿಕೊಂಡಿರುವ ಹಕ್ಕನ್ನು ಬಜಾಯಿಸಲೆಳಸಿದ್ದಾರೆಂದು ಪತ್ರಿಕೆಗಳಿಂದ ಗಾಂಧೀಜಿ ತಿಳಿದುಕೊಂಡಿದ್ದಾರೆ. ಇಷ್ಟರ ವರೆಗೆ ಯುರೋಪಿಯನ್ನರು ತಮ್ಮ ಮತವನ್ನು ಬ್ರಿಟಿಶ ಅಧಿಕಾರವನ್ನು ಎತ್ತಿಹಿಡಿಯಲು ಉಪಯೋಗಿಸಿದ್ದಾರೆ ಹಿಂದೂ-ಮುಸ್ಲಿಮರ ನಡುವೆ ಕೀಲಿನಂತೆ ಅವರು ವರ್ತಿಸಿದ್ದಾರೆ. ಆದುದರಿಂದ, ಕಾಯಿದೆಯ ಮಾತು ಒತ್ತಟ್ಟಿಗಿರಲಿ, ಇದರಲ್ಲಿ ನೀವು ಪ್ರವೇಶಿಸಬೇಡೆಂದು ಯುರೋಪಿಯನ್ನರಿಗೆ ಗಾಂಧೀಜಿ ಬಿನ್ನವಿಸಿಕೊಂಡರು. ಯಾವ ಕಾಂಗ್ರೆಸ್ಸಿಗನೂ ಅವರನ್ನು ನ್ಯಾಯಸ್ಥಾನಕ್ಕೆಳೆಯಲು ಬಯಸಲಾರ. ಅವರು ಕಾಲಪರಿಸ್ಥಿತಿಯನ್ನು ಮನಗಂಡು, ಪತ್ರಿಕಾವರದಿ ತಪ್ಪೆಂದೂ ಹಿಂದೀಯರೇ ತಮ್ಮೊಳಗೆ ಬಗೆಹರಿಸಿಕೊಳ್ಳಬೇಕಾದ ಹಿಂದೀಯರ ವಿಷಯದಲ್ಲಿ ತಾವು ಕೈಹಾಕಬಯಸುವದಿಲ್ಲೆಂದೂ ಘಟನಾ ಸಮಿತಿಯ ಹುರಿಯಾಳುಗಳ ಆಯ್ಕೆಯಲ್ಲಿ ತಮ್ಮ ಮತಗಳನ್ನು ಉಪಯೋಗಿಸುವದೂ ಇಲ್ಲ ತಾವು ಹುರಿಯಾಳುಗಳಾಗಿ ನಿಲ್ಲುವದೂ ಇಲ್ಲವೆಂದೂ ಸ್ವೇಚ್ಛೆಯಿಂದ ಸಾರಬೇಕು. ಅವರು ಇನ್ನು ಮೇಲ ಹಿಂದುಸ್ತಾನದಲ್ಲಿ ತಮ್ಮ ಅಧಿಕಾರ ಚಲಾಯಿಸಬಾರದು. ಹಿಂದೆ ಅವರೇನೇ ಮಾಡಿರಲಿ, ಮುಂದೆ ಅವರು ಜಾತೀಯ ದ್ವೇಷವನ್ನು ನಂದಿಸಲು ಯತ್ನಿಸಬೇಕು ಹೊರತು ಹಬ್ಬಿಸಲೆಳಸಬಾರದು. ಸಾಧ್ಯವಿದ್ದಷ್ಟು ಬೇಗನೆ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಸಿದ್ಧಿಸಬೇಕೆಂದು ಅವರು ಇಚ್ಛಿಸಬೇಕು. ಅಂಥ ಹೇಳಿಕೆಯೊಂದನ್ನು ಹೊರಡಿಸಿದರೆ ಅದು ಯುರೋಪಿಯನ್ನರಿಗೆ ಭೂಷಣಪ್ರಾಯವಾಗುವದು.

ಮಾತು ಮುಗಿಸುತ್ತ ಗಾಂಧೀಜಿ ಅಂದದ್ದು, ಈ ವಿದೇಶಿ ಸತ್ವ ಯಾವುದೇ ರೀತಿಯಲ್ಲಿ ಆಯ್ಕೆಯನ್ನು ಪ್ರಭಾವಿತಗೊಳಿಸದಂತೆ ನೋಡಿಕೊಳ್ಳುವದು ಮಂತ್ರಿ ರಾಯಭಾರಿಗಳಿಗೆ ಹಾಗೆಯೆ ವಾಯಿಸರಾಯರಿಗೆ ಸೇರಿದ್ದು -

ಮಗು ಸಾಯುತ್ತಿದೆ

ಸ್ವಾತಂತ್ರ್ಯದ ವಾತಾವರಣದಲ್ಲಿ ವಸ್ತುಸ್ಥಿತಿಯನ್ನು ಎದುರಿಸಿದಾಗ, ತಮ್ಮ ಆಚಾರ ವಿಚಾರಗಳು ಹರಿದ ರೀತಿಗೂ ಹಿಂದೀಯರ ಸ್ವಭಾವವೆಂದು ಅವರಿಗೆ ಹಿಂದೆ ಕಲಿಸಲ್ಪಟ್ಟಿದ್ದ ರೀತಿಗೂ ಬಹಳ ವ್ಯತ್ಯಾಸವುಂಟೆಂದು ಆಝಾದ ಹಿಂದ ಸೈನ್ಯದ ಜನರು ಕಂಡುಕೊಂಡರು. ಆಝಾದ ಸೈನ್ಯದಲ್ಲಿ ಜಾತೀಯ ಸಮಸ್ಯೆ ಸಂಪೂರ್ಣವಾಗಿ ಇಲ್ಲದಂತಾಗಿತ್ತು. ಮಂತ್ರಿರಾಯಭಾರದ ನಿರರ್ಥಕ ಪ್ರಯತ್ನಗಳ ಫಲ ತದ್ವಿರುದ್ಧವಾಗಿತ್ತು. ಮುಸ್ಲಿಂ ಲೀಗ ಮತ್ತು ಕಾಂಗ್ರೆಸ್ಸುಗಳಲ್ಲಿ ಐಕ್ಯವನ್ನುಂಟು ಮಾಡಬೇಕೆಂದು ಅವರು ಬೆಳಗಿನಿಂದ ಸಂಜೆತನಕ ಹೆಣಗುತ್ತ ಬಂದಿದ್ದಾರೆ. ಆದರೆ ಅಸಾಧ್ಯವಾದುದನ್ನೇ ಅವರು ಪ್ರಯತ್ನಿಸುತಿರುವಂತೆ ತೋರುತ್ತದೆ. "ನಿಜವಾದ ಹಿಂದೂ-ಮುಸ್ಲಿಂ ಐಕ್ಯ ಮೂರನೆಯ ಪಕ್ಷವೊಂದು ಇಲ್ಲಿರುವಷ್ಟು ಕಾಲ ನಿರೀಕ್ಷಿಸಲು ಸಾಧ್ಯವಿಲ್ಲವೆಂದು ನಾನೆಷ್ಟೋ ಬಾರಿ ಬರೆದಿದ್ದುಂಟು, "ಎಂದು ಗಾಂಧೀಜಿ ಪ್ರಾರ್ಥನಾನಂತರ ಉಪದೇಶದಲ್ಲಿ ಒಮ್ಮೆ ಹೇಳಿದರು. "ಗುಲಾಮರೂ ಅವರ ಒಡೆಯರೂ ಸೇರಿಯೆ ಅಸ್ವಾಭಾವಿಕವಾಗಿ ಚಿಂತಿಸಲೂ ಆರರು ವರ್ತಿಸಲೂ ಆರರು."

ಅವರು ಮಂತ್ರಿ ರಾಯಭಾರವನ್ನು ತನ್ನ ಮಗು ಸಾಯುತಿರುವದನ್ನು ನೋಡುತ್ತ ಕುಳಿತ ತಾಯಿಗೆ ಹೋಲಿಸಿದರು. "ಕೊನೆಗೂ ಅವಳು ಆಶೆಯನ್ನು ಬಿಡುವದಿಲ್ಲ. ಅವಸಾನ ಕಾಲದವರೆಗೂ ವೈದ್ಯರೂ ಹಕೀಮರೂ ಹೇಳಿದ ಔಷಧಗಳನ್ನೆಲ್ಲ ಪ್ರಯೋಗಿಸುತ್ತಲೇ ಹೋಗುವಳು." ಅದೇ ಪ್ರಕಾರ ರಾಯಭಾರದವರೂ ಪ್ರಯತ್ನವನ್ನು ತ್ಯಜಿಸಲೊಲ್ಲರು.

"ಅವರು ಕಾಂಗ್ರೆಸ್ ಲೀಗುಗಳನ್ನು ಒಂದು ಮಾಡಲು ಪ್ರಯತ್ನಿಸುತ್ತಿದ್ದಾರೆ. ಅವರಿಗೆ ಮೌಲಾನಾ ಸಾಹೇಬರೂ ಬೇಕು, ಕಾಯದೆ-ಆಝಮ ಜಿನ್ನಾರೂ ಬೇಕು, ಯುರೋಪಿಯನ್ನರು ಸರಿಯಾದುದನ್ನೆ ಮಾಡಬೇಕೆಂದೂ ಅವರು ಹೆಣಗುತಿದ್ದಾರೆ ಯುರೋಪಿಯನ್ನರು ತಮ್ಮದಲ್ಲದೆ ಅಲ್ಲದ ಹಕ್ಕನ್ನು ಬಜಾಯಿಸುವದಾಗಿ ಹೇಳುತ್ತಾರೆ. ಆದರೆ ಕಾಂಗ್ರೆಸ್ಸೂ ಲೀಗೂ ಅವರಿಗೆ ಬಿನ್ನವಿಸಿಕೊಂಡರೆ ಆ ಬಿನ್ನಹವನ್ನು ಅವರು ವಿಚಾರಿಸಬಹುದು."

"ಅವರಿದ್ದಲ್ಲಿಗೆ ಭಿಕ್ಷಾಪಾತ್ರೆ ಹಿಡಿದುಕೊಂಡು ಹೋಗುವ ಪ್ರಶ್ನೆಯೇ ಇಲ್ಲವೆಂಬುದು ಸ್ಪಷ್ಟವಾಗಿ ತಿಳಿಯಲ್ಪಡಲಿ. ಮಂತ್ರಿ ರಾಯಭಾರದ ಯೋಜನೆಯನ್ನು ಕಾಯಿದೆರೀತ್ಯಾ ಅರ್ಥಮಾಡಿದರೆ ಅವರಿಗೆ ಘಟನಾ ಸಮಿತಿಯಲ್ಲಿ ಸ್ಥಾನವೇ ಇಲ್ಲ" ಎಂದು ಗಾಂಧೀಜಿ ಸಾರಿದರು.

"ಇನ್ನೊಂದು ದೇಶವನ್ನು ದಾಸ್ಯವಾಗಿ ಮಾಡಿಕೊಳ್ಳುವದು ಅಸ್ವಾಭಾವಿಕ, ಎಂದು ಅವರು ಮುಗಿಸಿದರು. "ಸಾತ್ವಿಕ ನಿರ್ಧಾರವನ್ನು ಮಾಡಿದಾಕ್ಷಣಕ್ಕೆ ನೀವು ಹಿಂದುಸ್ತಾನದ ಕತ್ತಿನಿಂದ ಇಳಿದು ಹೋದಂತಾಗಿಲ್ಲ. ಅದಕ್ಕನುಗುಣವಾದ ಕೃತಿ ಬೇಕು. ಅವರು ಹೆಣಗುತಿದ್ದಾರೆ ನಿಜ. ಅವರ ಪ್ರಾಮಾಣಿಕತೆಯಲ್ಲಿ ಸಂಶಯ ತಾಳಲು ಹಿಂದುಸ್ತಾನಕ್ಕೆ ಯಾವ ಕಾರಣವೂ ಇಲ್ಲ. ಅವರ ಕಾರ್ಯ ಬಹಳ ಕಠಿನವಾದುದು. ಕಾಂಗ್ರೆಸ್ಸೂ ಲೀಗೂ ಬ್ರಿಟಿಶರೂ ಎಲ್ಲರೂ ಅಸ್ವಾಭಾವಿಕ ಪರಿಸ್ಥಿತಿಯಲ್ಲಿ ಶ್ರಮಿಸುತಿದ್ದಾರೆ."

ವಾಯಿಸರಾಯರ ಸಾರಿಕೆ

ಮಂತ್ರಿಮಂಡಲ ರಚಿಸುವಲ್ಲಿ ವಾಯಿಸರಾಯರಿಗೆ ಸಹಾಯವಾಗಬೇಕೆಂದು ಹದಿನಾಲ್ಕು ಜನರಿಗೆ ಅವರವರ ಹೆಸರಲ್ಲಿ ಆಮಂತ್ರಣಗಳು ಹೋಗಿವೆಯೆಂದು ವಾಯಿಸರಾಯರು ತಾ. ೧೬ಕ್ಕೆ ಸಾರಿದರು. ಎರಡು ಪ್ರಮುಖ ಪಕ್ಷಗಳನ್ನು ಒಟ್ಟುಗೂಡಿಸುವ ಕೆಲಸದಲ್ಲಿ ಅಯಶಸ್ವಿಗಳಾದ ರಾಯಭಾರಿಗಳು ಬಿಕ್ಕಟ್ಟನ್ನು ಹೋಗಲಾಡಿಸಲು ಏನಾದರೊಂದು ಹಾದಿ ಹುಡುಕಲೇ ಬೇಕಾಗಿತ್ತು. ವಾಯಿಸರಾಯರ ಸಾರಿಕೆಯೇ ಇದರ ಪರಿಣಾಮ. ಅವರು ಅಯಶಸ್ವಿಗಳಾದ್ದರಲ್ಲಿ ಆಶ್ಚರ್ಯವೇನೂ ಇಲ್ಲ ಆದರೆ ಆಶ್ಚರ್ಯದ ಸಂಗತಿ ಇದು- ಒಂದಲ್ಲ ಒಂದು ಪಕ್ಷವನ್ನು ರಾಷ್ಟ್ರೀಯ ಸರಕಾರ ರಚಿಸಲು ಕರೆಯುವ ಪ್ರಜಾತಂತ್ರಾತ್ಮಕ ಪದ್ಧತಿಯನ್ನು ಬಿಟ್ಟು, ರಾಯಭಾರದವರು ತಮ್ಮ ಇಚ್ಛೆಯ ಸರಕಾರವನ್ನು ದೇಶದ ಮೇಲೆ ಹೇರಲು ನಿರ್ಣಯಿಸಿದ್ದಾರೆ. ಒಂದಕ್ಕೊಂದು ಹೊಂದಿಕೆಯಾಗದ, ಅಥವಾ ಸ್ಫೋಟಕಾರವಾದ ಸತ್ವಗಳ ಮಿಶ್ರಣವಾಗುವದೇ ಇದರ ಪರಿಣಾಮ. ಆದರೆ ಒಂದು ವಸ್ತುವನ್ನು ಇಬ್ಬದಿಯಿಂದ ನೋಡಬಹುದು. ಅದರ ಬೆಳಕಿನ ಬದಿಯನ್ನು ನೋಡಬಹುದು. ಅಥವಾ ಕತ್ತಲೆಯ ಪಾರ್ಶ್ವವನ್ನೂ ನೋಡಬಹುದು. ಬೆಳಕಿನ ಮಗ್ಗುಲಿಂದಲೇ ನೋಡುವದರಲ್ಲಿ ಗಾಂಧೀಜಿಗೆ ವಿಶ್ವಾಸ. ಇತರರೂ ಹಾಗೆಯೇ ನೋಡಬೇಕೆಂದು ಅವರು ಆಶಿಸುತ್ತಾರೆ. "ಹೀಗೆ ನೋಡಿದರೆ, ವಾಯಿಸರಾಯರ ಹೇಳಿಕೆಯಲ್ಲಿ ಯಾವುವು ಕಲಂಕಗಳೆಂದು ಹೊರಗೆ ತೋರುವವೋ ಅವುಗಳಲ್ಲೆ ಅದರ ಸೌಂದರ್ಯ ನಿಹಿತವಾಗಿದೆಯೆಂದು ತೋರಬಹುದು." ಆದರೆ, ಬೆಳಕಿನ ಬದಿ ಅದರಲ್ಲಿ ಇಲ್ಲದೆನೆ ಹೋಗಬಹುದು, ಎಂದು ಆ ಹೇಳಿಕೆ ಪ್ರಕಟವಾದ ದಿನ ಪ್ರಾರ್ಥನಾಸಭೆಯಲ್ಲಿ ಗಾಂಧೀಜಿ ಟೀಕಿಸಿದರು. ಹಾಗಿದ್ದರೆ ರಾಯಭಾರದವರು ದೋಷಿಗಳೆಂದು ಸಿದ್ಧವಾಗಿ ಬಿಡುವದು- ಅದರೂ ನಂಬಿದ್ದರಿಂದ ಕೆಡಕೇನೂ ಇಲ್ಲ. ಹೇಳಿಕೆಯನ್ನು ಕೆಲವೊಂದು ಪರೀಕ್ಷೆಗಳಿಗೆ ಗುರಿ ಮಾಡಿ ನೋಡಬಹುದೆಂದು ಅವರು ಕಾರ್ಯಸಮಿತಿಗೆ ಸೂಚಿಸಿದ್ದರು. ಕಾಂಗ್ರೆಸ್ಸು ಯೋಜನೆಯನ್ನು ಸ್ವೀಕರಿಸಬೇಕಾದರೆ ಆ ಕರಾರುಗಳನ್ನು ಪೂರೈಸುವದು ಅತ್ಯವಶ್ಯವೆಂದು ಅವರ ಮತವಾಗಿತ್ತು. ಆದರೆ ಈ ಪರೀಕ್ಷೆಗಳು ಯಾವೊಂದು ಪಕ್ಷಕ್ಕಾದರೂ ಒಗ್ಗುವದೆಂದು ನಿಯಮವಿಲ್ಲ. ಆದ್ದರಿಂದ ಕಾಂಗ್ರೆಸ್ ಕಾರ್ಯ ಸಮಿತಿ ಯಾವ ಬಗೆಯಾಗಿ ನಿರ್ಧರಿಸುವದೋ ಹೇಳುವದು ಕಠಿಣ. ಆದರೆ ಒಂದು ವಿಷಯ ಮಾತ್ರ ಗಾಂಧೀಜಿ ನಿರ್ಧಾರವಾಗಿ ಹೇಳಿದರು. ಯಾವುದೇ ಅವಸ್ಥೆಯಲ್ಲಾದರೂ ಕಾಂಗ್ರೆಸು ವಿಲಂಬಕ ಉಪಾಯವನ್ನು ಅನುಸರಿಸಿಲ್ಲ. ಅದು ಪ್ರಜಾತಂತ್ರಾತ್ಮಕ ಸಂಸ್ಥೆ. ಆದ್ದರಿಂದ ಅದು ವಾಯಿಸರಾಯರಂತೆ ವಿಧಾಯಕ ಆಜ್ಞೆಯಿಂದ ಯಾವುದನ್ನೂ ಮಾಡಲ್ಪಲಾರದು. ತಾನು ಯಾರ ಪ್ರತಿನಿಧಿಯೆಂದು ಹೇಳಿಕೊಳ್ಳುತ್ತದೆಯೋ ಅವರಲ್ಲಿ ಅತ್ಯಂತ ದುರ್ಬಲ ಅಲ್ಪಸಂಖ್ಯಾಕರನ್ನು ಕೂಡ ವಿಚಾರಿಸಿಯೇ ಅದು ಮುಂದುವರಿಯಬಲ್ಲದು. "ನೀವು ರಾಯಭಾರದವರ ಬಗೆಗೂ ತಾಳ್ಮೆ ತೋರಿಸಬೇಕು." ಎಂದು ಗಾಂಧೀಜಿ ವಾದಿಸಿದರು. "ಏಕೆಂದರೆ ಅವರು ಸಾಮ್ರಾಜ್ಯವಾದದ ಪರಂಪರೆಯಲ್ಲಿ ಬಳೆದವರು. ಒಮ್ಮಿಂದೊಮ್ಮೆ ಅದನ್ನು ಅವರು ಕಳೆದೊಗೆಯಲಾರರು. ಬಡ ಹಿಂದುಸ್ತಾನ ಇದಕ್ಕಾಗಿ ಯಾತನೆ ಅನುಭವಿಸಬೇಕು. ಆದರೆ ಅದನ್ನು ಒಂದೇ ರಾತ್ರಿಯಲ್ಲಿ ಕಳಚಿ ಒಗೆಯಲಿಲ್ಲೆಂದು ಅವರನ್ನು ನಾವು ದೂರಬಾರದು. ಅವರ ಸದುದ್ದೇಶವನ್ನು ನಾವು ನಂಬೋಣ. ಬರಿ ಶಂಕೆಯ ಆಧಾರದಿಂದ ಏನನ್ನೂ ತೀರ್ಮಾನಿಸದಿರೋಣ ಬದಲಿಗೆ, ಎಲ್ಲ ಪಕ್ಷಗಳಿಗೂ ವಿವೇಕ, ಮನಶ್ಶುದ್ಧಿಗಳನ್ನು ದಯಪಾಲಿಸಲೆಂದು ಪರಮಾತ್ಮನನ್ನು ನಾವೆಲ್ಲ ಸೇರಿ ಪ್ರಾರ್ಥಿಸೋಣ."

ಅವಶ್ಯಕ ಲಕ್ಷಣಗಳು

ಇದನ್ನು ಬರೆಯುತಿರುವಾಗ ಕಾಂಗ್ರೆಸ್ ಕಾರ್ಯ ಸಮಿತಿ ಇನ್ನೂ ಗಾಂಧೀಜಿ ಸೂಚಿಸಿದ ಲಕ್ಷಣಗಳ ಒರೆಗಲ್ಲಿಗೆ ವಾಯಿಸರಾಯರ ಯೋಜನೆಯನ್ನು ತಿಕ್ಕುತ್ತಿದೆ. ಕಾಂಗ್ರೆಸ್ಸು ಯಾವಾಗಲೂ ರಾಷ್ಟ್ರೀಯ ಸಂಸ್ಥೆಯೆನಿಸಿಕೊಳ್ಳುತ್ತ ಬಂದಿದೆ. ಎಲ್ಲ ಜಾತಿಗಳ, ಎಲ್ಲ ವರ್ಗಗಳ ಪ್ರತಿನಿಧಿಯೆನಿಸಿದ ತನ್ನ ಹಕ್ಕು, ಕರ್ತವ್ಯಗಳನ್ನು ಗತ್ತುಗಾರಿಕೆಯ ದೃಷ್ಟಿಯಿಂದ ಅದು ಬಲಿ ಕೊಡಲಾರದು. ಹಾಗೆ ಮಾಡಿದರೆ ಅದು ರಾಜಕೀಯ ಆತ್ಮಹತ್ಯೆಯೇ ಸರಿ. ಆ ಹಕ್ಕಿಗೆ ಸೇವೆಯೇ ಮೂಲಾಧಾರ. ಅದೇ ಪ್ರಕಾರ ರಾಜಕೀಯ ಅನುಕೂಲಕ್ಕಾಗಿ ತನ್ನ ಪ್ರಾಮಾಣಿಕ, ವಿಶ್ವಾಸಾರ್ಹ ಮಿತ್ರರನ್ನೂ ಅದು ಕೈಬಿಡಲಾರದು. ಅಂಥ ಸಂದರ್ಭಸಾಧಕತೆಯಿಂದ ಅದರ ನೈತಿಕ ತೇಜಸ್ಸು ಧ್ವಂಸವಾಗಿ ಪರಿಣಾಮದಲ್ಲಿ ಘಾತಕವಾಗದಿರದು. ಯುಧಿಷ್ಠಿರನು ತನ್ನ ನಂಬಿಕೆಯ ನಾಯಿಯನ್ನು ಬಿಟ್ಟು ಸ್ವರ್ಗದಲ್ಲಿ ಕೂಡ ಪ್ರವೇಶಿಸಲು ನಿರಾಕರಿಸಲಿಲ್ಲವೆ ? ಆತ್ಮವನ್ನು ಬಲಿಕೊಟ್ಟು ಜಗತ್ತಿನ ಒಡೆತನವನ್ನು ಸಂಪಾದಿಸುವದು ಬುದ್ಧಿವಂತನ ವ್ಯವಹಾರವಲ್ಲ.

ವರ್ಕಿಂಗ ಕಮೀಟಿ ಗಮನಿಸತಕ್ಕ ವಿಷಯಗಳಿವು. ಈ ನಡುವೆ ಗಾಂಧೀಜಿಯವರು ತಮ್ಮ ಸಭಿಕರಿಗೆ ಅವರ ಕರ್ತವ್ಯವನ್ನು ತಿಳಿಹೇಳುತ್ತಿದ್ದಾರೆ. ಸಾಮೂಹಿಕ ಪ್ರಾರ್ಥನೆಯಲ್ಲಿ ಅಚಲ ವಿಶ್ವಾಸವುಳ್ಳ ಅವರು, ಜನರಿಗೆ ಗುಂಪಾಗಿ ರಾಮಧುನ ಹಾಡಹಚ್ಚುತಿದ್ದಾರೆ. ಆದರೆ ನಾವು ನಮ್ಮ ನಿತ್ಯ ಜೀವನದಲ್ಲಿ ರಾಮನನ್ನು ಅನುಕರಿಸುತಿದ್ದೇವೆಯೆ? ಬಾಯಲ್ಲಿ ರಾಮನಾಮ ಜಪಿಸುತ್ತ ಕೃತಿಯಲ್ಲಿ ರಾವಣನ ರೀತಿ ಅನುಸರಿಸುವದು ನಿರರ್ಥಕ ಮಾತ್ರವಲ್ಲ, ಅದಕ್ಕಿಂತಲೂ ಕೆಟ್ಟ. ಅದು ಶುದ್ಧ ಕಪಟ. ನಾವು ಆತ್ಮವಂಚನೆ ಮಾಡಿಕೊಳ್ಳಬಹುದು. ಜಗತ್ತನ್ನು ವಂಚಿಸಬಹುದು ಆದರೆ ಸರ್ವಶಕ್ತ ಪರಮಾತ್ಮನನ್ನು ವಂಚಿಸಲಾರೆವು. "ಇಂದು ಪಶ್ಚಿಮದಲ್ಲಿ ಜನರು ಕ್ರಿಸ್ತನನ್ನು ಕುರಿತು ಮಾತಾಡುತ್ತಾರೆ. ಆದರೆ ಅವರ ಜೀವನವನ್ನಾಳುತ್ತಿರು

—೯ ನೇ ಪುಟ ನೋಡಿರಿ

ಮುಸೂರಿಯ ಕೆಲ ನೆನಹುಗಳು

ಹತ್ತು ದಿನಗಳ ಮುಸೂರಿಯ ವಾಸಕಾಲದಲ್ಲಿ ಗಾಂಧೀಜಿಯವರು 'ರಜಾ' ತೆಗೆದುಕೊಂಡಿದ್ದರು—ಅಂದರೆ ಗಾಂಧೀಜಿಯ ಭಾಷೆಯಲ್ಲಿ ಕೇವಲ ಸಾರ್ವಜನಿಕ ಕಾರ್ಯಕ್ರಮ, ಭೆಟ್ಟಿಗಳಿಂದ ವಿರಾಮ ತೆಗೆದುಕೊಂಡಿದ್ದರು, ಎಂದರ್ಥ. ಆದರೆ ಇದರಲ್ಲಿ ಅವರಿಗೆ ಸಂಪೂರ್ಣ ಯಶಸ್ಸು ದೊರೆಯಿತೆಂದು ಹೇಳಲಾಸಲ್ಲ. ಕೆಲ ವಿದೇಶಿ ಸುದ್ದಿಗಾರರು ಅವರ ಏಕಾಂತವಾಸದಲ್ಲಿ ನುಗ್ಗಿ ಅವರೊಡನೆ ಸರ್ವ ಸಾಮಾನ್ಯವಾದ ಕೆಲ ಸಂಗತಿಗಳನ್ನು ಕುರಿತು ಮಾತುಕತೆ ನಡೆಸಲು ಸಮರ್ಥರಾದರು. ಆದರಲ್ಲಿ ರಾಜಕಾರಣಕ್ಕೆ ಎಡೆಯಿದ್ದಿಲ್ಲವೆಂದು ಬೇರೆ ಹೇಳಬೇಕಿಲ್ಲ. ಗಾಂಧೀಜಿ ಅವರನ್ನು ತಮ್ಮ ಮುಂಜಾವಿನ ಗಾಳಿ ಸವಾರಿಯ ಕಾಲಕ್ಕೆ ಕಂಡರು.

ಪ್ರಗತಿಗೆ ತಡೆಯೋ ?

"ನಿಮ್ಮ ಖಾದಿ, ಮನೆ ಕೈಗಾರಿಕೆ, ಗ್ರಾಮ ಆರ್ಥಿಕ ಯೋಜನೆ ಮೊದಲಾದ ಕಾರ್ಯಕ್ರಮುಗಳು ಕೃಷಿಪ್ರಧಾನ ದೇಶಗಳಿಗೆ, ಉದಾಹರಣೆಗಾಗಿ ಬಾಲ್ಕನ್ ರಾಜ್ಯಕ್ಕೆ, ಬಹಳ ಮೆಚ್ಚುಗೆಯಾಗಬಹುದು," ಎಂದನೊಬ್ಬ ಸುದ್ದಿಗಾರ. "ಆದರೆ ನಮ್ಮಲ್ಲಿ ಎಷ್ಟೋ ಜನರಿಗೆ, ಅಷ್ಟೇಕೆ ನಿಮ್ಮ ದೇಶ ಬಾಂಧವರಿಗನೇಕರಿಗೆ ಕೂಡ, ಅದು ಪ್ರಗತಿಗೊದಗ್ಗಿದ ತಡೆಯೆಂದು ಅನಿಸುತ್ತಿವೆ. ಬಹಳ ಜನರು ವಿಶಾಲ ಪ್ರಮಾಣದ ಯೋಜನೆಯೂ ಔದ್ಯೋಗೀಕರಣವೂ ಅವಶ್ಯವೆಂದು ಬಗೆಯುತ್ತಾರೆ."

"ನನ್ನ ಕಾರ್ಯಕ್ರಮುದಿಂದ ಹಿಂದುಸ್ತಾನದ ಪ್ರಗತಿಗೆ ಹೇಗೆ ಅಡ್ಡಿಯಾಗುವದು ? ಗಾಂಧೀಜಿ ಪ್ರಶ್ನಿಸಿದರು. "ಹಿಂದುಸ್ತಾನ ೭,೦೦,೦೦೦ ಹಳ್ಳಿಗಳ ಗ್ರಾಮಾಂತರ ರಾಜ್ಯವಲ್ಲವೆ?"

ಆಗಂತುಕನು ತನ್ನ ಆಧಾರವನ್ನು ಬದಲಿಸಿದನು. ನಗರಗಳಿಗೆ ಇದರಿಂದ ಅನ್ಯಾಯ ಮಾಡಿದಂತಾಗುವದೆಂದು ಅವನು ವಾದಿಸಿದನು. "ಮುಂಬಯಿ, ಕಲಕತ್ತೆಗಳಂಥ ದೊಡ್ಡ ನಗರಗಳ ಪಾಡೇನು?'' ಎಂದು ಅವನು ಕೇಳಿದನು.

"ಇದು ಸರಿಯಲ್ಲ. ಪೆಟ್ಟು ತಿಂದವರು ನಗರವಾಸಿಗಳಲ್ಲ, ಬೇರೆಯೆ ಜನರು,'' ಗಾಂಧೀಜಿ ಉತ್ತರಿಸಿದರು. "ನಗರಗಳ ಬೆಳವಣಿಗೆಯೇ ಕೆಡುಕೆಂದು ನನ್ನ ಅಂಬೋಣ. ಅದು ಮಾನವ ಜಾತಿಯ ಜಗತ್ತಿನ ದುರ್ಭಾಗ್ಯ. ಆದರಿಂದ ಇಂಗ್ಲಂಡಿಗೂ ಕೇಡು, ಹಿಂದುಸ್ತಾನಕ್ಕಂತೂ ಸರ್ವಥಾ ಕೇಡೇಕೇಡು. ಬ್ರಿಟಿಶರು ಹಿಂದುಸ್ತಾನವನ್ನು ನಗರಗಳಿಂದಲೇ ಸೂರೆ ಮಾಡಿದರು. ನಗರಗಳು ಹಳ್ಳಿಗಳನ್ನು ಸೂರೆ ಮಾಡಿದವು. ನಗರಗಳ ಭವ್ಯ ಭವನಗಳು ಹಳ್ಳಿಗಳ ರಕ್ತದ ಗಚ್ಚಿನಿಂದ ಕಟ್ಟಿವೆ. ಇಂದು ನಗರಗಳ ಧಮನಿಗಳಲ್ಲಿ ಉಕ್ಕಿ ಹರಿಯುತ್ತಿರುವ ನೆತ್ತರು ಪುನಃ ಹಳ್ಳಿಗಳ ರಕ್ತನಾಳಗಳಲ್ಲಿಯೆ ಹರಿದಾಡಬೇಕೆಂದು ನನ್ನ ಬಯಕೆ.

ಅನ್ಯಾಯದ ಪರಿಮಾರ್ಜನೆ

ಆ ಗೆಳೆಯನಿಗೆ ಇಷ್ಟರಿಂದಲೂ ಸಮಾಧಾನವಾಗಲಿಲ್ಲ "ಮೊದಲ ತಪ್ಪನ್ನೇನೋ ಮಾಡಿ ಆಗಿದೆ," ಅವನು ವಾದಿಸತೊಡಗಿದ. "ಅಂದ ಮಾತ್ರಕ್ಕೆ ಈ ವರೆಗೆ ಮುಂದಿಟ್ಟ ಹೆಜ್ಜೆಗಳನ್ನೆಲ್ಲ ಈಗಾಗಲೆ ಕಟ್ಟನಿಲ್ಲಿಸಿದ್ದನೆಲ್ಲ ಕೆಡಹುವ ಪಾಳಿ ಬಂದರೆ ಸಹ, ಹಿಂದಿಟ್ಟೇ ತೀರಬೇಕೆಂದು ನಿಮ್ಮ ಅಭಿಪ್ರಾಯವೆ?"

"ತಪ್ಪೇನು ?" ಎಂದರು ಗಾಂಧೀಜಿ. "ನಾವು ತಪ್ಪ ಮಾಡಿರುವೆವೆಂದು ಒಮ್ಮೆ ನಮಗೆ ಗೋಚರವಾದ ಮೇಲೆ, ಅ ತಪ್ಪನ್ನು ಒಪ್ಪಿಕೊಂಡು ಮುಂದಿಟ್ಟ ಹೆಜ್ಜೆಗಳನ್ನೆಲ್ಲ ಹಿಂದಿಟ್ಟು, ಹೊಸತಾಗಿ ಮೊದಲು ಮಾಡುವದೊಂದೇ ನಮಗಿರುವ ಹಾದಿ.''

"ಹೇಗೋ ಏನೋ, ಆಧುನಿಕ ಜಗತ್ತಿನಲ್ಲಿ ಬೇರೂರಿರುವ ನಂಬಿಕೆಯಿದು ಈ ವಿಷಯದಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯುವದೆಂದರೆ ಪ್ರಗತಿಗೆ ವಿಘ್ನ ತಂದಂತೆ—ಎಂದು,'' ಆ ಗೆಳೆಯನ ಹಟ.

"ಒಂದು ಹಡಗು ಸಮುದ್ರದಲ್ಲಿ ದಾರಿ ತಪ್ಪಿ ಹೋಯಿತೆಂದು ತಿಳಿಯಿರಿ. ಆಗ ನೀವೇನು ಮಾಡುವಿರಿ? " ಗಾಂಧೀಜಿ ಮಾರುತ್ತರವಿತ್ತರು. "ತಪ್ಪು ದಾರಿಯನ್ನೇ ಹಿಡಿದು ಮುಂದೆ ಹೋಗುವದಿಲ್ಲವಷ್ಟೆ ? ಅದು ಒಡನೆ ಹಿಂದಿರುಗಿ ಪುನಃ ಸರಿದಾರಿಯಲ್ಲಿ ಹೊರಡುವದು. ಕೋಲಂಬಸನು ಎಷ್ಟು ಬಾರಿ ಹೀಗೆ ಮಾಡಿದ್ದನೋ ಏನೊ. ಇಲ್ಲದಿದ್ದರೆ ಆವನು ಕೊನೆ ವರೆಗೂ ನಿರ್ಗತಿಕನಾಗಿ ಉಳಿದು ಬಿಡಬೇಕಾಗುತ್ತಿತ್ತು.''

"ನಗರಗಳನ್ನೆಲ್ಲ ನಿರ್ಜನ ಮಾಡಿ, ನಗರವಾಸಿಗಳನ್ನೆಲ್ಲ ಮರಳಿ ಹಳ್ಳಿಗಳಿಗೆ ಕಳಿಸಿಬಿಡಬೇಕೆಂದು ನಿಮ್ಮ ಅಭಿಪ್ರಾಯವೆ? ''

"ಹಾಗಲ್ಲ. ನನಗೆ ಬೇಕಾದುದಿಷ್ಟೆ, ನಗರದ ಜನರು ತಮ್ಮ ಜೀವನವನ್ನು ಪುನರ್ವ್ಯವಸ್ಥೆಗೊಳಿಸಿಕೊಂಡು ಬಡ ಹಳ್ಳಿಗರನ್ನು ಹಿಂಡಿ ಹೀರದೆ ಬಾಳಲು ಕಲಿಯಬೇಕು. ಅಲ್ಲದೆ, ಈಗ ತಡವಾಗಿದ್ದರೂ ಅವರು ಹಳ್ಳಿಗರಿಗೆ ಸಾಧ್ಯವಿದ್ದ ಎಲ್ಲ ಪರಿಹಾರವನ್ನು ಕೊಡುವ ಪ್ರಯತ್ನದಲ್ಲಿ ಹಳ್ಳಿಯ ಹಾಳು ಬಿದ್ದ ಆರ್ಥಿಕ ಸ್ಥಿತಿಯನ್ನು 'ಪುನರುದ್ಧಾರಗೊಳಿಸಲು ಸಹಾಯ ನೀಡಬೇಕು. "

'ನಾನು ಸರ್ವಾಧಿಕಾರಿಯಾಗಿದ್ದರೆ..."

"ನಿಮ್ಮನ್ನು ಒಂದು ದಿನದ ಮಟ್ಟಿಗೆ ಹಿಂದುಸ್ತಾನದ ಸರ್ವಾಧಿಕಾರಿಯನ್ನಾಗಿ ಮಾಡಿದರೆ ನೀವೇನು ಮಾಡೀರಿ ?'' ಆ ಗೆಳೆಯ ಮಾತು ಬದಲಿಸಿ ಕೇಳಿದನು.

"ಮೊದಲನೆಯದಾಗಿ ನಾನು ಆ ಪದವನ್ನು ಸ್ವೀಕರಿಸಲು ಒಪ್ಪಲಾರೆ, '' ಗಾಂಧೀಜಿಯ ಉತ್ತರ. "ಆದರೂ ನಾನು ಒಂದು ದಿನದ ಪೂರ್ತಿ ಸರ್ವಾಧಿಕಾರಿಯಾಗಿಯೇಬಿಟ್ಟರೆ ದಿಲ್ಲಿಯ ಆ ಹರಿಜನ ವಸತಿಯೆಂದು ಕರೆಯಲ್ಪಡುವ ವಾಯಿಸರಾಯ ಭವನದ ಲಾಯವನ್ನು ಶುಚಿ ಮಾಡುವದರಲ್ಲೇ ಆ ದಿನವನ್ನೆಲ್ಲ ಕಳೆದೇನು. ವಾಯಿಸರಾಯರ ಬುಡದಲ್ಲಿಯೇ ಹರಿಜನ ವಸತಿಯಲ್ಲಿ ಕಾಣಬರುವಂಥ ಬಡತನ, ಹೊಲಸುಗಳು ಇರುವದು ಎಂಥ ನಾಚಿಕೆಗೇಡು. ಮತ್ತೆ ವಾಯಿಸರಾಯರಿಗೆ ಇಷ್ಟು ದೊಡ್ಡ ಭವನವಾದರೂ ಏಕೆ ಬೇಕು ? ನನ್ನ ಮಾತು ನಡೆಯುತಿದ್ದರೆ ನಾನು ಅದನ್ನು ಆಸ್ಪತ್ರೆಯಾಗಿ ಮಾರ್ಪಡಿಸುತಿದ್ದೆ. " ಇದಕ್ಕೆ ಉದಾಹರಣೆಯಾಗಿ ಗಾಂಧೀಜಿಯವರು ತಾವು ಇಳಿದುಕೊಂಡಿರುವ ಬಿರ್ಲಾರ "ಆಶ್ರಮ'' ದಷ್ಟು ಕೂಡ ಚೆನ್ನಾಗಿರದೆ ಇದ್ದ ಅಧ್ಯಕ್ಷ ಕ್ರೂಗರರ ವಸತಿಯನ್ನು ನಿರ್ದೇಶಿಸಿದರು.

"ಇರಲಿ, ಮಹಾಶಯರೇ, '' ಅದೇ ಧಾಟಿಯಲ್ಲಿ ಆ ಗೆಳೆಯ ಮುಂದುವರಿದ. "ನಿಮ್ಮ ಸರ್ವಾಧಿಕಾರಿತ್ವವನ್ನು ಎರಡನೇ ದಿನಕ್ಕೂ ಮುಂದುವರಿಸಿದರೆ ?

"ಎರಡನೆ ದಿನವೂ ಮೊದಲನೆ ದಿನದ ಕೆಲಸವನ್ನೇ ಮುಂದೊತ್ತುವೆ, '' ಎಂದು ಗಾಂಧೀಜಿ ನುಡಿದರು. ಸುತ್ತಲೂ ನಗೆ.

ಬಳಿಕ ಅವರು ಇನ್ನೂ ಎಷ್ಟೋ ವಿಷಯಗಳನ್ನೆತ್ತಿ ಮಾತಾಡಿದರು:— ಹಿಂದುಸ್ತಾನದ ರಾಷ್ಟ್ರಭಾಷೆ, ಇಂಗ್ಲೀಷಿನ ಸ್ಥಾನ, ಸ್ವತಂತ್ರ ಹಿಂದುಸ್ತಾನವನ್ನೆದುರಿಸಬಹುದಾದ ಆಡಳಿತದ ಸಮಸ್ಯೆಗಳು, ಹಿಂದೀ-ಬ್ರಿಟಿಶ ವ್ಯಾಪಾರ ಸಂಬಂಧದ ಭವಿತವ್ಯ.... ಇತ್ಯಾದಿ. ಕೊನೆಗೆ ಅವರು ಅಹಿಂಸೆಯ ಸುದ್ದಿಗೆ ಬಂದರು.

"ನಿದರ್ಶನಕ್ಕಾಗಿ ರಶಿಯಾದೊಡನೆ ಹಿಂದುಸ್ತಾನದ ಸಂಬಂಧ ಹೇಗಿದ್ದೀತು?'' ಆ ಗೆಳೆಯ ಪ್ರಶ್ನಿಸಿದ. "ರಶಿಯಾ ಹಿಂದುಸ್ತಾನದ ಮೇಲೆ ದಾಳಿಯಿಟ್ಟರೆ ಏನು ಗತಿ? "

"ನನ್ನ ಸರ್ವಾಧಿಕಾರಿತ್ವದ ಕೆಳಗೆ ರಶಿಯಾ ತನ್ನ ವೃತ್ತಿಯನ್ನೇ ಕಳೆದುಕೊಂಡು ಕುಳಿತೀತು, ಆದು ಬಂದರೂ ಇಲ್ಲಿ ಉಳಿಯುವದರಿಂದ ಏನೂ ಲಾಭವಿಲ್ಲವೆಂದು ಕಂಡುಕೊಳ್ಳುವದು. ಆದರೆ ಇದು ಒಂದೇ ದಿನದಲ್ಲಿ ಸಾಕ್ಷಾತ್ಕರಿಸಿಕೊಳ್ಳಲಾರದಂಥ ಕನಸೆಂಬುದು ನಿಜ.''

ಇಂಗ್ಲಂಡಿಗೆ ವಿದ್ಯಾರ್ಥಿಗಳನ್ನು ಕಳಿಸುವದು

"ಹಳೆಯ ಪೀಳಿಗೆಯ ಅತಿ ಶ್ರೇಷ್ಠ ಜನರೆಲ್ಲ ಇಂಗ್ಲಂಡಿನಲ್ಲಿ ಶಿಕ್ಷಣ ಪಡೆದವರು— ಉದಾಹರಣೆಗಾಗಿ ನೀವು," ಆ ಗೆಳೆಯ ಮುಂದೆ ಸಾಗಿದ. ಹಿಂದುಸ್ತಾನ ಸ್ವತಂತ್ರವಾದ ಮೇಲೂ ಭಾರತ ಪುತ್ರರನ್ನು ಮೊದಲಿನಂತೆ ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಕಳಿಸಲು ನೀವು ಬಯಸುವಿರಾ? ''

"ಇಲ್ಲ, ಸದ್ಯಕ್ಕಂತೂ ಬೇಡ. ಕೆಲ ಕಾಲದ ನಂತರ ಅಲ್ಲಿಗೆ ಕಳಿಸಿರೆಂದು ನಾನು ಉಪದೇಶಿಸೇನು—೪೦ ವರ್ಷಗಳ ನಂತರ ಎಂದಿಟ್ಟುಕೊಳ್ಳಿರಿ."

"ಅಂದರೆ ಎರಡು ತಲೆಮಾರುಗಳನ್ನು ಪಶ್ಚಿಮದ ಸಂಪರ್ಕದಿಂದ ವಂಚಿಸಿದಂತಾಯಿತು,'' ಎಂದು ಆ ಗೆಳೆಯ ನುಡಿದನು.

ಅಲ್ಲಿಗೆ ೧೨೫ ವರ್ಷ ಬದುಕುವ ಗಾಂಧೀಜಿಯ ಮೋಹದ ವಿಷಯಕ್ಕೆ ಬಂದು ತಲುಪಿದಂತಾಯಿತು.

"ಎರಡು ಪೀಳಿಗೆಯೇಕೆ?'' ಎಂದು ಕೇಳಿದರವರು. "೪೦ ವರ್ಷಗಳು, ಏಕೆ ೬೦ ವರ್ಷಗಳು ಕೂಡ, ಒಂದು ವ್ಯಕ್ತಿಯ ಜೀವನದಲ್ಲಿ ಸಹ ಅಷ್ಟು ದೊಡ್ಡ ಅವಧಿಯೇನಲ್ಲ. ಸರಿಯಾಗಿ ಬಾಳುವೆ ಮಾಡಿದರೆ, ಈ ದೇಶದಲ್ಲಿ ದುರ್ದೈವದಿಂದ ಅನೇಕರಿಗಾಗುವಂತೆ, ೬೦ ವರ್ಷಕ್ಕೇ ಮುದುಕನಾಗಿ ಬಿಡಬೇಕಾಗಿಲ್ಲ- ವಯಸ್ಸಾದ ಮೇಲೆಯೆ ಇಂಗ್ಲಂಡಿಗೆ ಹೋಗಬೇಕೆಂದು ನನ್ನ ಹೇಳಿಕೆ. ಏಕೆಂದರೆ, ತಮ್ಮ ಸಂಸ್ಕೃತಿಯಲ್ಲಿರುವ ಒಳ್ಳೆಗಳನ್ನು ತಿಳಿದುಕೊಂಡ ಮೇಲೆಯೆ ಇಂಗ್ಲಂಡ ಅಥವಾ ಅಮೇರಿಕೆ ಕೊಡಬಹುದಾದ ಒಳಿತನ್ನು ಅರಿತು ಅರಗಿಸಿಕೊಳ್ಳಲು ಅವರಿಗೆ ಸಾಧ್ಯವಾದೀತು. ನನ್ನಂತೆ ೧೭ ವರ್ಷದ ಹುಡುಗನೊಬ್ಬನು ಇಂಗ್ಲಂಡಿಗೆ ಹೋಗುವ ಕಲ್ಪನೆ ಮಾಡಿಕೊಳ್ಳಿರಿ— ಅವನು ಪೂರ್ತಿ ಲೀನವಾಗಿ ಹೋಗುವದೇ ಸರಿ.''

"ಹಾಗಾದರೆ ನೀವು ಎಂದಾದರೊಮ್ಮೆ ಇಂಗ್ಲಂಡಿಗೆ ಬರುವಿರೆಂದು ನಾವು ನಿರೀಕ್ಷಿಸೋಣವೆ?"

"ಯಾಕಾಗವೊಲ್ಲದು?" ಎಂದು ಗಾಂಧೀಜಿ ನಗೆಯೆಬ್ಬಿಸಿ ನುಡಿದರು.

ಸತ್ಯವೊ ಅಹಿಂಸೆಯೊ?

ಇನ್ನೊಬ್ಬ ಪ್ರೀತಿಯ ಗೆಳೆಯ ಅವರೊಡನೆ ಒಂದು ಸಂಜೆ ವಾರ್ತಾಲಾಪ ಮಾಡುತ್ತ ನಡುವೆ ಹೇಳಿದ್ದು: "ಗಾಂಧೀಜಿ, ನೀವು ನಮ್ಮನ್ನು ಸ್ವಾತಂತ್ರ್ಯದ ಹೊಸ್ತಿಲಿಗೇ ತಂದು ನಿಲ್ಲಿಸಿದ್ದೀರಿ. ಅದಕ್ಕಾಗಿ ನಾವು ಕೃತಜ್ಞತೆ ತೋರಿಸಿದಷ್ಟು ಸಾಲದು ನೀವೇನೋ ಇದರ ಎಲ್ಲ ಯಶಸ್ಸನ್ನು ಅಹಿಂಸೆಗೇ ಸಲ್ಲಿಸಬಹುದು—ಅದು ನಿಮ್ಮ ಮಮತೆಯ ಕೂಸು. ಆದರೆ ನಮ್ಮ ಪಾಲಿಗೆ ನಾವು, ನಿಮ್ಮ ಅಹಿಂಸೆಗಿಂತಲೂ ಸತ್ಯವೇ ನಮಗೆ ಹೆಚ್ಚು ಬಲವನ್ನು ನೀಡಿತೆಂದು ತಿಳಿದುಕೊಂಡಿದ್ದೇವೆ.

"ಅಹಿಂಸೆಯಲ್ಲಿ ಪಕ್ಷಪಾತವಿಟ್ಟು ನಾನು ಸತ್ಯಕ್ಕೆ ಎರಡನೆಯ ಸ್ಥಾನ ಕೊಟ್ಟದ್ದೇನೆಂದು ನೀವು ತಿಳಿದುಕೊಳ್ಳುವದೇ ತಪ್ಪು." ಗಾಂಧೀಜಿ ಉತ್ತರಿಸಿದರು. "ಅಹಿಂಸೆಗಿಂತಲೂ ಹೆಚ್ಚಾಗಿ ಸತ್ಯದಿಂದಲೇ ಈ ದೇಶಕ್ಕೆ ಸತ್ವ ದೊರಕಿತೆಂಬ ನಿಮ್ಮ ಭಾವನೆಯೂ ಅಷ್ಟೇ ತಪ್ಪಾದುದು. ತದ್ವಿರುದ್ಧವಾಗಿ, ಈ ದೇಶವೇನಾದರೂ ಮುಂದಡಿಯಿಟ್ಟದ್ದರೆ, ಆದು ಅಹಿಂಸೆಯನ್ನು ಹೋರಾಟದ ಸಾಧನವಾಗಿ ಅಂಗೀಕರಿಸಿದ್ದರಿಂದಲೇ ಆಗಿದೆಯೆಂದು ನನ್ನ ಗಟ್ಟಿ ಮನವರಿಕೆ.''

"ನಿಮ್ಮ ಅಹಿಂಸೆಯನ್ನು ದೇಶ ಅರ್ಥಮಾಡಿಕೊಂಡಿಲ್ಲ. ಆದರೆ ಸತ್ಯ ಆದಕ್ಕೆ ಅರ್ಥವಾಗಿದೆ. ಅದರಿಂದಲೇ ಅದಕ್ಕೆ ಶಕ್ತಿ ದೊರಕಿದೆ ಎಂದಿಷ್ಟೇ ನನ್ನ ಆಶಯ,'' ಗೆಳೆಯನ ಮಾರುತ್ತರ

"ಸತ್ಯ ಮಾತ್ರ ಇದಕ್ಕೆ ವಿಪರೀತವಾಗಿದೆ," ಗಾಂಧೀಜಿಯ ಹಟ. "ದೇಶದಲ್ಲಿ ಬಹಳಷ್ಟು ಅಸತ್ಯ ತುಂಬಿದೆ. ಒಮ್ಮೊಮ್ಮೆ ನನಗೆ ಉಸಿರೇ ಕಟ್ಟಿದಂತಾಗುತ್ತಿದೆ. ಅದ್ದರಿಂದ ಅಹಿಂಸೆಯ ಆಚರಣೆಯೊಂದೆ, ಆದೆಷ್ಟೇ ಸದೋಷವಿರಲೊಲ್ಲದೇಕೆ, ನಮ್ಮನ್ನು ಇಷ್ಟು ದೂರ ಕರೆದುಕೊಂಡು ಬಂದಿದೆಯೆಂದು ನನಗೆ ಮನವರಿಕೆಯಾಗಿದೆ.''

"ಇನ್ನು, ನೀವೆಣಿಸಿರುವಂತೆ ಸತ್ಯಕ್ಕೆ ನಾನು ಎರಡನೆಯ ಸ್ಥಾನವನ್ನು ಕೊಟ್ಟಿಲ್ಲ." ಗಾಂಧೀಜಿ ಮುಂದುವರಿಸಿದರು. ದೇವರೇ ಸತ್ಯವೆಂದು ಹಿಂದೆ ಹೇಳುತಿದ್ದ ತಾವು ಈಗ ಸತ್ಯವೇ ದೇವರೆಂಬ ನಿರ್ಣಯಕ್ಕೆ ಬಂದಿರುವದಾಗಿ ಜಿನವಾದ ಸಭೆಯೊಂದರಲ್ಲಿ ಹೇಳಿ ಎಲ್ಲರನ್ನೂ ದಂಗುಬಡಿಸಿದ ಬಗೆಯನ್ನು ಅವರು ಬಣ್ಣಿಸಿದರು.

"ಆದೇನೇ ಇರಲಿ, ನೀವು ಅಹಿಂಸೆಯನ್ನೇ ಯಾವಾಗಲೂ ಒತ್ತಿ ಹೇಳುತಿರುತ್ತೀರಿ. ಅಹಿಂಸೆಯ ಉಪದೇಶವನ್ನೇ ನೀವು ನಿಮ್ಮ ಜೀವನದ ಗುರಿಯನ್ನಾಗಿ ಮಾಡಿಕೊಂಡಿದ್ದೀರಿ,'' ಎಂದು ಆ ಗೆಳೆಯ ಸಾಧಿಸಿದ. ಗಾಂಧೀಜಿಯ ಮಾತನ್ನು ಒಪ್ಪಿಕೊಳ್ಳಲು ಇನ್ನೂ ಅವನಿಗೆ ಮನಸಿದ್ದಿಲ್ಲ.

"ಪುನಃ ನೀವು ತಪ್ಪಿದ್ದೀರಿ, ಎಂದು ಗಾಧೀಜಿ ತೋರಿಸಿದರು." ಅಹಿಂಸೆ ಗುರಿಯಲ್ಲ, ಸತ್ಯವೇ ಗುರಿ. ಆದರೆ ಮಾನವ ವ್ಯವಹಾರಗಳಲ್ಲಿ ಸತ್ಯವನ್ನು ಸಾಕ್ಷಾತ್ಕರಿಸಲು ಅಹಿಂಸಾಚರಣೆಯ ಹೊರತು ಅನ್ಯ ಉಪಾಯವಿಲ್ಲ. ಅಹಿಂಸೆಯ ಅಚಂಚಲ ಅನುಸರಣೆಯಿಂದ ಸತ್ಯಕ್ಕೆ ನಾವು ತಲುಪಿಯೇ ತೀರುವೆವು—ಹಿಂಸೆಯ ಮಾತು ಹಾಗಲ್ಲ. ನಾನು ಅಹಿಂಸೆಯ ಪಣತೊಡಲು ಇದೇ ಕಾರಣ. ಸತ್ಯ ನನ್ನಲ್ಲಿ ಸ್ವಾಭಾವಿಕವಾಗಿ ಅವಿರ್ಭವಿಸಿತು. ಅಹಿಂಸೆಯನ್ನು ನಾನು ಬಹಳ ಹೆಣಗಿದ ನಂತರವೇ ಗಳಿಸಿದೆ. ಆದರೆ ಅಹಿಂಸೆಯೇ ಸಾಧನವಾಗಿರುವದರಿಂದ ನಿತ್ಯಜೀವನದಲ್ಲಿ ನಮಗೆ ಸಹಜವಾಗಿ ಅದರಲ್ಲೇ ಆಸಕ್ತಿ. ಆದುದರಿಂದ ನಾವು ಜನತೆಗೆ ಅಭ್ಯಾಸ ಮಾಡಿಸಬೇಕಾದ್ದು ಅಹಿಂಸೆಯ ಪಾಠ. ಸತ್ಯದ ಶಿಕ್ಷಣ ಆದರ ಬೆನ್ನಹಿಂದೆ ಸಹಜ ಆದರ್ಶವಾಗಿ ಬರುವದು. ''

ಹೊಸದಿಲ್ಲಿ —ಪ್ಯಾರೇಲಾಲ

೧೭—೬—೪೬

ನಾರದ ಪತ್ರ

೮ ನೇ ಪುಟದಿಂದ ಮುಂದರಿದಿದ್ದು

ವದು ಕ್ರಿಸ್ತ-ಶತ್ರು. ಅದೇ ಪ್ರಕಾರ ಇಸ್ಲಾಮದ ಮಾತಾಡುತ್ತ ಸೈತಾನನನ್ನು ಅನುಸರಿಸುವವರೂ ಇದ್ದಾರೆ. ಇದೀಗ ವಿಷಾದದ ಸಂಗತಿ. ನಮ್ಮದಲ್ಲದ ಧರ್ಮವನ್ನು ಅನುಸರಿಸುವವರನ್ನು ನೋಡಿ ನಾವು ಹೆದರಿಕೊಳ್ಳುತ್ತೇವೆ. ಅವರು ನಮ್ಮನ್ನು ನುಚ್ಚುನುರಿ ಮಾಡುವರೆಂದು ಯೋಚಿಸುತ್ತೇವೆ. ದೇವರೇ ನಮ್ಮ ಶರಣಾಗಿದ್ದರೆ ಯಾರೂ ನಮ್ಮನ್ನು ತುಳಿಯಲಾರರೆಂದು ನಮಗೆ ತಿಳಿಯುವದೇ ಇಲ್ಲ. ಇದೇ ಈಗ ಹಾಡಿದ ಸ್ತೋತ್ರದಲ್ಲಿ ದೇವರು ಪಾಪಿಗಳನ್ನು ಹೇಗೆ ಸಲಹಿದ್ದಾನೆಂದು ವಿವರಿಸಿದೆ. ಅಂದ ಮೇಲೆ ತನ್ನ ಭಕ್ತರಿಗಾಗಿ ಅವನು ಏನೇನು ಮಾಡಲಾರ ? ಆದರೆ ನಾವು ನಿಜವಾದ ದೈವಭಕ್ತರಾಗಿರಬೇಕು. ಅಷ್ಟೇ. '' ನಾವು ದೇವರ ಆಜ್ಞೆಯನ್ನು ಅನುಸರಿಸಿದರೆ ಇಂದು ಜಗತ್ತಿನಲ್ಲಿ ಇಷ್ಟೊಂದು ಲಂಚಗುಳಿತನ, ಲಾಭಬಡಕತನ ಇರುತಿರಲಿಲ್ಲ, ಎಂದು ಗಾಂಧೀಜಿ ಮುಂದೆ ಸಾಗಿದರು. ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತಿದ್ದರೆ ಬಡವರು ಇನ್ನಷ್ಟು ಬಡವರಾಗುತಿದ್ದಾರೆ. ಹಸಿವು, ನಗ್ನತೆ, ಸಾವುಗಳು ಜನರ ಮುಂದೆ ಬಾಯ್ದೆರೆದು ನಿಂತಿವೆ. ಇವು ದೇವರ ರಾಜ್ಯದ ಲಕ್ಷಣಗಳಲ್ಲ, ಸೈತಾನನ, ರಾವಣನ, ಕ್ರಿಸ್ತಶತ್ರುವಿನರಾಜ್ಯದ ಚಿಹ್ನಗಳು. ಭೂಮಿಯಲ್ಲಿ ದೇವರ ರಾಜ್ಯವನ್ನು ನೆಲೆಗೊಳಿಸಬೇಕಾದರೆ ಅವನ ನಾಮವನ್ನು ಬರಿ ಬಾಯಿಂದ ಮಣಮಣಿಸಿದರೆ ಸಾಲದು. ನಮ್ಮ ನಡತೆ ಅವನು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಬೇಕು. ಸೈತಾನನ ಹಾದಿಯಲ್ಲಲ್ಲ.

ಹೊಸದಿಲ್ಲಿ ಪ್ಯಾರೆಲಾಲ

೧೬-೬-೪೬

ಸರಕಾರದ ಗಮನಕ್ಕಾಗಿ

ಚಿತ್ತೂರಿನಿಂದ ಪತ್ರ ಲೇಖಕನೊಬ್ಬನು ಗಾಂಧೀಜಿಯವರಿಗೆ ಬರೆಯುತ್ತಾನೆ.

"ಭೂಸುಧಾರಣೆ ಸಾಲ ಕಾಯದೆ ಮತ್ತು ಒಕ್ಕಲತನ ಸುಧಾರಣೆ ಸಾಲ ಕಾಯಿದೆಯನ್ವಯ ಒಕ್ಕಲಿಗರಿಗೆ ಕೊಟ್ಟ ಸಾಲಕ್ಕೆ ಈಗ ನೂರಕ್ಕೆ ೫॥ ಯಂತೆ ಬಡ್ಡಿ ಹಾಕಲಾಗುತ್ತದೆ. ಆದರೆ ಸದ್ಯಕ್ಕೆ ಸರಕಾರದವರಿಗೆ ಪೇಟೆಯಲ್ಲಿ ನೂರಕ್ಕೆ ೩-೩½ ದರದಿಂದ ಸಾಲ ಸಿಕ್ಕುವುದು. ಇದು ಕೇಂದ್ರ ಸರಕಾರದ ವಿಷಯ. ಹಿಂದುಸ್ತಾನ ಸರಕಾರದವರು ಎಲ್ಲ ಸಾಲವನ್ನು ಬಡ್ಡಿಯಿಲ್ಲದೆ ಕೊಡಬೇಕು ಬಡ್ಡಿ ತೆಗೆದುಕೊಳ್ಳುವುದೆ ಆದರೆ ಬಹಳಾದರೆ ೧೦೦ ಕ್ಕೆ ೩॥ ಯಂತೆ ತೆಗೆದುಕೊಳ್ಳಬಹುದು.

ಮುಸೂರಿ ಪ್ಯಾರೇಲಾಲ

೭—೬—೪೬

ಪ್ರಶ್ನೆ—ಪೆಟ್ಟಿಗೆ

ಲೂಟಿ

ಪತ್ರಲೇಖಕರೊಬ್ಬರು ಬರೆಯುತ್ತಾರೆ.—

“ಸರಕಾರಿ ಇಲ್ಲವೆ ಖಾಸಗಿ ವಖಾರಗಳಲ್ಲಿ ಆಹಾರ ಧಾನ್ಯಗಳು ಕೊಳೆಯುತಿರುವಾಗ, ಪೇಟೆಯಲ್ಲಿ ಏನೂ ಧಾನ್ಯ ಸಿಕ್ಕದಿದ್ದು ಜನತೆ ಉಪವಾಸ ಬಳಲುತಿರುವಾಗ ಕಾರ್ಯಕರ್ತರು ಏನು ಮಾಡಬೇಕು? ಜನತೆಯನ್ನು ರಕ್ಷಿಸುವುದಕ್ಕಾಗಿ ನೀವು ಧಾರಸಾನಾದ ದಾಳಿಯ ಕಾಲಕ್ಕೆ ಕೈಕೊಂಡಂಥ ಕ್ರಮವನ್ನು ಕೈಕೊಳ್ಳುವುದಕ್ಕೆ ಅಪ್ಪಣೆಯಿದೆಯೆ? ಲೂಟಿ ಮಾಡುವದು ಇಲ್ಲವೆ ಮೂಕ ಪ್ರಾಣಿಗಳಂತೆ ಸಾಯುವುದು ಇವೆರಡರ ಹೊರತು ಮೂರನೆಯ ಉಪಾಯನಾವುದು? ಮೇಲಿನ ಎರಡೂ ಉಪಾಯಗಳು ನಿಮಗೆ ಒಪ್ಪಿಗೆಯಿಲ್ಲ”

ಲೂಟಿಯಿಂದ ಯಾವದೇಬಗೆಯ ಒಳ್ಳಿತಾಗುವದಿಲ್ಲೆಂಬುದು ಸಾಮಾನ್ಯವಾದ ನಿಯಮ. ಲೂಟಿಯಿಂದ ಎಲ್ಲಿಯಾದರೂ ಇಷ್ಟಪ್ರಾಪ್ತಿಯಾದುದು ಕಂಡು ಬಂದಿದ್ದರೆ ಅದು ಕೇವಲ ಜನತೆಯ ಅತ್ಯವಶ್ಯಕ ಬೇಡಿಕೆಯತ್ತ ಸರಕಾರದ ಲಕ್ಷವನ್ನು ಎಳೆಯುವುದಕ್ಕೆ ಮಾತ್ರ. ನಾನು ಸೂಚಿಸಿದಂಥ (ಸ್ವೇಚ್ಛಾನಿರಾಹಾರ) ಮಾರ್ಗವೆ ಅತ್ಯಂತ ಪರಿಣಾಮಕಾರಿಯಾದುದು. ಏಕೆಂದರೆ ಅದು ಸ್ವತಃ ಒಳಿತಾಗಿರುವದಲ್ಲದೆ ಪರಿಣಾಮಕಾರಿಯಾದ ಪ್ರಾತ್ಯಕ್ಷಿಕೆಯದೂ ಉಪಯುಕ್ತವಿದೆ. ಅದು ಸ್ವತಃ ಏಕೆ ಒಳಿತಾಗಿರುವುದೇಕೆಂದರೆ ಸ್ವಯಂ ಉಪವಾಸ ಮಾಡುವ ಜನರು ತಮ್ಮ ಮನಃಶಕ್ತಿಯನ್ನು ಪ್ರದರ್ಶಿಸುವರು. ಇದರಿಂದ ಅವರು ಕ್ಷುದ್ಬಾಧೆಯಿಂದ ರಕ್ಷಿತರಾಗುವರು. ಅಲ್ಲದೆ ಜನತೆಯಲ್ಲಿ ಮಾತ್ರ ಸರಕಾರದಲ್ಲಿ ಸದಸದ್ವಿವೇಕ ಬುದ್ಧಿಯನ್ನು ಜಾಗ್ರತಗೊಳಿಸುವರು. ಅದಳಿ ಅಧಿಕಾರಿಗಳಲ್ಲಿ ಸದಸದ್ವಿವೇಕ ಬುದ್ಧಿಯಿದ್ದರೆ ಮಾತ್ರ ಅದು ಜಾಗ್ರತವಾಗುವದೆಂದು ಬೇರೆ ಹೇಳಬೇಕಿಲ್ಲ.

ಧಾರಸಾನಾ ಉಪ್ಪಿನ ಆಗರದ ಮೇಲೆ ಮಾಡಿದ ದಾಳಿಯ ಸಂಬಂಧದಲ್ಲಿ ಹೇಳಬೇಕಾದರೆ ನನ್ನ ದೃಷ್ಟಿಯಿಂದ ಅದರಲ್ಲಿ ಅನೇಕ ತಪ್ಪುಗಳಿದ್ದವೆಂಬ ಸಂಗತಿಯನ್ನು ಬಿಟ್ಟುಗೊಟ್ಟರೂ ಆ ಬಗೆಯ ಅದೊಂದು ಪರಿಪೂರ್ಣ ಸಂಗತಿಯಾಗಿತ್ತು; ಮತ್ತು ವೀರೋಚಿತ ಹೋರಾಟವಾಗಿತ್ತು. ಆ ಹೋರಾಟದಲ್ಲಿ ಬಂದ ಸಂಕಷ್ಟಗಳನ್ನು ಅತ್ಯಂತ ಧೈರ್ಯದಿಂದ ಸಹಿಸಲಾದುವು. ಆದರೆ ಅದರಲ್ಲಿ ಮತ್ತು ಲೂಟಿಯಲ್ಲಿರುವ ಭೇದವನ್ನು ಯೋಗ್ಯ ರೀತಿಯಿಂದ ಮನಸಿನಲ್ಲಿಟ್ಟುಕೊಳ್ಳತಕ್ಕದ್ದು. ಧಾರಸಾನಾ ಉಪ್ಪಿನ ಆಗರಗಳು ರಾಷ್ಟ್ರೀಯ ಸೊತ್ತೆಂದು ಭಾವಿಸಲಾಗಿತ್ತು. ಒತ್ತಾಯದಿಂದ ಆ ಸೊತ್ತನ್ನು ವಶಪಡಿಸಿಕೊಳ್ಳುವುದು ಅದರ ಉದ್ದೇಶವಾಗಿರಲಿಲ್ಲ. ಹಿಂದುಸ್ತಾನದಲ್ಲಿ ಭೂಮಿಯಲ್ಲಿ ಮತ್ತು ಸಮುದ್ರದಲ್ಲಿ ದೊರೆವ ಉಪ್ಪನ್ನೆಲ್ಲ ಪಡೆಯುವ ಹಕ್ಕು ರಾಷ್ಟ್ರಕ್ಕಿದೆಂಬುದನ್ನು ಸಿದ್ಧಪಡಿಸುವದೇ ಈ ಹೋರಾಟದ ಉದ್ದೇಶವಾಗಿತ್ತು. ಆ ದಾಳಿ ಯಶಸ್ವಿಯಾಗಿದ್ದರೆ ಅಂದರೆ ಸರಕಾರದವರು ಮಣಿದಿದ್ದರೆ, ಅಂಥ ಸಂದರ್ಭಗಳಲ್ಲಿ ರಾಷ್ಟ್ರವು ಪಟ್ಟ ಕಷ್ಟನಿಷ್ಠುರಗಳಿಗಾಗಿ ಅವರು ಹಾಗೆ ಮಾಡಿದಂತಾಗುತಿತ್ತು. ವಸ್ತುಸ್ಥಿತಿಯನ್ನು ಹೇಳಬೇಕಾದರೆ ಇಡೀ ರಾಷ್ಟ್ರದ ಜನತೆ ಪಟ್ಟ ಕಷ್ಟನಿಷ್ಠುರಗಳ ಪರಿಣಾಮವಾಗಿಯೆ ಆಯರ್ವಿನ್ ಗಾಂಧಿ ಒಡಂಬಡಿಕೆಯೆಂದು ಕರೆಯಲ್ಪಡುವ ಒಪ್ಪಂದವಾಯಿತು. ಆದುದರಿಂದ ಈ ಪತ್ರಲೇಖಕನ ಮನಸಿನಲ್ಲಿರುವ ಲೂಟಿ ಮತ್ತು ಧಾರಸಾನಾ ದಾಳಿಯಲ್ಲಿ ಯಾವದೇ ಬಗೆಯ ಸಾಮ್ಯವಿರುವುದಿಲ್ಲೆಂಬುದು ಸ್ಪಷ್ಟವಿದೆ

ಹೊಸದಿಲ್ಲಿ ಮೋ. ಕ. ಗಾಂಧಿ

೧೩—೬—೪೬

ಭಂಗೀ ಸಂಪುಗಳು

ಲೂಟಿಯ ಔಚಿತ್ಯದ ಬಗೆಗೆ ಬರೆದ ಪತ್ರಲೇಖಕನೆ, ಎಲ್ಲ ಪ್ರಯತ್ನಗಳೂ ಅಯಶಸ್ವಿಯಾದಾಗ ಬಡ ಭಂಗಿಯು ಯಾವ ಉಪಾಯ ಕೈಕೊಳ್ಳಬೇಕೆಂದು ಕೇಳುತ್ತಾನೆ. ಅವನು ರೊಚ್ಚಿನಿಂದ ಕೇಳುತ್ತಾನೆ. “ಭಂಗಿಯು ಹೊಟ್ಟೆಗೆ ಸಾಲದಷ್ಟು ಕೂಲಿ ತೆಗೆದುಕೊಂಡು ಹೊಲಸು ಹೇಸಿಗೆಯ ಕೆಲಸ ಸಾಗಿಸಬೇಕೊ?” ಪ್ರಶ್ನೆಯು ಉಚಿತವಾಗಿದೆ. ಇಂಥ ಸಂದರ್ಭಗಳಲ್ಲಿ ಯೋಗ್ಯವಾದ ಉಪಾಯವು ಸಂಪು ಹೂಡುವದಲ್ಲ. ಯಾವ ಉದ್ಯೋಗ ಮಾಡುವುದರಿಂದ ಉಪವಾಸ ಬಳಲುವ ಜೀವನವನ್ನು ಸಾಗಿಸಬೇಕಾದ ಪ್ರಸಂಗ ಬರುವದೊ ಅಂಥ ಭಂಗಿ ಕೆಲಸವನ್ನೆ ಭಂಗಿಗಳು ಬಿಟ್ಟುಗೊಡಲಿಕ್ಕೆ ಬೇಕಾಗುವುದೆಂಬುದಾಗಿ ಸಾರ್ವಜನಿಕರಿಗೆ ವಿಶೇಷತಃ ತಮ್ಮನ್ನು ನವಕರಿಗೆ ಇಟ್ಟುಕೊಂಡ ಸಂಸ್ಥೆಗಳಿಗೆ ನೋಟೀಸು ಕೊಡುವುದೆ ಯೋಗ್ಯವಾದ ಉಪಾಯವೆಂದು ನಾನು ಹೇಳಬಯಸುತ್ತೇನೆ. ಸಂಪು ಮತ್ತು ಕೆಲಸವನ್ನು ಸಂಪೂರ್ಣ ಬಿಟ್ಟುಗೊಡುವದರಲ್ಲಿ (ತಾತ್ಪೂರ್ತಿಕವಾಗಿಯಲ್ಲ) ಮಹತ್ವದ ಅಂತರವಿದೆ. ಪರಿಹಾರ ಪಡೆಯುವದಕ್ಕಾಗಿ ಹೂಡಿದ ತಾತ್ಪೂರ್ತಿಕ ಉಪಾಯ ಸಂಪು. ಯಾವ ಕೆಲಸದಲ್ಲಿ ಪರಿಹಾರ ಸಿಕ್ಕುವ ಸಂಭವವಿಲ್ಲವೊ ಅಂಥ ವಿಶಿಷ್ಟ ಕೆಲಸ ಬಿಟ್ಟುಗೊಡುವುದು, ಆ ಉದ್ಯೋಗವನ್ನೆ ಬಿಟ್ಟುಗೊಡುವದು ಯೋಗ್ಯ ರೀತಿಯಿಂದ ನೋಟೀಸ ಕೊಡುವದು ಮತ್ತು ಹೆಚ್ಚು ಕೂಲಿ ಮತ್ತು ಹೊಲಸು ಹೇಸಿಗೆಯಿಂದ ಮುಕ್ತತೆ ಇವೆರಡು ದೊರೆತರೆ ಮಾತ್ರ ಕೆಲಸ ಬಿಟ್ಟದ್ದು ಉಚಿತವೆನಿಸಬಹುದು. ಇದರಿಂದ ಸಾರ್ವಜನಿಕರನ್ನು ಅಪಮಾನದ ನಿದ್ರೆಯಿಂದ ಎಚ್ಚರಿಸಿ ಜಂಗು ತಿಂದ ಅವರ ಸದಸದ್ವಿವೇಕ ಬುದ್ಧಿಯನ್ನು ಯೋಗ್ಯ ರೀತಿಯಿಂದ ಹಸನ ಮಾಡಿದಂತಾಗುವದು. ಇದರಿಂದ ಭಂಗಿಗಳು ತಮ್ಮ ಹೋರೆಯ ಅಂತಸ್ತನ್ನೇರಿಸಿ ಅದನ್ನು ಕಲೆಯನ್ನಾಗಿ ಪರಿವರ್ತಿಸಿದಂತಾಗುವುದು. ಮತ್ತು ಬಹಳ ಹಿಂದೆಯೆ ಆ ಹೋರೆಗೆ ಸಿಕ್ಕಬೇಕಾಗಿದ್ದ ಸ್ಥಾನಮಾನಗಳನ್ನು ಅದಕ್ಕೆ ಕಲ್ಪಿಸಿ ಕೊಟ್ಟಂತಾಗುವುದು.

ಹೊಸದಿಲ್ಲಿ ಮೋ. ಕ. ಗಾಂಧಿ

೫-೬-೪೬

ಅಣುವಿನಲ್ಲಿ ಮಹತ್ತು

“ಮಹಾದೇವ ದೇಸಾಯರು ತ್ರಾವಣಕೋರ ಮಂದಿರ ಪ್ರವೇಶ ಘೋಷಣೆ ಸಂಬಂಧದಲ್ಲಿ ಬರೆದ ಪುಸ್ತಕದಲ್ಲಿ, ತ್ರಾವಣಕೋರದಲ್ಲಿ ಅನೇಕ ಕಡೆ ನೀವು ಮಾಡಿದ ಬೇರೆ ಬೇರೆ ಭಾಷಣಗಳು ಪ್ರಕಟವಾದುದನ್ನು ನಾನು ನೋಡಿದ್ದೇನೆ. ಈ ಶೋಪನಿಷತ್ತಿನ ಉಲ್ಲೇಖವನ್ನು ಮಾಡುತ್ತ ಹಿಂದೂ ಶಾಸ್ತ್ರಗಳೆಲ್ಲ ನಾಶವಾಗಿ ಕೇವಲ ಆ ಈಶೋಪನಿಷತ್ತಿನಲ್ಲಿಯ ಮೊದಲನೆಯ ಒಂದೆ ಮಂತ್ರವುಳಿದರೂ ಅದು ಧರ್ಮವನ್ನು ಹ್ರಾಸ ಮಾಡಗೊಡದೆ ಉಳಿಸಬಲ್ಲದೆಂದು ಅಭಿಪ್ರಾಯಪಟ್ಟಿರುವಿರಿ. ಕವಿವರ್ಯರ ತಂದೆ ದೇವೇಂದ್ರನಾಥ ಟಾಗೋರರ ಜೀವನವನ್ನು ಮಾರ್ಪಡಿಸಿದ್ದೇ ಆ ಮಂತ್ರವೆಂಬುದು ಕದಾಚಿತ ನಿಮಗೆ ಗೊತ್ತಿರಬಹುದು. ಅವರ ತಂದೆ ತೀರಿಕೊಂಡು ಕುಟುಂಬದ ಆಸ್ತಿಯ ಮೇಲೆ ಬಹಳ ಭಾರ ಹಾಕಿ ಹೋದಾಗ ತರುಣ ದೇವೇಂದ್ರನಾಥರು ಅತ್ಯಂತ ಖಿನ್ನಮನಸ್ಕರಾಗಿದ್ದರು. ಅವರು ಅದೇ ಸ್ಥಿತಿಯಲ್ಲಿ ಒಂದು ದಿನ ಕುಳಿತಾಗ ಗಾಳಿಯಿಂದ ಹಾರಿ ಬಂದ ಮುದ್ರಿತ ಕಾಗದದ ತುಣಕೊಂದು ಅವರ ಕೈಗೆ ಸಿಕ್ಕಿತು. ಅವರದನ್ನೆತ್ತಿಕೊಂಡರು. ಅದು ಸಂಸ್ಕೃತದಲ್ಲಿದ್ದಿತು. ಆಗ ಅವರಿಗೆ ಸಂಸ್ಕೃತದ ಪರಿಚಯವಿರಲಿಲ್ಲ. ಅವರದನ್ನು ತಮ್ಮ ಕುಟುಂಬದ ಪಂಡಿತರೆಡೆಗೆ ಒಯ್ದರು. ಅವರು ಅದನ್ನು ಓದಿ ಹೇಳಿದರು.

ಈಶೋಪನಿಷತ್ತಿನ ಮೊದಲನೆಯ ಮಂತ್ರವೆ ಆದಿತ್ತು. “ನನ್ನ ಆತ್ಮದಲ್ಲಿ ಅಮೃತ ಸೇಚನವಾಯಿತು” ಎಂದು ಆ ಮಹರ್ಷಿಯು ತನ್ನ ಜೀವನ ವೃತ್ತಾಂತದಲ್ಲಿ ಬರೆದಿರುವನು.

“ಪ್ರಸಾದ ಭಾವನೆಯಿಂದ ಉಪಭೋಗಿಸಬೇಕೆಂಬ ವಾಕ್ಯದಿಂದ ಬಹಳ ದಿನಗಳವರೆಗೆ ನಾನು ಗೂಢದಲ್ಲಿ ಬಿದ್ದೆನು. ಒಂದು ದಿನ (ಸತ್ಯವಾಗಿ ಹೇಳಬೇಕಾದರೆ ಒಂದು ರಾತ್ರಿ) ಆ ವಾಕ್ಯ ಪ್ರ ಸ್ಥಿತ್ಯದ ಅನುಭವವನ್ನೆ ಹೇಳುತ್ತದೆಂಬುದು ನನಗೆ ಹೊಳೆಯಿತು. ತನಗೆ ಅತ್ಯಂತ ಪ್ರೇಮ ಪ್ರಾಪ್ತವಾದ ವ್ಯಕ್ತಿ ಇಲ್ಲವೆ ವಸ್ತುವನ್ನು ತ್ಯಾಗ ಮಾಡುವುದಕ್ಕಿಂತ ಹೆಚ್ಚಿನ ಆನಂದ ಬೇರೆ ಯಾವದರಲ್ಲಿದೆ”

ಶ್ರೀ ಕೆ ನಟರಾಜನ್‌ರಿಂದ ಈ ಪತ್ರ ಬಂದು ಸುಮಾರು ಮೂರು ತಿಂಗಳಾದವು. ಈ ಮೊದಲೆ ನಾನು ಈ ಬಗ್ಗೆ ಬರೆಯಬೇಕೆಂದಿದ್ದೆ ಆದರೆ ಶಕ್ಯವಾಗಲಿಲ್ಲ. ಆದರೆ ಈ ಪತ್ರದಲ್ಲಿಯ ವಿಷಯ ಸದೈವ, ನೂತನವಿರುವುದರಿಂದ ತಡವಾದುದರಿಂದ ಯಾವ ಹಾನಿಯೂ ಇಲ್ಲ. ಆ ಮಂತ್ರಕ್ಕೆ ನಾನು ನನ್ನದೆ ಆದ ಅವ್ಯಾಕರಣ ಪದ್ಧತಿಯಿಂದ ಮಾಡಿಕೊಂಡ ಅರ್ಥದಂತೆ ಜೀವನವನ್ನು ಸಾಗಿಸಲು ಶಕ್ತಿ ಮೀರಿ ಪ್ರಯತ್ನಿಸುವೆನು. ಪುಸ್ತಕಗಳ ವಾಚಕ ನಾನಾಗದ್ದರಿಂದ, ಮಹರ್ಷಿ ದೇವೇಂದ್ರರ ಜೀವನದಿಂದ ಶ್ರೀ ನಟರಾಜನ್‌ರು ಹೇಳಿದ ಸಂದರ್ಭ ನನಗೆಂದಿಗೂ ಗೊತ್ತಿಲ್ಲ.

ಈಶೋಪನಿಷತ್ತಿನ ಮೊದಲನೆ ಮಂತ್ರವೆ ವಿಶುದ್ಧ ಹಿಂದೂ ಧರ್ಮದ ಸಾರಸರ್ವಸ್ವ. ಅಂದರೆ ನನಗೆ ಅದೇ ಧರ್ಮವೆಂಬ ಎಂಬ ನನ್ನ ವಿಶ್ವಾಸವನ್ನು ಇದು ಮತ್ತಷ್ಟು ದೃಢೀಕರಿಸುತ್ತದೆ. ಪ್ರಾತಃಪ್ರಾರ್ಥನೆಯ ಕಾಲಕ್ಕೆ ಒಂದು ವಾರದಲ್ಲಿ ಇಡೀ ಭಗವದ್ಗೀತೆಯ ಹದಿನೆಂಟು ಅಧ್ಯಾಯದ ಪಾರಾಯಣ ಮುಗಿಯಿತು. ಮತ್ತು ಕೆಲ ವರ್ಷಗಳಿಂದ ಪ್ರತಿ ವಾರದಿಂದ ವಾರಕ್ಕೆ ಹಾಗೆಯೆ ಸಾಗಿದೆ. ಈಶೋಪನಿಷತ್ತಿನ ಮೊದಲನೆ ಮಂತ್ರದ ವ್ಯಾಖ್ಯೆಯೇ ಭಗವದ್ಗೀತೆ. ಶ್ರೀ ನಟರಾಜನ್‌ರ ಮನಸ್ಸಿಗೆ ಹೊಳೆದ ಅರ್ಥವು ಕೇವಲ ಅರ್ಥ ಸತ್ಯವೆಂದು ಸ್ವಲ್ಪವೂ ಸಂದೇಹವಿಲ್ಲದೆ ನನಗನಿಸುತ್ತದೆ. ಸ್ವಾರ್ಥತ್ಯಾಗದ ಜೀರ್ಣವಾದ ತತ್ವವೇ ಅವರ ಅರ್ಥವೆಂದು ನಾನು ತಿಳಿದುಕೊಂಡಿದ್ದೇನೆ. ಇದು ಸಾಕಷ್ಟು ಸಾಮಾನ್ಯ ಅನುಭವವೆಂಬುದು ನಿಃಸಂದೇಹವಾಗಿದೆ. ಒಂದೇ ಉದಾಹರಣೆಯನ್ನು ತೆಗೆದುಕೊಳ್ಳಿರಿ. ಅನೇಕ ತಾಯಂದಿರು ತಮ್ಮ ಮಕ್ಕಳ ಸಲುವಾಗಿ ಸರ್ವಸ್ವತ್ಯಾಗ ಮಾಡುತ್ತಾರೆ. ಆದರೆ ಪ್ರಾಚೀನ ಕಾಲದಿಂದಲೂ ಆ ಬಗೆಯ ರೂಢಿಯ ಸತ್ಯತೆ ಈ ಮಂತ್ರದಿಂದ ಸ್ಪಷ್ಟವಾಗುವದಿಲ್ಲೆಂಬುದನ್ನು ನಾವು ನೋಡಬಹುದು. ಆ ಮಂತ್ರದಂತೆ ಜೀವನ ಸಾಗಿಸುವದೆಂದರೆ ನ್ಯೂಟೆಸ್ಟಮೆಂಟದಲ್ಲಿ ಹೇಳಿದ ನವಜನ್ಮದಂತೆ ಅಥವಾ ಹಿಂದೂ ಧರ್ಮದಲ್ಲಿ ಹೇಳಿದ ಬ್ರಹ್ಮಸಮರ್ಪಣ [ಪರಮಾತ್ಮನಿಗೆ ಸಮರ್ಪಣ] ಭಾವದಿಂದ ನಡೆಯುವುದು. ಆದುದರಿಂದ ಆ ಮಂತ್ರದ ಅರ್ಥ ಒಂದೇ ಒಂದೆಂದು ನನಗನಿಸುತ್ತದೆ. ನಿಮ್ಮದೆಂದು ತಿಳಿದುಕೊಳ್ಳುವ ಪ್ರತಿಯೊಂದು ಪದಾರ್ಥವು ಪರಮಾತ್ಮನದೆಂದು ತಿಳಿಯಿರಿ. ಮತ್ತು ನಿಮ್ಮ ಜೀವನಕ್ಕೆ ನಿಜವಾಗಿ ಅವಶ್ಯವಿದ್ದುದನ್ನಷ್ಟೇ ತೆಗೆದುಕೊಳ್ಳಿರಿ. ಬೇರೆ ಶಬ್ದಗಳಲ್ಲಿ, ಗೀತೆಯ ಭಾಷೆಯಲ್ಲಿ ಅದು ಅತ್ಯಂತಿಕ ಅನಾಸಕ್ತಿಯನ್ನು ಬೋಧಿಸುತ್ತದೆ. ಅನಂತರವೆ ಸುಖ ಜೀವನವನ್ನು ಸಾಗಿಸಬಹುದು.

ಹೊಸದಿಲ್ಲಿ ಮೋ. ಕ. ಗಾಂಧಿ

೧೩—೬—೪೬

ಆ ದುಸ್ವಪ್ನ

ಮಸೂರಿಯ ವಸತಿಕಾಲದಲ್ಲಿ ಒಬ್ಬ ಇಂಗ್ಲೀಷ ಗೆಳೆಯನು ಗಾಂಧೀಜಿಗೊಂದು ಪ್ರಶ್ನೆ ಹಾಕಿದನು: ಪರಮಾಣು ಬಾಂಬಿನ ಭಯಾನಕತೆಯಿಂದ ಕಂಗೆಟ್ಟು ಜಗತ್ತು ಅಹಿಂಸೆಯನ್ನು ನಿರುಪಾಯವಾಗಿ ಪರಿಗ್ರಹಿಸಲಿಕ್ಕಿಲ್ಲವೆ? ಎಲ್ಲ ರಾಷ್ಟ್ರಗಳೂ ಪರಮಾಣು ಬಾಂಬಿನಿಂದ ಸಜ್ಜಿತವಾಗಿದ್ದರೆ, ಅದರ ಉಪಯೋಗದಿಂದ ಸಂಬಂಧಿಸಿದವರೆಲ್ಲರನ್ನೂ ಪೂರ್ಣ ವಿನಾಶವೇ ಎದುರಿಸುವದೆಂದರಿತು ಯಾರೂ ಅದನ್ನು ಪ್ರಯೋಗಿಸಲಿಕ್ಕಿಲ್ಲ. ಹಾಗಾಗಲಿಕ್ಕಿಲ್ಲವೆಂದು ಗಾಂಧೀಜಿಯ ಅಭಿಪ್ರಾಯವಾಗಿತ್ತು. “ಇನ್ನಷ್ಟು ಹೆಚ್ಚು ಹತ್ಯೆ ವಿನಾಶಗಳನ್ನು ಮಾಡಲು ಸಾಧ್ಯವಾದುದನ್ನು ಕಂಡು ಹಿಂಸಾಚಾರಿ ಮನುಷ್ಯನ ಕಣ್ಣುಗಳು ಸಂತೋಷದಿಂದ ತಳತಳನೆ ಹೊಳೆದಾವು” ಎಂದರು ಅವರು.

ಪರಮಾಣುವಿನ ರಹಸ್ಯಕ್ಕಾಗಿ ನಡೆದ ಮೇಲಾಟದಿಂದ ಹಿಂಸೆಯ ಕೊನೆಯಾಗುವ ಬದಲು, ಮೊದಲನೆ ಪರಮಾಣು ಬಾಂಬು ತನ್ನ ಗುರಿಯ ಮೇಲೆ ಎರಗುವ ಮೊದಲೇ ಅಭೂತಪೂರ್ವ ಭಯ, ವೈಯಕ್ತಿಕ ಸ್ವಾತಂತ್ರ್ಯದ ಪೂರ್ಣ ಅಪಹಾರಗಳಿಂದೊಡಗೂಡಿದ ಭೀಷಣ ಯುಗವೊಂದು ಆರಂಭಿಸುವ ಚಿಹ್ನ ಕಾಣಿಸುತ್ತಿದೆ. “One World or None” (ಒಂದೇ ಜಗತ್ತು ಇಲ್ಲದಿದ್ದರೆ ಜಗತ್ತಿನ ನಾಶ) ಎಂಬ ೧೭ ಜನ ವೈಜ್ಞಾನಿಕರೂ (ಅವರಲ್ಲೈವರು ನೋಬೆಲ ಬಹುಮಾನ ಪಡೆದವರು) ಸೇನಾಪತಿಗಳೂ ಪಂಡಿತರೂ ಬರೆದ “ “ಪರಮಾಣು ಬಾಂಬಿನ ಪೂರ್ಣ ಪರಿಣಾಮದ ವರದಿ” ಯಲ್ಲಿ, ಶೀಘ್ರವಾಗಿ ಬರುತಿರುವ ಈ ಪ್ರಲಯವನ್ನು ಕುರಿತು ಮೈನವಿರೆಬ್ಬಿಸುವ ಶಾಂತವಾದ ಎಚ್ಚರಿಕೆಯನ್ನು ಕಾಣಬಹುದು. ಈಗ “ಪ್ರಾರಂಭಿಕ ಸಂಶೋಧನೆ ನಡೆದಿರುವ” ಹೊಸ ಬಗೆಯ ಪರಮಾಣು ಬಾಂಬುಗಳ ನಂಬಿ ಮೀರಿದ ವಿನಾಶಶಕ್ತಿಯನ್ನೂ ಅವುಗಳಿಗೆ ಹಿಡಿಯುವ ತುಚ್ಛವೆನಿಸುವಷ್ಟು ಕಡಿಮೆ ವೆಚ್ಚವನ್ನೂ ಬಣ್ಣಿಸಿದ ನಂತರ ಜನರಲ್ ಅರ್ನಾಲ್ಡರು ಸೂಚಿಸುವದೇನಂದರೆ, “ಆಕಾಶ ಬಲದ ವಿಘಾತಕ ಶಕ್ತಿ ಅತ್ಯಂತ ಅಗ್ಗವೂ ಸುಲಭವೂ ಆಗಿ ಬಿಟ್ಟಿದೆ....ನಾಗರಿಕತೆಯ ಅಸ್ತಿತ್ವವೇ ಆಕಾಶಬಲವನ್ನು ನಿಯಂತ್ರಿಸುವ ಜನರ ಸದ್ಬುದ್ಧಿ ಕಾರುಣ್ಯಗಳನ್ನು ಅವಲಂಬಿಸಿದೆ.” ರಾಡಂ ತಜ್ಞರಾದ ಭೌತಶಾಸ್ತ್ರ ಲುಯಿ ಎನ್. ರಿಡೆನೋರರು, ಅತ್ಯಂತ ಪರಿಪೂರ್ಣವಾದ ಮುಂಜಾಗ್ರತೆಯ ವ್ಯವಸ್ಥೆಗಳಿದ್ದರೆ ಕೂಡ ಹೇಗೆ ಈ ಬಾಂಬುಗಳಲ್ಲಿ ಹೆಚ್ಚಿನವುಗಳು ತಮ್ಮ ಗುರಿಯ ಮೇಲೆ ಎರಗುವದನ್ನು ತಡೆಯುವದು ಅಸಾಧ್ಯವೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. “ಬಹಳ ಸ್ವಲ್ಪ ಬಾಂಬುಗಳೇ ಸಾಕು”! ಭೌತಶಾಸ್ತ್ರಿ ಎಡ್ವರ್ಡ ಕೌಡನ್ನರು ಬರೆಯುತ್ತಾರೆ. “ಪರಮಾಣು ಗುಪ್ತ ಘಾತಕಿಗಳು ಅಮೇರಿಕೆಯಲ್ಲೆಲ್ಲ ಗುಪ್ತ ಜ್ವಾಲಾಮುಖಿಗಳನ್ನು ಹುಗಿದಿಡಬಹುದು. ಒಂದು ನಿರ್ದಿಷ್ಟ ಮುಹೂರ್ತದಲ್ಲಿ ಸಮಯ ಸಾಧಿಸಿ ಅವುಗಳೆಲ್ಲ ಸ್ಫೋಟವಾಗಬಹುದು. ಯಾವದಾದರೊಂದು ಸ್ಥಾನ ನಿರ್ಭಯವಾಗಿರಬೇಕಾದರೆ ಅದರ ಸುತ್ತಮುತ್ತ ಒಂದು ಮೈಲಿಯಷ್ಟು ಜಾಗದಲ್ಲಿ ದುಷ್ಟ ಪದಾರ್ಥಗಳಿರಬಾರದು ಆದರೆ ಒಂದು ಕಲ್ಲುಸಕ್ಕರೆಯ ಅಂಗಡಿಯ ಗಲ್ಲೆಯ ಕೆಳಗೆ ಇಪ್ಪತ್ತು ಸಾವಿರ ಟನ್ ಟಿಎನ್‌ಟಿಯನ್ನು ಹೂತಿಡುವದು ಸಾಧ್ಯವಿದೆ.”

“ಇಂಥ ಗುಪ್ತ ವಿಘಾತದಿಂದ ಆತ್ಮರಕ್ಷಣೆ ಮಾಡಿಕೊಳ್ಳಬೇಕಾದರೆ, ಅಮೇರಿಕೆ ಇತಿಹಾಸದಲ್ಲೆಲ್ಲ ಅತ್ಯಂತ ನಿಷ್ಠುರವಾದ ಪೋಲೀಸ ರಾಜ್ಯವಾಗಿ ಮಾರ್ಪಡಬೇಕಾದೀತು,” ಎಂದು ಮಿ ಕೌಂಡನ್ನರು ಸ್ಪಷ್ಟವಾಗಿ ಹೇಳಿದ್ದಾರೆ. ಸಮಾರೋಪ ಪರಿಚ್ಛೇದವೊಂದರಲ್ಲಿ ಡಾ ಹೆರಾಲ್ಡ ಯುರೇಯವರು ಪರಮಾಣು ಮೇಳುವದ ಈ ಭಾಗವನ್ನು ಇನ್ನಷ್ಟು ವಿವರಿಸಿದ್ದಾರೆ. “ಈ ಬಾಂಬುಗಳು ಬೀಳತೊಡಗುವ ಎಷ್ಟೋ ಮೊದಲು ಅಮೇರಿಕೆಯ ಜನರು ಕಠೋರವಾದ ಸೈನಿಕ ಸರ್ವಾಧಿಕಾರದ ಕೈಕೆಳಗೆ ಸಮಸ್ತ ಸ್ವಾತಂತ್ರ್ಯವನ್ನೂ ಕಳೆದು ಕೊಳ್ಳುವರು ಪರಮಾಣು ಸೇನಾಪತಿಗಳು ಅತ್ಯಂತ ರಹಸ್ಯವಾಗಿ ಸಭೆಗೂಡಿ, ರಾಷ್ಟ್ರದ ಮನೆಮನೆಯನ್ನೂ ಉದ್ದಿಮೆಗಳನ್ನೂ ಆಳುವರು. ಗುಪ್ತ ಪೋಲೀಸರು ಮೂಲೆಮೂಲೆಗಳಲ್ಲೂ ಹೊಕ್ಕು ಗೂಢಚಾರರನ್ನೂ ಗುಪ್ತ ಘಾತಕಿಗಳನ್ನೂ ಬೇಟೆಯಾಡುವವರು ಇದೇ ಸ್ಥಿತಿ ಇಡಿ ಜಗತ್ತಿನ ದೇಶಗಳೆಲ್ಲವನ್ನೂ ಆವರಿಸುವದು ಕೊನೆಯಲ್ಲಿ ಎಲ್ಲೆಲ್ಲಿಯೂ ಭಯವೇ ಹಬ್ಬಿ ಬಿಡುವದು.”

ಈ ವೈಜ್ಞಾನಿಕರ ಅಭಿಪ್ರಾಯದಲ್ಲಿ ಇದಕ್ಕಿರುವ ಒಂದೇ ಉಪಾಯವೆಂದರೆ “ಯುದ್ಧವನ್ನು ಅಶಕ್ಯವಾಗಿ ಮಾಡುವ ಸಾಮರ್ಥ್ಯವುಳ್ಳ ಜಾಗತಿಕ ಸರಕಾರ” “ಈ ಸಮಸ್ಯೆ ನಮ್ಮ ಮುಂದೆ ಇತಿಹಾಸದ ಅತ್ಯಂತ ಕಠಿನ ಬಿಕ್ಕಟ್ಟುಗಳಲ್ಲೊಂದನ್ನು ನಿಲ್ಲಿಸಿದೆ. ಶಸ್ತ್ರಾಸ್ತ್ರಗಳ ಮೇಲಾಟ ನಿಲ್ಲಬೇಕು. ಇನ್ನು ಬಹಳ ಪುರಸೊತ್ತಿಲ್ಲ.”

ಹೊಸದಿಲ್ಲಿ,

೧೭-೬-೪೬ —ಪ್ಯಾರೇಲಾಲ

ಮರೆತಮಾತು:—ಮೇಲಿನದನ್ನು ಬರೆದಾದ ಮೇಲೆ, ಯುಕ್ತರಾಷ್ಟ್ರಗಳ ಪರಮಾಣು ಶಕ್ತಿ ಸಮಿತಿಯ ಫ್ರೆಂಚ ಪ್ರತಿನಿಧಿಗಳ ಮುಖ್ಯರಾದ ಮಿ ಫ್ರೆಡರಿಕ ಜೋಲಿಯಟ ಕ್ಯೂರಿಯವರ ವಿನಂತಿಯೊಂದು ಹೊರಟಿದೆ. ಜಗತ್ತಿನ ಸರಕಾರಗಳು ಪರಮಾಣು ಶಕ್ತಿಯ ನಿಯಂತ್ರಣದ ವಿಷಯಕ್ಕೆ ಒಪ್ಪಂದ ಮಾಡಿಕೊಳ್ಳದಿದ್ದರೆ ಪರಮಾಣು ವೈಜ್ಞಾನಿಕರು ಸಂಪು ಹೂಡಬೇಕೆಂದು ಅವರು ಸೂಚಿಸಿದ್ದಾರೆ.

“ಒಪ್ಪಂದವಾಗದೆ ಹೋದರೆ ನಾವು ವೈಜ್ಞಾನಿಕರು ಈ ಕ್ಷೇತ್ರದಲ್ಲಿ ಇನ್ನುಮುಂದೆ ಸಂಶೋಧನ ಮಾಡುವದನ್ನು ನಿಲ್ಲಿಸಿಬಿಡಬೇಕು. ವಿಜ್ಞಾನವನ್ನು ಈ ರೀತಿ ವ್ಯಭಿಚಾರಕ್ಕೊಳಗು ಮಾಡಲು ನಾವು ಒಪ್ಪಕೂಡದು.”

ಕ ರ್ನಾ ಟ ಕ

ಧಾರವಾಡ

ನೆಗಳೂರದ ತಲಾಟಿಯುರಾದ ಶ್ರೀ ಅಗಸರ ಇವರು ಮಾರ್ಚ ತಿಂಗಳಿಂದ ಅನೇಕ ಜನರಿಗೆ ...ಲ ಕಾಳನ್ನು ಮತ್ತು ಹಣವನ್ನು ಕೊಡದ್ದ... ಅವರನ್ನು ಸಸ್ಪೆಂಡ ಇಡಲಾಗಿದ್ದು. ಮತ್ತೊಬ್ಬ ತಲಾಟಿಯನ್ನು ನೇಮಿಸಿರುವರು.

ಬಿಜ್ಜೂರಲ್ಲಿ ಸಕ್ಕರಿ ಚಿಮಣಿ ಎಣ್ಣೆಗಳನ್ನು ಹೆಚ್ಚು ಬೆಲೆ ತಕ್ಕೊಂಡು ಮಾರಿದ್ದಕ್ಕಾಗಿ ಶ್ರೀ ಸಿದ್ರಾಮಯ್ಯ ಪಾಟೀಲ ಇವರನ್ನು ಸಸ್ಪೆಂಡ ಇಟ್ಟು ಅವರ ಮೇಲೆ ಖಟ್ಲೆ ಹಾಕಲಾಗಿದೆ.

೨೪ ಪೌಂಡು ಮತ್ತು ಅದಕ್ಕಿಂತ ಹೆಚ್ಚು ಬೆಲ್ಲದ ಸಂಗ್ರಹವಿದ್ದವರು ಕೂಡಲೆ ತಿಳಿಸಬೇಕೆಂದೂ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆಯದೆ ಅದನ್ನು ಮಾರಬಾರದೆಂದೂ ೧೪ ನೇ ತಾರೀಕಿನ ದಿವಸ ಪ್ರಸಿದ್ಧಿಸಲಾಯಿತು. ಅಂದೇ ಮುಂಜಾನೆ ಅಧಿಕಾರಿಗಳು ಇಲ್ಲಿಯ ವ್ಯಾಪಾರಸ್ಥರ ಅಂಗಡಿ ವಖಾರಗಳನ್ನು ಶೋಧಿಸಿ ೨೦೦೦ ಮಣ ಬೆಲ್ಲ ಹೊರದೆಗೆದರು. ಮಾರಾಟದ ಬಗ್ಗೆ ಜಿಲ್ಹಾಧಿಕಾರಿಗಳ ಅಪ್ಪಣೆ ಇನ್ನೂ ಬಾರದ್ದರಿಂದ ಊರಲ್ಲಿ ಎಲ್ಲಿಯೂ ಬೆಲ್ಲ ಸಿಕ್ಕದಂತಾಗಿದೆ.

ಹುಬ್ಬಳ್ಳಿಯ ಶ್ರೀ ಸುಬ್ರಾಯ ಕಾಮತರ ಕಾಫಿ ಕ್ಲಬ್ಬನ್ನು ಶೋಧಿಸಲಾಗಿ ಅವರಲ್ಲಿ ೯೪ ಸೇರು ಅಕ್ಕಿ, ೩೦೨॥ ಸೇರು ಗೋದಿ ೧೭೧ ಅಳತೆಯ್ತ ...ರು ರವಾ ೨೬೨ ಅಳತೆಯ ಸೇರು ಸಕ್ಕರೆ ಇಷ್ಟು ಸೀದಾ ಪದಾರ್ಥಗಳು ದೊರೆತವು. ೨೦ ಮಣ ಬೆಲ್ಲವೂ ಸಿಕ್ಕಿದೆ.

ಹುಬ್ಬಳ್ಳಿಯಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿ ಸಂಘವೊಂದು ಸ್ಥಾಪಿತವಾಗಿದೆ. ನಾಗಪುರ ವಿದ್ಯಾರ್ಥಿ ಸಂಘಕ್ಕೆ ಹೋಗಿದ್ದ ಮೈಸೂರ ವಿದ್ಯಾರ್ಥಿ ಸಂಘದ ಎಂ. ಎಸ್. ಕೃಷ್ಣನ್ ಮತ್ತು ಕರ್ಪೂರ ವೆಂಕಟರಾಯರು ವಿದ್ಯಾರ್ಥಿಗಳ ಸಂಘಟನೆ ಬಗ್ಗೆ ಹೇಳಿದರು.

ಧಾರವಾಡದಲ್ಲಿ ಶ್ರೀ ಗುರುರಾವ ಸಿಡೇನೂರ ವಕೀಲರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪದವೀಧರ ಸಂಘದ ಸಭೆ ಸೇರಿ ಕರ್ನಾಟಕದಲ್ಲಿ ಒಕ್ಕಲತನ, ವೈದ್ಯಕೀಯ, ಎಂಜಿನಿಯರಿಂಗ, ಔದ್ಯೋಗಿಕ, ವಾಣಿಜ್ಯ ಮತ್ತು ಅರಣ್ಯಕಾಲೇಜು ಸ್ಥಾಪಿಸಬೇಕೆಂದು ಬಿನ್ನವಿಸುವ ಗೊತ್ತುವಳಿ ಸ್ವೀಕೃತವಾಯಿತು. ಬರುವ ಐದು ವರ್ಷಗಳಲ್ಲಿ ಇವೆಲ್ಲ ಕಾಲೇಜು ಸ್ಥಾಪಿತವಾಗಬೇಕೆಂದೂ ಕೇಳಿಕೊಳ್ಳಲಾಯಿತು.

ಮುಂಬಯಿ ಸರಕಾರದವರು ಕಾಲೇಜ ಪ್ರವೇಶದ ಬಗ್ಗೆ ಇತ್ತೀಚೆ ಹೊರಡಿಸಿದ ಪರಿಪತ್ರದಿಂದ ಯೋಗ್ಯ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯಲು ಅಸಾಧ್ಯವಾಗುತ್ತದೆ ಎಲ್ಲರಿಗೂ ಅನಿರ್ಬಂಧ ಶಿಕ್ಷಣ ದೊರೆಯಬೇಕೆಂಬ ತತ್ವಕ್ಕೂ ಇದರಿಂದ ಬಾಧೆ ಬರುತ್ತದೆಂದು ಈ ಸಭೆ ಅಭಿಪ್ರಾಯಪಟ್ಟು ಈ ಬಗ್ಗೆ ಕಾರ್ಯಸಮಿತಿಯೊಂದನ್ನು ನಿಯಮಿಸಲಾಯಿತು.

ಹುಬ್ಬಳ್ಳಿಯ ಪ್ರಗತಿಶೀಲ ಲೇಖಕರ ಸಂಘದ ಸಭೆ ಶ್ರೀ ದ. ಬಾ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಸೇರಿ ನಾಗೇಶ ದೇಸಾಯಿ ಮತ್ತು ಕುಳಕುಂದ ಶಿವರಾಯರನ್ನು ಹೊಸ ಕಾರ್ಯದರ್ಶಿಗಳನ್ನಾಗಿ ಆರಿಸಲಾಯಿತು. ಕಳೆದ ವರ್ಷದ ಅಧ್ಯಕ್ಷರ ಸಂಘವನ್ನು ಕೇಳದೆ ಆದನ್ನು ವಿಸರ್ಜಿಸಲಾಗಿದೆಂದು ಪ್ರಸಿದ್ಧಿಸಿದ್ದನ್ನು ನಿಷೇಧಿಸಲಾಯಿತು.

ಹುಬ್ಬಳ್ಳಿ ಮುನಸಿಪಾಲಿಟಿಯವರು ಭಂಗಿ ಮತ್ತು ಕಸಗೂಡಿಸುವವರಿಗೆ ೨೦ ರೂ. ತುಟ್ಟಿಭತ್ತೆ ಕೊಡಲು ಒಪ್ಪಿದ್ದರಿಂದ ಭಂಗಿ ಜನರು ೧೪ ಮತ್ತು ೧೫ ಎರಡು ದಿನ ಸಂಪು ಹೂಡಿ ನಂತರ ಕೆಲಸ ಪ್ರಾರಂಭಿಸಿರುವರು.

ಉತ್ತರಕನ್ನಡ

ಹಳ್ಯಾಳದ ಶ್ರೀ ಅಣ್ಣಪ್ಪಾ ಮುಳೆ ಹಾಗು ಅವರ ತಮ್ಮ ಶ್ರೀ ರಾಮಚಂದ್ರ ಮುಳೆ ಇವರು ಕಳವಿನಿಂದ ಮನ್ನಳ್ಳಿಯಿಂದ ಸರಾಯಿ ತರುತಿರುವಾಗ ಜನರು ಅವರನ್ನು ತಡೆದರು. ಹಿಂದುಗಡೆ ಪೋಲೀಸರು ಅವರ ಮನೆ ಶೋಧ ಮಾಡಲಾಗಿ ಸರಾಯಿ ಬಾಟ್ಲಿಗಳು ಸಿಕ್ಕವು. ಪೋಲೀಸ ಪಂಚನಾಮೆ ಮಾಡಲಾಯಿತು. ದಿನಾಲು ಸರಾಯಿ ತರುವ ಲೆಕ್ಕದ ಪುಸ್ತಕವೂ ಸಿಕ್ಕಿತು. ಅಣ್ಣಪ್ಪನವರನ್ನು ಜಾಮೀನ ಮೇಲೆ ಬಿಡಲಾಗಿದೆ.

ಬೆಳಗಾವಿ

೪೨ ನೇ ಇಸ್ವಿಯ ಚಳವಳಿಯಲ್ಲಿ ಕರ್ನಾಟಕದ ಬಾವುಟವನ್ನು ಮಹಾರಾಷ್ಟ್ರದಲ್ಲಿ ಮೆರೆಯಿಸಿದ ಶ್ರೀ ಗುಂಡೂ ಪಾಟೀಲ ಮಂಗಸೂಳಿ ಇವರು ಐನಾಪುರಕ್ಕೆ ಬಂದಾಗ ಕಳೆದವಾರ ೩೫ ಜತೆ ಎತ್ತುಗಳನ್ನು ಹೂಡಿದ ಬಂಡಿಯಲ್ಲಿ ಅವರ ಮೆರವಣಿಗೆ ತೆಗೆದು ಸ್ವಾಗತಿಸಲಾಯಿತು. ಸೇವಾದಲದಲ್ಲಿ ಸಭೆ ಸೇರಿದಾಗ ಅವರು ಚಲೇಜಾವ ಚಳವಳಿ ರಹಸ್ಯ ಹೇಳಿ ಈಗ ಜನರು ಮಾಡತಕ್ಕ ಕರ್ತವ್ಯವನ್ನು ವಿವರಿಸಿದರು.

ಮುಂಬಯಿಯ ಪ್ರಸಿದ್ಧ ಡಾಕ್ಟರ ಎಸ್. ಜಿ. ಜೋಶಿಯವರು ಹುಟ್ಟಿದೂರಾದ ಕಲ್ಲೋಳಿಗೆ ಬಂದಾಗ ೧೨ ನೇ ತಾರೀಕು ಅವರಿಗೆ ಮಾನಪತ್ರ ಕೊಟ್ಟು ಜಾಹೀರ ಸನ್ಮಾನ ಮಾಡಲಾಯಿತು. ಎಕ್ಸಂಬಿಯ ಡಾಕ್ಟರ ವಿಶ್ವನಾಥರಾವ ಕುಲಕರ್ಣಿಯವರು ಅಧ್ಯಕ್ಷತೆ ವಹಿಸಿದ್ದರು. ಎಂ. ವಿ. ಜೋಶಿಯವರು ಸ್ವಾಗತಪರ ಭಾಷಣ ಮಾಡಿದರು. ಕಲ್ಲೋಳಕರ ಸದಾಶಿವರಾಯರು ಜೋಶಿಯವರ ಪರಿಚಯ ಮಾಡಿಕೊಟ್ಟ ನಂತರ ಮಾನಪತ್ರ ಸಮರ್ಪಿಸಲಾಯಿತು. ಜೋಶಿಯವರು ಅದಕ್ಕೆ ತಕ್ಕ ಉತ್ತರಕೊಟ್ಟ ಮೇಲೆ ಅಲ್ಪೋಪಹಾರದೊಂದಿಗೆ ಸಭೆ ಕೊನೆಗಂಡಿತು.

ಸವದತ್ತಿ ತಾಲೂಕಿನಲ್ಲಿ ೧೨೦ ಸಾವಿರ ರೂಪಾಯಿ ತಗಾಯಿ ಸಾಲ ಹಂಚಲಾಗಿದ್ದು ಪ್ರತಿ ರೂಪಾಯಿಗೆ ಕೆಲ ಕಡೆಗೆ ಒಂದಾಣೆಯಂತೆ ಕೆಲ ಕಡೆಗೆ ನೂರಕ್ಕೆ ೧೦ ರೂಪಾಯಿಯಂತೆಯೂ ಅಧಿಕಾರಿಗಳು ಲಂಚ ತೆಗೆದುಕೊಂಡಿದ್ದಾರೆಂದು ತಿಳಿಯುತ್ತದೆ. ಈ ಲಂಚತೆಗೆದುಕೊಂಡವರನ್ನು ಹುಡುಕಿ ತೆಗೆಯಲು ಶ್ರೀ ತಲ್ಲೂರ ರಾಯನಗೌಡರ ನೇತೃತ್ವದಲ್ಲಿ ಕಾರ್ಯಕರ್ತರ ಸಮಿತಿಯೊಂದು ನೇಮಕವಾಗಿದೆ.

ಕಳೆದ ಶುಕ್ರವಾರ ಬೆಳಗಾವಿ ಮುಜಾವರ ಗಲ್ಲಿಯಲ್ಲಿ ನುಗ್ಗಿ ಶಿಂದಿ ಪೀಪುಗಳನ್ನುರುಳಿಸಿದ ಸಂಬಂಧದಲ್ಲಿ ೧೧ ಜನರನ್ನು ಬಂಧಿಸಲಾಗಿದೆ.

ಬೆಳಗಾವಿ ಬೋಗಾರ ಅಗಸಿಯಲ್ಲಿ ನ್ಯೂ ಕೇಫೆಯವರಿಗೆ ಕಳ್ಳತನದಿಂದ ಸರಾಯಿ ಸಂಗ್ರಹಿಸಿರುತಿರುವರೆಂಬ ಸಂಶಯದಿಂದ ತಪಾಸ ಮಾಡಲಾಗಿ ೨ ಹಂಡೆ ಸರಾಯಿ ೨ ಬಾಟ್ಲಿ ಮತ್ತು ೨ ಗಡಿಗೆಗಳ ಸರಾಯಿ ಸಿಕ್ಕವು.

ಬೆಳಗಾವಿ ಜಿಲ್ಹೆಯ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ದತ್ತೋಪಂತ ಅಧ್ಯಾಪಕ ಇವರ ಪತ್ನಿ ಸೀತಾಬಾಯಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮುಂಬಯಿ ಸರಕಾರದವರು ಲಂಚಗುಳಿತನ ನಿರ್ಮೂಲ ಸಮಿತಿಗಳನ್ನು ಸ್ಥಾಪಿಸಿದ್ದು ಅವುಗಳ ಕೆಲಸ ಪುಣೆ ಬೆಳಗಾವಿ ಅಹಮದಾಬಾದಗಳಲ್ಲಿ ಪ್ರಾರಂಭವಾಗಿದೆ. ಪಿ. ಜಿ. ಕಾನಿಟಕರರು ಇತ್ತೀ ಪ್ರಾಂತದ ಅಧಿಕಾರಿಗಳಾಗಿದ್ದು ಎಸ್. ಟಿ. ಭೋಸಲೆ ಇವರು ಬೆಳಗಾವಿ ಶಾಖೆಗೆ ಅಧಿಕಾರಿಗಳಿರುವರು. ದಕ್ಷಿಣ ಭಾಗದಲ್ಲಿಯ ಜನ ತಮ್ಮ ತಕರಾರುಗಳನ್ನು ಈ ಅಧಿಕಾರಿಗಳ ಕಡೆಗೆ ಕಳಿಸತಕ್ಕದ್ದು.

ಶ್ರೀ ಕೇಶವರಾವ ಗೋಖಲೆಯವರು ಮಾಡಿಕೊಂಡ ಹೇಬಸ್, ಕಾರ್ಪಸ್ ಅರ್ಜಿಯಲ್ಲಿ ಹಾಯಕೋರ್ಟಿನವರು ಅವರನ್ನು ಬಂಧಮುಕ್ತ ಮಾಡಿದ್ದರಷ್ಟೆ. ಆ ನಿರ್ಣಯದ ವಿರುದ್ಧ ಮುಂಬಯಿ ಸರಕಾರದವರು ಪ್ರೀವಿ ಕೌನ್ಸಿಲ್ಗೆ ಅಪೀಲು ಮಾಡಿದ್ದರು. ಇದೀಗ ಶ್ರೀ ಕೇಶವರಾಯರ ಒಪ್ಪಿಗೆಯಿಂದ ಕಾಂಗ್ರೆಸ್ ಸರಕಾರದವರು ಆ ಅಪೀಲನ್ನು ಹಿಂತೆಗೆದು ಕೊಂಡಿದ್ದಾರೆ. ಅಪೀಲಿನ ವೆಚ್ಚವನ್ನು ಶ್ರೀ ಗೋಖಲೆಯವರಿಗೆ ಕೊಡಿಸಿದರು.

ಬಳ್ಳಾರಿ

ಮದ್ರಾಸ ಮಂತ್ರಿಗಳಾದ ಶ್ರೀ ಭಕ್ತವತ್ಸಲಂ ಇವರು ಪ್ರಾಂತದ ಮುಖ್ಯ ಇಂಜನಿಯರರಾದ ದಿ. ಬ. ಶ್ರೀ ಗೋವಿಂದರಾಜಯ್ಯಂಗಾರರೊಡನೆ ಭೈರವನ ದಿಬ್ಬ ಯೋಜನೆ ನೋಡಲು ೧೫ಕ್ಕೆ ಹೋಗಿದ್ದರು. ಈ ಯೋಜನೆ ಕೈಕೊಳ್ಳಲು ಅನೇಕ ಹಳ್ಳಿಗರು ಬೇಡಿದರು. ಸಹಾನುಭೂತಿಯಿಂದ ಪರಾಮರ್ಶಿಸುವುದಾಗಿ ಮಂತ್ರಿಗಳು ಆಶ್ವಾಸನವನ್ನಿತ್ತರು.

ಶ್ರೀಮತಿ ಕಮಲಾದೇವಿಯವರು ೧೭ಕ್ಕೆ ಬಳ್ಳಾರಿಗೆ ಬಂದು ಅಗಡಿಯವರ ಛತ್ರದಲ್ಲಿ ಮಾತಾಡುತ್ತ ಎಡಪಕ್ಷದ ರೀತಿ ನೀತಿಗಳನ್ನು ವಿವರಿಸಿದರು. ತರುಣರು ಮುಂದೆ ಬಂದು ಕಾರ್ಯ ಮಾಡಬೇಕೆಂದು ಬಿನ್ನವಿಸಿದರು. ರಾತ್ರಿ ಹೊಟೆಲ್ ಕೆಲಸಗಾರ ಸಂಘದ ಸಭೆಯಲ್ಲಿ ಮಾತಾಡುತ್ತ ಸಂಘಟನೆ ಶಿಸ್ತುಗಳಿಂದ ನ್ಯಾಯ ಪಡೆಯಬೇಕೆಂದು ತಿಳಿಸಿದರು.

ವಿಜಾಪುರ

ಬದಾಮಿ ಕಾಂಗ್ರೆಸ ಸಮಿತಿಯ ಸಭೆ ಸೇರಿ ಶ್ರೀ ಮಹಾರುದ್ರಪ್ಪ ಪಟ್ಟಣಶೆಟ್ಟಿಯವರು ಅಧ್ಯಕ್ಷರು. ಸಿದ್ದಪ್ಪ ಮೂಳವಾಡ, ಲಕ್ಷ್ಮಣಸಾ ಕಾವಡೆಯವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಸಂಸ್ಥಾನಕ್ಕೆ ಮಾಲು ಸಾಗಿಸುತ್ತಿದ್ದ ಆರೋಪದ ಮೇಲೆ ವಿಜಾಪುರದ ಶ್ರೀ ಶಿವಲಿಂಗಪ್ಪ ರಾಚಪ್ಪ ಮಂಗಳವೇಡೆಯವರಿಗೆ ೧೦೦ ರೂಪಾಯಿ ದಂಡ ವಿಧಿಸಲಾಯಿತು.

ರಾಮದುರ್ಗ ವೀರಶೈವ ಸೇವಾಸಮಿತಿಯವರು ಫಲಾಹಾರೇಶ್ವರ ಫ್ರೀ ಬೋರ್ಡಿಂಗವೆಂಬ ಉಚಿತ ಭೋಜನಾಲಯ ತೆರೆದಿದ್ದಾರೆ. ಫಲಾಹಾರ ಶ್ರೀಗಳು ಬೋರ್ಡಿಂಗಿಗೆ ೧೦೦೦ ರೂ. ಮತ್ತು ೧೦ ಚೀಲ ಜೋಳ ಕೊಟ್ಟಿರುವರು. ನಾಗರಿಕರು ೧೧ಸಾವಿರ ರೂಪಾಯಿ ಕೂಡಿಸಿರುವರು. ಮೇಗುಂಡಪ್ಪನವರು ೫೨೫ ರೂ. ಕೊಟ್ಟರು.

ಕಾಶ್ಮೀರದ ಜನಜಾಗ್ರತಿಯ ಮಹಾನಾಟಕ

[ಮೊದಲನೆ ಪುಟದಿಂದ]

ಆದುದರಿಂದ ೧೯೩೪ ರ ಚಳವಳಿ ಸೋತಾಗ ಶೇಖ ಅಬ್ದುಲ್ಲಾರು ಹೊಸ ಬೆಳಕು ಕಂಡರು. ತಪ್ಪು ಹಿಂದೂ ಅಥವಾ ಮುಸ್ಲಿಮ ಅಧಿಕಾರಿಗಳಲ್ಲಿಲ್ಲ, ಅದು ರಾಜ್ಯಪದ್ಧತಿಯಲ್ಲಿದೆಯೆಂಬ ಮಾತು ಅವರಿಗೆ ಗೋಚರವಾಯಿತು. ಹೊಣೆಗಾರ ಸರಕಾರವೊಂದೇ ಈ ಪರಿಸ್ಥಿತಿಗೆ ಔಷಧವೆಂದು ಮುಸ್ಲಿಂ ಪರಿಷತ್ತಿನ ಮುಂದಾಳುಗಳಿಗೆ ತೋಚದೆ ಹೋಗಲಿಲ್ಲ. ಆದರೆ ಈ ಹೊಣೆಗಾರ ಸರಕಾರದ ಸಂಪಾದನೆಗೆ ಅಲ್ಪಸಂಖ್ಯಾಕರಾದ ಮತ್ತು ಹೆಚ್ಚು ಮುಂದುವರಿದವರಾದ ಹಿಂದೂಗಳ ಸಹಕಾರವಿಲ್ಲದೆ ನಡೆಯದೆಂದು ಅವರಿಗೆ ಹೊಳೆಯಿತು.

ರಾಷ್ಟ್ರೀಯ ಪರಿಷತ್ತಿನ ಹುಟ್ಟು

೧೯೩೭-೩೮ ರಲ್ಲಿ ಕಾಶ್ಮೀರದಲ್ಲಿ ಈ ದೃಷ್ಟಿ ಪರಿವರ್ತನ ಸ್ಪಷ್ಟವಾಗಿ ಗೋಚರಕ್ಕೆ ಬರುತಿತ್ತು. ೧೯೪೪ ರ ಸೋಲಿನಿಂದ ಪಾಠ ಕಲಿಯಲು ಶೇಖ ಅಬ್ದುಲ್ಲಾರು ಹಿಂದೆಮುಂದೆ ನೋಡಲಿಲ್ಲ. ೧೯೩೮ ಜೂನದಲ್ಲಿ ಮುಸ್ಲಿಂ ಪರಿಷತ್ತಿನ ಕಾರ್ಯಸಮಿತಿಯಲ್ಲಿ ಎಲ್ಲ ಜಾತಿಯವರಿಗೂ ಪರಿಷತ್ತಿನಲ್ಲಿ ಸ್ಥಾನ ಕೊಡಬೇಕೆಂದು ಸೂಚಿಸುವ ಗೊತ್ತುವಳಿಯಾಯಿತು. ಜೂನ ೧೯೩೯ ರಲ್ಲಿ ಪರಿಷತ್ತಿನ ವಿಶೇಷಾಧಿವೇಶನವೊಂದು ಸೇರಿ ಕಾರ್ಯ ಸಮಿತಿಯ ಸಲಹೆಯನ್ನು ಮನ್ನಿಸಿ ಎಲ್ಲ ಜಾತಿಯವರಿಗೂ ಪರಿಷತ್ತಿನಲ್ಲಿ ಮುಕ್ತದ್ವಾರವನ್ನಿತ್ತಿತು. ಆ ಸಂದರ್ಭ ಸ್ಮರಣೀಯವಾಗಿತ್ತು. ಮುಸ್ಲಿಂ ಪರಿಷತ್ತು ಇನ್ನು ಉಳಿಯಲಿಲ್ಲ. ಜಾತಿ ಮತಭೇದವಿಲ್ಲದೆ ಎಲ್ಲರನ್ನು ಅಪ್ಪಿಕೊಳ್ಳುವ "ರಾಷ್ಟ್ರೀಯ ಪರಿಷತ್ತಾ"ಗಿ ಅದು ರೂಪುಗೊಂಡಿತು. ಈ ಬದಲಾವಣೆಯನ್ನು ತಂದೊಡ್ಡುವಲ್ಲಿ ಶೇಖ ಅಬ್ದುಲ್ಲಾರ ಗೆಳೆಯರೂ ಅವರ ವಾರಪತ್ರಿಕೆಯ ಸಹ-ಸಂಚಾಲಕರೂ ಆಗಿದ್ದ ಪಂಡಿತ ಪ್ರೇಮನಾಥ ಬಜಾಜರು ಬಹಳ ವರ್ಚಸ್ಸು ಉಪಯೋಗಿಸಿದರು.

ಹೊಣೆಗಾರ ಸರಕಾರದ ಬೇಡಿಕೆ

ಅಖಿಲ ಜಮ್ಮೂ-ಕಾಶ್ಮೀರ ರಾಷ್ಟ್ರೀಯ ಪರಿಷತ್ತಿನ ಪ್ರಥಮ ಅಧಿವೇಶನ ೧೯೩೯ ಅಕ್ಟೋಬರದಲ್ಲಿ ಸೇರಿತು. ಅದು "ಮಹಾರಾಜರ ಸಾಮಾನ್ಯ ನಿಯಂತ್ರಣ ಮತ್ತು ಶಿಷ್ಟಾಧಿಕಾರಗಳಿಗೊಳಪಟ್ಟು" ಹೊಣೆಗಾರ ಸರಕಾರದ ಬೇಡಿಕೆಯನ್ನು ಮುಂದೊಡ್ಡಿತು. ಮಂತ್ರಿಮಂಡಲ ಶಾಸನಸಭೆಗೆ ಹೊಣೆಗಾರವಾಗಿರತಕ್ಕದ್ದು; ಸೈನ್ಯ, ರಾಜಕೀಯ ಮತ್ತು ವಿದೇಶ, ಹಾಗು ಮಹಾರಾಜರು ಮಾಡಿದ ಸಾಲಗಳ ಸಲುವಳಿ ಇವಿಷ್ಟು ಹೊರತು ಉಳಿದೆಲ್ಲ ವೆಚ್ಚಗಳ ಮೇಲೆ ಶಾಸನಸಭೆಯ ನಿಯಂತ್ರಣವಿರಬೇಕು; ಅಲ್ಪಸಂಖ್ಯಾಕರಿಗೆ ಸ್ಥಾನಗಳನ್ನು ಕಾದಿಟ್ಟು ಸಂಯುಕ್ತ ಮತದಾನ ಪದ್ಧತಿಯಿಂದ ವಯಸ್ಕರಿಗೆಲ್ಲ ಮತಾಧಿಕಾರವಿತ್ತು ಶಾಸನಸಭೆಗೆ ಚುನಾವಣೆಗಳಾಗಬೇಕು ಮತ್ತು ಶಾಸನಸಭೆಯಲ್ಲಿ ಎಲ್ಲರೂ ಲೋಕನಿಯುಕ್ತರೇ ಇರಬೇಕು. ಇವು ಪರಿಷತ್ತಿನ ಕನಿಷ್ಠ ಬೇಡಿಕೆಗಳಾಗಿ ಮಂಡಿಸಲ್ಪಟ್ಟವು.

ಈ ಬೇಡಿಕೆಯೇ ಇಂದಿಗೂ ಪರಿಷತ್ತಿನ ಅಧಿಕೃತ ಧೋರಣೆಯಾಗಿದೆ. ಯುದ್ಧ ಕಾಲದಲ್ಲಿ ಶೇಖ ಅಬ್ದುಲ್ಲಾರು ಫ್ಯಾಸಿಸ್ಟ ಗಂಡಾಂತರವನ್ನು ಅನುಲಕ್ಷಿಸಿ ಸರಕಾರದೊಡನೆ ಸಹಕರಿಸಿದರು ಕೂಡ. ಜನತಾ ಆಹಾರ ಸಮಿತಿಗಳ ಮೂಲಕ ಆಹಾರ ವಿತರಣ ಮಾಡಿ ಪರಿಷತ್ತು ಸರಕಾರಕ್ಕೆ ಬಹಳ ನೆರವಾಯಿತು

ಕೊನೆಯ ಅಂಕು

ಆದರೆ ೧೯೪೪ ರಲ್ಲಿ ಪರಿಷತ್ತು ಇನ್ನೊಂದು ಅಂಕವನ್ನು ಪ್ರಾರಂಭಿಸಿತೆನ್ನಬಹುದು. ವಿಜ್ಞಾನದ ಅಧ್ಯಾಪಕರಾಗಿದ್ದ ಶೇಖ ಅಬ್ದುಲ್ಲಾರು ರಾಜಕಾರಣಕ್ಕೆ ಧುಮುಕಿ ಜಾತೀಯ ಸಂಘಟನೆಯಿಂದ ಪ್ರಾರಂಭಿಸಿ ರಾಷ್ಟ್ರೀಯತೆಗೆ ಪರಿವರ್ತಿಸಿದ್ದ ತಮ್ಮ ಸಂಸ್ಥೆಯನ್ನು ಈಗ ಅವರು ಅದರ ಮೂರನೆಯ ಅಂಕವಾದ ಪೂರ್ಣ ಸಾಮ್ಯವಾದದ ಕಡೆ ಎಳೆದುಕೊಂಡುಹೋದರು. ಈಗ ಅವರು ಬೇಡುತಿರುವ ಪ್ರಜಾತಂತ್ರಾತ್ಮಕ ಹೊಣೆಗಾರ ಸರಕಾರ ತಾನೇ ತನ್ನ ಅಂತಿಮ ಗುರಿಯಾಗಿ ಉಳಿಯದೆ "ಎಲ್ಲ ಬಗೆಯ ಆರ್ಥಿಕ ಶೋಷಣೆಯಿಂದ ಜನತೆಯನ್ನು ಮುಕ್ತಮಾಡುವ" ಕೊನೆಯ ಗುರಿಯ ಸಾಧನ ಮಾತ್ರವಾಗಿ ಉಳಿದಿದೆ. ದೋಗ್ರಾ ಮನೆತನದ ನಿರಂಕುಶಾಧಿಕಾರದಿಂದ . ಬಿಡುಗಡೆಯಾಗಬೇಕೆಂದು ಅವರು ಈಗ ಕೇಳುತಿರುವದೂ ಇದೇ ಉದ್ದೇಶದಿಂದ.

ಪ್ರತಿದ್ವಂದ್ವಿ ಸಂಸ್ಥೆ

ಶೇಖ ಅಬ್ದುಲ್ಲಾರೂ ಅವರ ೫೦೦ ಕ್ಕೂ ಹೆಚ್ಚು ಬೆಂಬಲಿಗರೂ ಇಂದು ಬಂಧನದಲ್ಲಿದ್ದಾರೆ. ಅವರ ವಿಚಾರಣೆಯೂ ನಡೆಯುವದಿದೆ. ಅಬ್ದುಲ್ಲಾರನ್ನು ಬಂಧಿಸುವ ಧೈರ್ಯವೇ ಸರಕಾರಕ್ಕೆ ಬರುತಿದ್ದಿಲ್ಲ. ಆದರೆ ಕಾಶ್ಮೀರೀ ಜನತಾ ಚಳವಳಿಯಲ್ಲಿ ಒಂದು ಬಿರುಕುಂಟಾಗಿದೆ- ಮೂಲ ಮುಸ್ಲಿಂ ಪರಿಷತ್ತನ್ನು ಕೆಲವರು ಜಾತೀಯತಾವಾದಿಗಳು ಜಿನ್ನಾರ ಬೆಂಬಲದಿಂದ ಸಂಘಟಿಸಿ ರಾಷ್ಟ್ರೀಯ ಪರಿಷತ್ತಿಗೆ ಎದುರಾಳಿಯಾಗಿ ನಿಲ್ಲಿಸಿದ್ದಾರೆ. ಅವೆರಡನ್ನು ಒಂದಾಗಿ ಮಾಡಲು ಶೇಖ ಅಬ್ದುಲ್ಲಾರು ಮುಸ್ಲಿಂ ಪರಿಷತ್ತಿನೊಡನೆ ಮಾತುಕತೆ ನಡೆಸಿದ್ದರು. ಆದರೆ, ಜನಸಾಮಾನ್ಯದ ಹಿತ, ಜಮೀನ್ದಾರಿಯ ನಾಶ ಮೊದಲಾದವುಗಳಲ್ಲಿ ಆಸ್ಥೆಯಿಲ್ಲದ ಕೇವಲ ಮಧ್ಯಮ ವರ್ಗದ ಮುಸ್ಲಿಂ ಪರಿಷತ್ತಿನ ಮುಂದಾಳುಗಳು, ರಾಷ್ಟ್ರೀಯ ಪರಿಷತ್ತು ಪುನಃ ಜಾತೀಯತೆಯನ್ನು ತಬ್ಬಿಕೊಳ್ಳಬೇಕೆಂದರು. ಹಾಗಿಲ್ಲದಿದ್ದರೆ ಅವರ ಸಹಕಾರಕ್ಕೆ ಒಡಂಬಡಲಿಲ್ಲ. ಇದರಿಂದ ಶೇಖ ಅಬ್ದುಲ್ಲಾರು ಮಾತುಕತೆ ನಿಲ್ಲಿಸಿಬಿಟ್ಟರು. ಈ ಬಿರುಕು ಕಂಡು ಬಂದೊಡನೆ ಸರಕಾರ ಶೇಖ ಅಬ್ದುಲ್ಲಾರ ಮೇಲೆ ಗದೆಯೆತ್ತಲು ಧೈರ್ಯಮಾಡಿತು.

ಹಿಂದುಸ್ತಾನ

ಮದ್ರಾಸ

ಶ್ರೀ ಆರ್ ರಾಘವ ಎ. ಮೇನನ್ ಮಲಬಾರ ಮತ್ತು ಬಿ. ವೀರಸ್ವಾಮಿ ಪೂರ್ವಗೋದಾವರಿ ಇವರು ಮದ್ರಾಸ ಸರಕಾರದ ಹೊಸ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವರು. ಮೆನನ್‌ರು ಆಹಾರ ಮಂತ್ರಿಗಳಾಗಿದ್ದು ಅದರೊಂದಿಗೆ ಮೋಟರ ಸಾರಿಗೆ ಮನೆ ನಿಯಂತ್ರಣ ಖಾತೆಗಳನ್ನು ಹಾಗು ವೀರಸ್ವಾಮಿಯವರು ಒಕ್ಕಲತನ ಅರಣ್ಯ ಹಾಗು ಸಿಂಕೋಸಾ ಖಾತೆಗಳನ್ನು ನೋಡುವರು.

ಕೊಯಿಮತ್ತೂರಲ್ಲಿಯ ಸರಕಾರಿ ಕಾಲೇಜಿನ ಜ್ಯೂನಿಯರ ಇಂಟರಮೀಡಿಯೇಟದ ಮೂರನೆ ಗುಂಪಿನ ವಿಷಯಗಳನ್ನು ಪ್ರಾದೇಶಿಕ ಭಾಷೆಯಿಂದ ಕಲಿಸಲು ಅಪ್ಪಣೆ ಕೊಡಲಾಗಿದೆ. ಸೇಲಂ ಮುನಿಸಿಪಲ್ ಕಾಲೇಜ ಹಾಗು ಮದ್ರಾಸ ವಿವೇಕಾನಂದ ಕಾಲೇಜಗಳು ಮಾತೃಭಾಷೆ ಮೂಲಕ ಶಿಕ್ಷಣ ಕೊಡುವ ಏರ್ಪಾಡು ಮಾಡಿರುವವು.

೧೯೪೨ ನೇ ಚಳವಳಿಯಲ್ಲಿ ವಸೂಲ್ಮಾಡಿದ ದಂಡದ ಹಣವನ್ನೆಲ್ಲ ತಿರುಗಿ ಕೊಡಬೇಕೆಂದು ಮದ್ರಾಸ ಸರಕಾರ ವಿಧಿಸಿದೆ.

ಸಂಯುಕ್ತಪ್ರಾಂತ

ತುಟ್ಟಿ ಭತ್ತೆ ಕೊಡುವದನ್ನು ಹಾಗೆಯೆ ಮುಂದೆ ಹಾಕುತ್ತ ನಡೆದದ್ದರಿಂದ ಝೂಂಶಿ ಲೋಕೋಶೆಡ್ಡಿನ ಸುಮಾರು ೨೦೦೦ ಕೆಲಸಗಾರರು ತಮ್ಮ ನಿಷೇಧ ಪ್ರದರ್ಶಿಸಲು ೧೬ನೇ ತಾರೀಕು ಎರಡು ಗಂಟೆ ಸಂಪು ಹೂಡಿದ್ದರು.

ಕಾನಪುರದಲ್ಲಿಯ ಜೆ. ಕೆ. ಮಿಲ್ ಮತು ಪಕ್ವಾ ಹೋಜಿಯರಿ ಮಿಲ್ಲಿನ ಕೆಲಸಗಾರರು ಕೊಟ್ಟ ನೋಟೀಸಿನ ಅವಧಿ ತೀರಿದ್ದರಿಂದ ೬ ಸಾವಿರ ಕೆಲಸಗಾರರು ೧೮ನೇ ತಾರೀಕಿನಿಂದ ಸಂಪು ಹೂಡಿರುವರು. ೧೯ನೇ ತಾರೀಕಿಗೆ ಇನ್ನುಳಿದ ಗಿರಣಿಗಳಲ್ಲಿಯ ೪ ಸಾವಿರ ಕೆಲಸಗಾರರೂ ಸಂಪು ಹೂಡಿದರು.

ಲಖನೌದಲ್ಲಿಯ ಮಿಲಿಟರಿ ಅಕೌಂಟ್ಸ ಮುಂತಾದ ಕಚೇರಿಗಳಲ್ಲಿಯ ೧೬ ಸಾವಿರ ಕಾರಕೂನರ ನೋಟೀಸಿನ ಅವಧಿ ಮುಗಿದಿದ್ದರಿಂದ ೧೮ನೇ ತಾರೀಕಿನಿಂದ ಅವರು ಸಂಪು ಹೂಡಿರುವರು. ಕೇವಲ ೧೦೦-೧೫೦ ಕಾರಕೂನರು ಕೆಲಸದ ಮೇಲಿದ್ದರು.

ಮುಂಬಯಿ

ಮುಂಬಯಿ ಪ್ರಾಂತದ ಬರಗಾಲ ಪ್ರದೇಶಗಳಲ್ಲಿ ಧಾನ್ಯಗಳ ಬೆಳೆ ಹೆಚ್ಚಿಸುವ ಉದ್ದೇಶದಿಂದ ಒಂದು ಟನ್ನಿಗೆ ೧೬೫ ರೂ. ಗಳ ಸವಲತ್ತಿನ ದರದಿಂದ ೭೦೦೦ ಟನ್ ಅಮೋನಿಯಾ ಸಲ್ಫೇಟ ಹಂಚಲು ಮಂಜೂರ ಮಾಡಿದ್ದಾರೆ. ಈ ಯೋಜನೆಯ ವೆಚ್ಚ ೮೫೦೦೦೦ ರೂಪಾಯಿಗಳನ್ನು ಮಿಕ್ಕಿ ತಗಲಬಹುದೆಂದು ಅಂದಾಜು. ೧೫ ಎಕರೆಗಳಿಗೆ ಒಂದು ಟನ್ನಿನಂತೆ ೧೩೫೦೦೦ ಎಕರೆ ಭೂಮಿಗೆ ಇದರ ಲಾಭ ದೊರಕುವದು.

ಮುಂಬಯಿ ಅಂಗಡಿ ಗುಮಾಸ್ತರ ಕಾಯದೆಯನ್ನು ಮುಂಬಯಿ, ಅಹಮದಾಬಾದ, ಪುಣೆ, ಸೊಲ್ಲಾಪುರ, ಹುಬ್ಬಳ್ಳಿ ಮೊದಲಾದ ನಗರಗಳಿಗೆ ಈಗಾಗಲೆ ಅನ್ವಯಿಸಿರುವರಷ್ಟೆ. ಇನ್ನು ಮುಂದೆ ಅದನ್ನು ಬೆಳಗಾವಿ, ವಿಜಾಪುರ, ಧಾರವಾಡ, ಗದಗ ಮೊದಲಾದ ನಗರಗಳಿಗೂ ಅನ್ವಯಿಸಬೇಕೆಂದು ಯೋಜಿಸಲಾಗಿದೆ. ಆದರೆ ಇದಕ್ಕೂ ಮೊದಲು ಈ ಕಾಯದೆಯಲ್ಲಿ ಕೆಲ ತಿದ್ದುಪಡಿಗಳನ್ನು ಮಾಡಬೇಕೆಂದು ಬಯಸಿದ್ದು ಅದಕ್ಕಾಗಿ ಸೂಚನೆ ಕಳಿಸುವವರು ಕಮೀಶನರ ಅಫ ಲೇಬರ ಮುಂಬಯಿ ಇವರಿಗೆ ಕಳಿಸಬೇಕು.

ಮುಂಬಯಿ ಸಿಡೆನ್‌ಹ್ಯಾಮ ಕಾಲೇಜಿನಲ್ಲಿ ಇಂಗ್ಲಿಶ್ ಲೆಕ್ಚರರಾದ ವಿ. ಎಂ ಇನಾಮದಾರ ಇವರಿಗೆ ಮುಂಬಯಿ ಭಾರತೀಯ ವಿದ್ಯಾಭವನದವರು ಏರ್ಪಡಿಸಿದ ಅಖಿಲ ಭಾರತ ಹಿಂದೀ ಸಂಸ್ಕೃತಿ ನಿಬಂಧ ಸ್ಪರ್ಧೆಯಲ್ಲಿ ಸುವರ್ಣ ಪದಕ ದೊರೆತಿದೆ. ಸಂಸ್ಕೃತ ನಾಟಕಗಳಲ್ಲಿ ವಿದೂಷಕನ ಪಾತ್ರವೆಂಬ ನಿಬಂಧವನ್ನು ಅವರು ಬರೆದಿದ್ದರು.

ಶ್ರೀ ಆರ್. ಎನ್. ಸಾಲೆತೂರ ಎಂ. ಎ. ಪಿ ಎಚ್ ಡಿ ಡಿ ಲಿಟ್ ಇವರಿಗೆ ಭಾರತೀಯ ವಿದ್ಯಾಭವನ ಮುಂಬಯಿ ಇವರು ಬಾಣನ-ಐತಿಹಾಸಿಕ ಅಭ್ಯಾಸ ಈ ನಿಬಂಧಕ್ಕಾಗಿ ಸುವರ್ಣ ಪದಕ ಕೊಟ್ಟಿದ್ದಾರೆ.

ಅ. ಭಾ. ರೇಡಿಯೋದವರು ತಮ್ಮ ಶಾಲಾ ವಿಭಾಗದಲ್ಲಿ ದಿನ ದಿನದ ವಸ್ತುಗಳು ಎಂಬ ವಿಷಯಮಾಲಿಕೆಯಲ್ಲಿ ಮೊದಲನೆ ಸತ್ರದ ಏಳು ಭಾಷಣಗಳನ್ನೇರ್ಪಡಿಸಿದ್ದಾರೆ. ಜುಲೈ ೪ ರಿಂದ ಈ ಭಾಷಣ ಪ್ರೊ. ಮೀಮಾಂಸಿಯವರ ದಾರಿಗಳು ಎಂಬ ಭಾಷಣದಿಂದ ಪ್ರಾರಂಭವಾಗಿ ಮುಂದೆ ಪ್ರತಿ ೧೫ ದಿನಗಳಿಗೊಮ್ಮೆ ಸಾಯಂಕಾಲ ೪ ರಿಂದ ೪-೨೫ ರವರೆಗೆ ಏರ್ಪಡಿಸಲ್ಪಡುವವು.

ಮುಂಬೈ ಫಿನ್ಲೆ ಜವಳಿ ಗಿರಣಿಯಲ್ಲಿಯ ಸಂಪು ಹೂಡಿದ ಕೂಲಿಕಾರರಿಗೂ ಸಂಪು ಹೂಡದಿದ್ದವರಿಗೂ ೧೫ ನೇ ತಾರೀಕು ಮುಂಜಾನೆ ತಿಕ್ಕಾಟ ವುಂಟಾಗಿ ೨೭ ಜನ ಗಾಯಗೊಂಡರು. ಅವರಲ್ಲಿ ಇಬ್ಬರಿಗೆ ಇರಿತದ ಗಾಯಗಳಾಗಿವೆ. ಕಳೆದ ಎರಡು ವಾರಗಳಿಂದ ಗಿರಣಿಯಲ್ಲಿಯ ೪೦೦ ಕೆಲಸಗಾರರು ತುಟ್ಟಿ ಭತ್ತೆಯ ಬಗ್ಗೆ ಸಂಪು ಹೂಡಿರುವರು.

ನಗರದಲ್ಲಿಯ ಔದ್ಯೋಗಿಕ ಅಶಾಂತಿಯಮೂಲವನ್ನು ಶೋಧಿಸಬೇಕೆಂದು ಮುಂಬಯಿ ಸರಕಾರದ ಕೂಲಿಕಾರ ಮಂತ್ರಿ ಶ್ರೀ ಗುಲಜರಲಾಲ ನಂದಾರವರು ಆಜ್ಞೆ ಹೊರಡಿಸಿದ್ದಾರೆ.

ಅ. ಭಾ. ಮರಾಠಾ ಶಿಕ್ಷಣ ಪರಿಷತ್ತಿನ ಆಧ್ಯಕ್ಷರಾದ ಸೊಂಡೂರ ಮಹಾರಾಜರು ೧೭ ಕ್ಕೆ ಮುಂಬಯಿ ಮುಖ್ಯ ಮಂತ್ರಿ ಶ್ರೀ ಖೇರರನ್ನು ಭೆಟ್ಟಿಯಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಮಹತ್ವದ ವಿಷಯಗಳ ಚರ್ಚೆ ಮಾಡಿದರು.

ದಿವಂಗತ ನಾರಾಯಣ ಮಹಾರಾಜ ಖೇಡಗಾಂವ ಇವರ ವಸತಿಯಲ್ಲಿ ಕಳ್ಳರ, ದರೋಡೆಗಾರರ ಹಾವಳಿ ಹೆಚ್ಚಿದ್ದರಿಂದ ಅಲ್ಲಿದ್ದ ಸುವರ್ಣದ ದತ್ತಾತ್ರೆಯ ಮೂರ್ತಿಯನ್ನು ಮತ್ತು ಬಂಗಾರದ ಆಭರಣಗಳನ್ನು ಪುಣೆಯ ಬ್ಯಾಂಕಿಗೆ ಸ್ಥಳಾಂತರಿಸಲಾಗಿದೆ.

ಮುಂಬಯಿ ಪ್ರಾಂತದ ಮೂರೂ ರೇಲ್ವೆ ಕಂಪನಿಗಳ ಪೋಲೀಸ ಅಧಿಕಾರಿಗಳು ತಿಕೀಟು ಆಫೀಸಗಳಲ್ಲಿ ಅಥವಾ ರೇಲ್ವೆ ನಿಲ್ದಾಣಗಳಲ್ಲಿ ದುಷ್ಟಜನರಿಂದ ನಡೆಯುವ ಉಪದ್ರವವನ್ನು ಅಥವಾ ಅಪಾಯಕರ ಚಟುವಟಿಕೆಗಳನ್ನು ತಡೆಯಲು ಯೋಗ್ಯ ಉಪಾಯಗಳನ್ನು ಕೈಕೊಂಡಿದ್ದಾರೆ. ಪೋಲೀಸರನ್ನು ಇಲ್ಲಿ ನಿಯಮಿಸಲಾಗಿದೆಯಲ್ಲದೆ ಆಗಾಗ ಪೋಲೀಸ ಅಧಿಕಾರಿಗಳು ಬಂದು ಮೇಲ್ವಿಚಾರಣೆ ನಡೆಸುವರು.

ಹೊಸದಿಲ್ಲಿ

ಸಂಬಳ ಸಮಿತಿಯ ಸೂಚನೆಗಳ ಪ್ರಕಾರ ತಿದ್ದಿದ ಸಂಬಳದ ಹೊಸ ಪ್ರಮಾಣಗಳನ್ನು ೧೯೪೭ ನೇ ಜಾನೆವಾರಿಯಿಂದ ಜಾರಿಯಲ್ಲಿ ತರಬೇಕೆಂದು ಹಿಂದುಸ್ತಾನ ಸರಕಾರ ನಿರ್ಧರಿಸಿದೆಂದು ಪ್ರಕಟಣೆ ಹೊರಟಿದೆ.

ಸಿಂಗಾಪುರದಲ್ಲಿಯ ಶಾಂಹೀ ತುರಂಗದಲ್ಲಿ ಅಂದಮಾನ ದ್ವೀಪದಲ್ಲಿ ಅತ್ಯಾಚಾರ ಮಾಡಿದ ಆರೋಪದ ಮೇಲೆ ೮ ಜಪಾನರನ್ನು ೧೮ನೇ ತಾರೀಕು ಗಲ್ಲಿಗೇರಿಸಲಾಯಿತು. ಅವರಲ್ಲಿ ಜಪಾನದ ಹಿಂದಿನ ನೌಕಾ ಮಂತ್ರಿ ತೈಜೇ ಹಾರೊ ಇವರಿದ್ದರು.

ದಕ್ಷಿಣ ಆಫ್ರಿಕೆಯಲ್ಲಿಯ ಯಾವ ಯುರೋಪಿಯನ್‌ನೂ ರಿಜರ್ವ ಬ್ಯಾಂಕಿನ ಪಾಲುಗಾರನಾಗಲು ಅರ್ಹನಿರುವದಿಲ್ಲೆಂದು ಬ್ಯಾಂಕಿನವರು ನಿರ್ಣಯಿಸಿದ್ದಾರೆ. ದಕ್ಷಿಣ ಆಫ್ರಿಕೆಯಲ್ಲಿ ಹಿಂದೀಯರ ವಿರುದ್ಧ ಪಾಸುಮಾಡಿದ ಗೊತ್ತುವಳಿಯನ್ನು ಪ್ರತಿಭಟಿಸಲು ಹೀಗೆ ಮಾಡಲಾಗಿದೆ.

ಶಸ್ತ್ರಾಸ್ತ್ರಗಳನ್ನು ಲಾಠಿಗಳನ್ನು ಕತ್ತಿ ಕಠಾರಿ ಮೊದಲಾದ ಆಯುಧಗಳನ್ನು ಹಿಡಿದುಕೊಂಡು ಯಾವದೇ ಸಾರ್ವಜನಿಕ ಸ್ಥಳದಲ್ಲಿ ಅಡ್ಡಾಡಬಾರದೆಂದು ದಿಲ್ಲಿ ಮ್ಯಾಜಿಸ್ಟ್ರೇಟರು ಎಪ್ರಿಲ ೧೯ಕ್ಕೆ ಹೊರಡಿಸಿದ ಹುಕುಮಿನ ಅವಧಿಯನ್ನು ಅಕ್ಟೋಬರ ೧೭ ರ ವರೆಗೆ ಬೆಳಿಸಿದ್ದಾರೆ.

ಜೋಧಪುರದ ಪಂಡಿತ ಮೋತೀಲಾಲ ಗುರುಟ್ಟು ಎಂಬವರು ಒಂದು ಹೊಸ ಜಾಗತಿಕ ಭಾಷೆಯನ್ನು ಕಂಡುಹಿಡಿದಿದ್ದಾರೆ. ಸದ್ಯದ ಯಾವ ಭಾಷೆಯೂ ಇದರಷ್ಟು ಸುಲಭ ಮತ್ತು ಉಪಯುಕ್ತವಾಗಿಲ್ಲಂತೆ. ಈ ಭಾಷೆಯನ್ನು ಕೇವಲ ೪೦ ಗಂಟೆಗಳಲ್ಲಿ ಕಲಿಯಬಹುದಲ್ಲದೆ ಒಮ್ಮೆ ಕಲಿತರೆ ಅದೆಂದಿಗೂ ಮರೆಯುವದಿಲ್ಲಂತೆ. ಇದಲ್ಲದೆ ಈ ಭಾಷೆಯ ಮೇಲಿನ ಪ್ರಭುತ್ವವೂ ಹೆಚ್ಚುವದಂತೆ.

ಸೊಲ್ಲಾಪುರ

ಸೊಲ್ಲಾಪುರದಲ್ಲಿ ಬಸ್ ಸರ್ವಿಸ್ ಪ್ರಾರಂಭಿಸಬೇಕೆಂಬದಾಗಿ ಮುನಿಸಿಪಾಲಿಟ ಸಭೆಯಲ್ಲಿ ನಿರ್ಣಯಿಸಲಾಯಿತು. ರಿಕ್ಷಾ ಪ್ರಾರಂಭಿಸುವದು ಉಚಿತವೆನಿಸದ್ದರಿಂದ ಆ ಸಂಬಂಧದ ಏರ್ಪಾಡು ಮಾಡಬಾರದೆಂದು ಮತ್ತೊಂದು ಗೊತ್ತುವಳಿಯಾಯಿತು.

ಸೊಲ್ಲಾಪುರ ಮುನಿಸಿಪಾಲಿಟಿಯ ರಾಷ್ಟ್ರೀಯ ಪಕ್ಷದ ಪಾರ್ಲಮೆಂಟರಿ ಬೋರ್ಡಿನ ಅಧ್ಯಕ್ಷ ಶ್ರೀ ಅಪ್ಪಾಸಾಹೇಬ ಕಾಡಾದಿ ಇವರು ತಮ್ಮ ರಾಜೀನಾಮೆಯನ್ನು ಹಿಂತೆಗೆದುಕೊಂಡಿರುವರು.

ಮುಂಬಯಿ ಸರಕಾರದ ಉದ್ಯೋಗ ಮಂತ್ರಿ ಶ್ರೀ ತಪಾಸೆಯವರು ಪಂಢರಪುರಕ್ಕೆ ಬಂದಾಗ ಧಾನ್ಯ ಹಂಚಿಕೆಯ ವ್ಯವಸ್ಥೆ ಜಿಲ್ಲಾ ಸಮಿತಿಗಳ ಕಡೆಗೆ ಒಪ್ಪಿಸಲಾಗುವದೆಂದು ಹೇಳಿದರು.

ಕೆನಡಾದಲ್ಲಿ ಸೋವಿಯಟ್ ಸರಕಾರದವರು ನಡೆಸಿದ "ಪರಮಾಣು ರಹಸ್ಯದ ಅಪಹಾರ" ತಂತ್ರದಲ್ಲಿ ಸೇರಿದ್ದನೆಂದು ವಿಚಾರಣೆಗೆ ಗುರಿಯಾಗಿದ್ದ ಕೆನಡಾ ಪಾರ್ಲಮೆಂಟಿನ ಕಮ್ಯುನಿಸ್ಟ ಸದಸ್ಯನಾದ ರೋಸ್ ಎಂಬವನು ಅಪರಾಧಿಯೆಂದು ವರಿಷ್ಠ ನ್ಯಾಯಾಲಯ ನಿರ್ಣಯಿಸಿದೆ. ದೇಶದ್ರೋಹಕ್ಕಾಗಿ ೭ ವರ್ಷ ಶಿಕ್ಷೆ ಅವನಿಗೆ ವಿಧಿಸಲ್ಪಡಬಹುದು.

* * *

ಥಾಯಿಲಂಡದ ಅರಸನ ಮರಣಕ್ಕೆ ಒಳಸಂಚೇ ಕಾರಣವಾಗಿರಬೇಕೆಂದೂ ಅದು ಕೊಲೆಯೆಂದೂ ಸುದ್ದಿ ಹಬ್ಬಿದೆ. ಅನೇಕ ಪತ್ರಿಕೆಗಳು ಕೊಲೆಯೇ ಇರಬೇಕೆಂದು ಬರೆದಿವೆ. ಅರಮನೆಯ ಅನೇಕರನ್ನು ಈ ಸಂಬಂಧದಲ್ಲಿ ಬಂಧಿಸಲಾಗಿದೆಯಂತೆ.

ಮುಂಬಯಿಯಲ್ಲಿಯ ಬಿಲ್ವಾಡಿ ಹೋಬಳಿ ಮೊಗವೀರ ಮಹಾಜನ ಸಂಘದ ಪಂಚಮವಾರ್ಷಿಕ ಮಹಾಸಭೆ ಶ್ರೀ ಎಂ. ಆರ್. ಬಸ್ರೂರರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಸಾಂಗವಾಯಿತು. ಅತಿಥಿಗಳಾಗಿ ಬಂದ ಶ್ರೀ ಎನ್. ಪಿ. ಬಂಗೇರ, ಕೇ. ಟಿ. ಕರ್ಕೆ, ಡಿ. ಟಿ. ಕಾಂಚನ ಮತ್ತು ಸದಸ್ಯರಲ್ಲಿ ಹಲವರು ಸಂಘದ ಅಭಿವೃದ್ಧಿ ಬಗ್ಗೆ ಮಾತಾಡಿದರು.

ಬಾಗಲಕೋಟೆ ವಿಜಾಪುರಗಳಲ್ಲಿ ಮುಂಬಯಿ ಮುಖ್ಯ ಮಂತ್ರಿಗಳು

ಕರ್ನಾಟಕದ ಋಣ ತೀರಿಸುವ ಆಶ್ವಾಸನ

ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಬಾಳಾಸಾಹೇಬ ಖೇರರು ಇದೇ ೧೮—೧೯ ಕ್ಕೆ ಬಾಗಲಕೋಟೆ ವಿಜಾಪುರಗಳನ್ನು ಸಂದರ್ಶಿಸಿದರು. ಮುಖ್ಯ ಮಂತ್ರಿಗಳು ವಿಜಾಪುರ ಜಿಲ್ಹೆಗೆ ಅಧಿಕೃತ ಭೆಟ್ಟಿಕೊಡುವುದು ಇದೇ ಮೊದಲನೆಯ ಸಲವಾದ್ದರಿಂದ ಎಲ್ಲೆಲ್ಲಿಯೂ ಉತ್ಸಾಹ ತುಂಬಿ ತುಳುಕತಲಿದ್ದಿತು. ಮಂತ್ರಿಗಳೊಡನೆ ಕಂದಾಯ ಖಾತೆಯ ಉಪಮಂತ್ರಿಗಳಾದ ಶ್ರೀ ಪಾಟೀಲ ಕಲ್ಲನಗೌಡರೂ ಬಂದದ್ದರಿಂದ ಇಮ್ಮಡಿ ಉತ್ಸಾಹ. ೧೮ ನೇ ತಾರೀಕು ಬೆಳಗಾಗುವುದರಲ್ಲಿ ಬಾಗಲಕೋಟೆ ಸ್ಟೇಶನದಲ್ಲಿ ಅಧಿಕಾರಿಗಳೂ ಕಾಂಗ್ರೆಸ ಕಾರ್ಯಕರ್ತರೂ ಪ್ರಮುಖ ನಾಗರಿಕರೂ ಪ್ರಾಧ್ಯಾಪಕರೂ ವಿದ್ಯಾರ್ಥಿಗಳೂ ನೆರೆದು ಮಂತ್ರಿಗಳನ್ನು ಸ್ವಾಗತಿಸಿದರು. ಪೋಲೀಸ ಮತ್ತು ಸ್ವಯಂ ಸೇವಕರು ಗೌರವರಕ್ಷೆ ಕೊಟ್ಟರು. ಬಸವೇಶ್ವರ ಕಾಲೇಜಿನಲ್ಲಿ ಮಂತ್ರಿಗಳ ವಸತಿಯ ಏರ್ಪಾಡು ಮಾಡಲಾಗಿತ್ತು. ಅಲ್ಲಿ ಪ್ರಾತರ್ವಿಧಿ ತೀರಿಸಿಕೊಂಡು ಹರಿಜನ ಬೋರ್ಡಿಂಗಿಗೆ ಭೆಟ್ಟಿಕೊಟ್ಟರು.

ಅನಂತರ ಮಂತ್ರಿಗಳು ಸೇವಾದಲದಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕರ್ತರ ಔಪಚಾರಿಕ ಸಭೆಗೆ ಬಂದರು. ಜಿಲ್ಹಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಕಂಠಿಯವರು ಅವರನ್ನು ಸ್ವಾಗತಿಸಿ ಕರ್ನಾಟಕದಲ್ಲಿಯ ಸಮಸ್ಯೆಗಳನ್ನು ಅವರ ಮುಂದಿಟ್ಟರು. ಶ್ರೀ ಮಂಗಳವೇಡೆ ಶ್ರೀನಿವಾಸ ರಾಯರು ೧೬ ಮುದ್ದೆಗಳುಳ್ಳ ಒಂದು ಮನವಿಯನ್ನು ಸಮರ್ಪಿಸಿದರು.

ಶ್ರೀ ಖೇರರು ಉತ್ತರ ಕೊಡುತ್ತ ಮುಂಬಯಿ ಪ್ರಾಂತದ ಇನ್ನಿತರ ಭಾಗಗಳು ಕರ್ನಾಟಕದ ಋಣ ತಿಂದಿವೆ. ಆದಷ್ಟು ಬೇಗ ಅದನ್ನು ತೀರಿಸುವೆವೆಂದು ಆಶ್ವಾಸನವಿತ್ತರು. ಕಾಂಗ್ರೆಸ್ ಕಮಿಟಿ ಕಾಂಗ್ರೆಸ್ ಮಂತ್ರಿಮಂಡಳ ಕಾಂಗ್ರೆಸ್ಸಿಗರು ಹಾಗು ಅಧಿಕಾರಿಗಳಲ್ಲಿ ಸಹಕಾರಭಾವವಿರಬೇಕು. ಕಾಂಗ್ರೆಸ್ಸಿಗೆ ಅಧಿಕಾರಬೇಕೆಂದು ನಾವು ಮಂತ್ರಿಪದ ಸ್ವೀಕರಿಸಿಲ್ಲ. ರಾಷ್ಟ್ರಕ್ಕೆ ಅಧಿಕಾರಬೇಕೆಂಬುದೇ ನಮ್ಮ ಧ್ಯೇಯ. ಸೇವೆಯೆ ಕಾಂಗ್ರೆಸ್ಸಿನ ತತ್ವ. ಅದನ್ನು ಬಿಟ್ಟು ಚಲಿಸಬಾರದು. ಲಂಚಗುಳಿತನದ ಉದಾಹರಣೆಗಳು ನಿಮಗೆ ಗೊತ್ತಿದ್ದರೆ ಮಂತ್ರಿಗಳಿಗೆ ತಿಳಿಸಿರಿ. ಅವನ್ನು ಸರಿಪಡಿಸುವೆವು. ಕಲೆಕ್ಟರರನ್ನು ವರ್ಗಾಯಿಸಲು ಕೇಳಿದರೆ ನಮ್ಮ ಕೆಲಸವಾಗದು. ಮನೆಯಲ್ಲಿಯ ಹೊಲಸನ್ನು ಇನ್ನೊಬ್ಬರ ಮನೆಯ ಮುಂದೆ ಚಲ್ಲಿದರೆ ಹೊಣೆ ಪೂರ್ಣವಾಗುವದಿಲ್ಲ. ಆದುದರಿಂದ ಆ ಅಧಿಕಾರಿಯನ್ನು ತಿದ್ದಲು ನೀವು ಪ್ರಯತ್ನಿಸಬೇಕು ಅದಕ್ಕೆ ನಾವು ಸಹಾಯ ಮಾಡುವೆವು ಅಧಿಕಾರಿಗಳ ಕಡಿಂದ ಕೆಲಸ ಹೇಗೆ ತೆಗೆದುಕೊಳ್ಳಬೇಕೆಂಬುದರ ಕಡೆಗೆ ನಿಮ್ಮ ಗಮನವಿರಬೇಕೆಂದು ಮುಂತಾಗಿ ಹೇಳಿದರು.

ಅನಂತರ ಶ್ರೀ ಖೇರರು ಶ್ರೀ ಜೋರಾಪುರ ಗುರುರಾಯರಲ್ಲಿ ಅಲ್ಪೋಪಹಾರ ತೀರಿಸಿ ಬಸವೇಶ್ವರ ಕಾಲೇಜ ಸಮಾರಂಭಕ್ಕೆ ತೆರಳಿದರು. ಅಲ್ಲಿ ಸ್ವಾಗತಗೀತೆಯ ನಂತರ ಅಧ್ಯಕ್ಷ ಶ್ರೀ ಬಸವಲಿಂಗ ಸ್ವಾಮಿಗಳು ಅವರನ್ನು ಸ್ವಾಗತಿಸಿದರು. ಶ್ರೀ ಶಿರಗುಪ್ಪಿ ದೇಸಾಯರು ೫೧೦೦೦ ರೂ., ದಾವಣಗೇರಿಯ ಶ್ರೀ ಚಿಗಟೇರಿ ಮುರಿಗೆಪ್ಪನವರು ೫೦೦೦ ರೂ. ಮತ್ತು ಪಾಚ್ಛಾಪುರದ ಈಶ್ವರಪ್ಪನವರು ೨೫೦೦ ರೂಪಾಯಿ ಕಾಣಿಕೆ ಕೊಟ್ಟಿದ್ದನ್ನು ಸ್ಮರಿಸಿದರು. ೧೯೦೬ ರಲ್ಲಿ ಶ್ರೀ ಬೀಳೂರ ಸ್ವಾಮಿಗಳಿಂದ ಸಂಸ್ಕೃತ ಪಾಠಶಾಲೆಯಿಂದ ಪ್ರಾರಂಭವಾಗಿ ಈ ಸಂಸ್ಥೆ ೧೯೪೪ ರಲ್ಲಿ ಕಾಲೇಜ ತೆರೆಯುವ ವರೆಗಿನ ವಿದ್ಯಮಾನಗಳನ್ನೆಲ್ಲ ಸ್ವಲ್ಪದರಲ್ಲಿ ಅರುಹಲಾಯಿತು. ಹಾರ ಸಮರ್ಪಣವಾದ ಬಳಿಕ ಶ್ರೀ ಕಿಣಗಿಯವರು ವರದಿಯನ್ನು ಓದಿದರು. ಅನಂತರ ಶ್ರೀ ವಾಯು. ಮಹಾಬಳೇಶ್ವರಪ್ಪನವರು ಕರ್ನಾಟಕ ವಣಿಕ್ ಸಂಘದ ಪರವಾಗಿ ಮಾನಪತ್ರವನ್ನೋದಿದರು. ಅದರಲ್ಲಿ ಕರ್ನಾಟಕ ಏಕೀಕರಣ ಔದ್ಯೋಗಿಕ ಸಮಸ್ಯೆ ಮೊದಲಾದವುಗಳನ್ನು ವಿವರಿಸಲಾಗಿತ್ತು.

ಶ್ರೀ ಖೇರರು ಮೊದಲು ಕನ್ನಡದಲ್ಲಿಯೆ ಮಾತಾಡಿ ಅನಂತರ ಈ ಸಂಸ್ಥೆಯ ಮಹತಿಯನ್ನು ಬಣ್ಣಿಸಿ ಬಿ. ಎ. ವರ್ಗಗಳ ಪ್ರಾರಂಭೋತ್ಸವ ಮಾಡಲು ಒಳ್ಳೆ ಸಂತೋಷವಾಗುತ್ತದೆಂದು ನುಡಿದರು. ಕರ್ನಾಟಕ ವಣಿಕ ಸಂಘದ ಬೇಡಿಕೆಗಳಿಗೆ ಉತ್ತರ ಕೊಡುತ್ತ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾಗಿದ್ದ ತಮಗೆ ಕರ್ನಾಟಕದ ಬೇಡಿಕೆಗಳು ಪೂರ್ಣ ಗೊತ್ತಿದ್ದು ಅವುಗಳ ಬಗ್ಗೆ ಕಾಳಜಿ ಮಾಡಬೇಡಿರೆಂದು ಹೇಳಿದರು. ಭಟಕಳ ಮತ್ತು ಕಾರವಾರ ಬಂದರಗಳ ಪರಿಶೀಲನೆ ಬಗ್ಗೆ ಈಗಾಗಲೆ ಹುಕುಮು ಹೋಗಿದೆಯಾಗಿ ಹೇಳಿದರು. ಈ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವೆವು. ಸ್ವಲ್ಪ ತಾಳಿರೆಂದು ಮುಂತಾಗಿ ಹೇಳಿದರು. ಆಭಾರ ಮನ್ನಣೆಯಾಗಿ ಸಮಾರಂಭ ಕೊನೆಗಂಡಿತು.

ಅನಂತರ ಅವರು ದನಗಳ ಹಟ್ಟಿಯನ್ನು ನೋಡಿಕೊಂಡು ಸಕ್ರಿ ಹಾಯಸ್ಕೂಲಿನ ಸಮಾರಂಭಕ್ಕೆ ದಯಮಾಡಿಸಿದರು. ಬಾಲಿಕೆಯರ ಮನರಂಜಕ ಕಾರ್ಯಕ್ರಮ ಜರುಗಿದವು. ಅನಂತರ ವಿದ್ಯಾಪ್ರಸಾರಕ ಮಂಡಳದ ಕಾರ್ಯದರ್ಶಿ ಶ್ರೀ ಬಾಬುರಾವ ಪಟವರ್ಧನರು ಸಂಸ್ಥೆಯ ಹತ್ತು ವರ್ಷದ ಪ್ರಗತಿಯನ್ನು ವಿವರಿಸಿದರು. ಶ್ರೀ ವೆಂಕಪ್ಪಣ್ಣ ಸಕ್ರಿಯವರು ಸಂಸ್ಥೆಯ ಹಾಯಸ್ಕೂಲಿಗೆ ೨೦೫೦೧ ರೂ, ಬಾಲಿಕೆಯರ ಶಾಲೆಗೆ ೧೦೦೦೦ ರೂಪಾಯಿ, ಬಡ ಹುಡುಗರ ಸಹಾಯಕ್ಕಾಗಿ ೫೦೦ ರೂ. ಕೊಟ್ಟಿದ್ದನ್ನು ವಿವರಿಸಿ ಅವರ ಔದಾರ್ಯದ ಫಲವಾಗಿ ಶಾಲೆಗೆ ಅವರ ಕಕ್ಕ ಶಂಕರಪ್ಪಾ ಸಕ್ರಿ ಇವರ ಸ್ಮಾರಕವೆಂದು ಹಾಯಸ್ಕೂಲಕ್ಕೆ ನಾಮಕರಣ ಮಾಡುವದಾಗಿ ಹೇಳಿದರು. ಅಲ್ಲದೆ ಬೇರೆ ಬೇರೆ ಮಹನೀಯರು ಕೊಟ್ಟ ಕಾಣಿಕೆಗಳನ್ನು ಸಾರಿದರು. ಶ್ರೀ ಖೇರರು ಕಟ್ಟಡದ ಪ್ರಾರಂಭೋತ್ಸವ ಮಾಡಿ ಶಾಲೆಗೆ ಹೊಸ ನಾಮಕರಣ ಮಾಡುತ್ತ ಚಿಕ್ಕ ಭಾಷಣ ಮಾಡಿ ವಿದ್ಯೆಯ ಮಹತ್ವವನ್ನರುಹಿದರು. ಪ್ರತಿಯೊಬ್ಬ ನಿರಕ್ಷರಿಯನ್ನು ಸಾಕ್ಷರನನ್ನಾಗಿ ಮಾಡುವದು ಅವಶ್ಯವಿದ್ದು ಮ್ಯಾಟ್ರಿಕ್ಯುಲೇಟನನು ಈ ಬಗ್ಗೆ ಸರ್ಟಿಫಿಕೇಟು ಪಡೆಯುವ ಪ್ರಸಂಗ ಬರುವದೆಂದು ಹೇಳಿದರು. ಶ್ರೀ ನವಲಗುಂದ ಸ್ವಾಮಿಗಳ ಆಶೀರ್ವಾದಪರ ಭಾಷಣವಾದ ನಂತರ ಆ ಭಾರಮನ್ನಣೆಯೊಂದಿಗೆ ಸಮಾರಂಭ ಕೊನೆಗಂಡಿತು. ವಾಸುದೇವ ವಿನೋದಿನಿ ನಾಟಕ ಸಭೆಯವರು ಹೌಹಾರಿದ ಹರಿಶ್ಚಂದ್ರವೆಂಬ ಕಾಂಗ್ರೆಸ್ ಮುಖ್ಯ ಮಂತ್ರಿಗಳಿಗೆ ಜನರಿಂದಾಗುವ ಪೀಡೆಗಳನ್ನು ವಿವರಿಸುವ ಪ್ರಹಸನ ಅಭಿನಯಿಸಿ ತೋರಿಸಿದರು. ಪ್ರಹಸನದ ನಂತರ ಇದೊಂದು ವಾಸ್ತವಿಕ ಚಿತ್ರವೆಂಬ ಉದ್ಗಾರವನ್ನು ಶ್ರೀ ಬಾಳಾಸಾಹೇಬರು ತೆಗೆದು ಇಲ್ಲಿನ ಕಾರ್ಯಕ್ರಮ ಮುಗಿಸಿಕೊಂಡು ಸಾಯಂಕಾಲ ೬ ಗಂಟೆಗೆ ವಿಜಾಪುರಕ್ಕೆ ತೆರಳಿದರು.

ವಿಜಾಪುರದಲ್ಲಿ

ಶ್ರೀ ಖೇರರು ೧೮ ನೇ ರಾತ್ರಿ ೯ ಗಂಟೆಗೆ ಬಾಗಲಕೋಟೆಯಿಂದ ಬಂದರು. ಭೋಜನೋತ್ತರ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ಸದ್ಯದ ಪರಿಸ್ಥಿತಿಯನ್ನು ವಿವರಿಸಿದರು. ೧೯ ನೇ ತಾರೀಕು ಮುಂಜಾನೆ ಶಿಪರ್ಡ ಹಾಲಿನಲ್ಲಿ ಕೂಡಿದ ಕಾಂಗ್ರೆಸ ಕಾರ್ಯಕರ್ತರ ಸಭೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟರು. ಯಾವ ಕೆಲಸಕ್ಕೂ ಅವಸರ ಮಾಡಬೇಡಿರಿ. ಅಡಿಗೆ ಸಿದ್ಧವಾಗಹತ್ತಿದೆ. ನೀವೆಲ್ಲರೂ ಸಂಘಟಿತರಾದರೆ ಎಲ್ಲರಿಗೂ ದೊರೆತು ಸುಖವಾಗುವದೆಂದು ಮುಂತಾಗಿ ಒಳ್ಳೆ ಬೋಧಪ್ರದವಾಗಿ ಸೌದಾಹರಣ ಹೇಳಿದರು. ಸಿದ್ಧೇಶ್ವರ ಹಾಯಸ್ಕೂಲ ಬೈಲಿನಲ್ಲಿ ಸೇವಾದಲದವರ ಕವಾಯಿತು ನೋಡಿ ಹರಿಜನ ಬಾಲಕರ ವಸತಿ ಗೃಹಕ್ಕೆ ಭೆಟ್ಟಿ ಕೊಟ್ಟರು.

ಆ ಮೇಲೆ ಹರಿಜನ ಕನ್ಯಾ ಮಂದಿರದ ಕೋನಶಿಲೆ ಸ್ಥಾಪಿಸುವ ಸಮಾರಂಭ ಜರಗಿತು. ಪ್ರಾಸ್ತಾವಿಕವಾಗಿ ಶ್ರೀ ದಿವಾಕರರು ಮಾತಾಡುತ್ತ ಶ್ರೀ ಖೇರರವರ ಉದಾತ್ತ ಜೀವನವನ್ನು ಬಣ್ಣಿಸಿ ಅವರು ಈ ಸಮಾರಂಭಕ್ಕೆ ದೊರೆತದ್ದು ಮಹದ್ಭಾಗ್ಯವೆಂದು ಹೇಳಿ ಶ್ರೀ ಕೆ ಎಚ್ ಕಬ್ಬೂರರು ಕನ್ಯಾ ಮಂದಿರಕ್ಕೆ ಕೊಟ್ಟ ೨೦ ಸಾವಿರ ರೂಪಾಯಿ ಕಾಣಿಕೆ ವಿವರಿಸಿ ಅವರು ತೀರ ಬಡತನದಿಂದ ಈಗ ಹೇಗೆ ಲಕ್ಷಾಧೀಶರಾಗಿರುವರೆಂಬದನ್ನು ಬಣ್ಣಿಸಿದರು. ಕಾಕಾ ಕಾರಖಾನೀಸರು ೧೪ ವರ್ಷದ ವರದಿಯನ್ನೋದಿ ಸಂಸ್ಥೆಗೆ ಉದಾರ ಸಹಾಯ ಮಾಡಿದವರ ಹೆಸರು ಹೇಳಿದರು. ಶ್ರೀಮಾನ್ ಕಬ್ಬೂರರು ಮಂತ್ರಿಗಳಿಗೆ ಪೂಮಾಲೆ ಹಾಕಿ ದಿವಂಗತ ಕೌಜಲಗಿ ಹಣಮಂತರಾಯರ ಪತ್ರದಿಂದ ಶ್ರೀ ಸೋನೂಬಾಯಿ ಕಬ್ಬೂರರು ಹೇಗೆ ಈ ಧನ ಸಹಾಯ ಮಾಡಲು ಮುಂದಾದರೆಂಬದನ್ನು ತಿಳಿಸಿ ಕಟ್ಟಡದ ಯೋಜನೆಯನ್ನು ವಿವರಿಸಿದರು. ಆ ಮೇಲೆ ಶ್ರೀ ಘೋಡಕೆಯವರು ಹರಿಜನರಲ್ಲಿ ಆಗಬೇಕಾದ ವಿದ್ಯಾ ಪ್ರಸಾರ ಮೊದಲಾದ್ದನ್ನು ವಿವರಿಸಿದರು. ಶ್ರೀ ಖೇರರು ಕೋನಶಿಲಾ ಪ್ರಾರಂಭೋತ್ಸವ ಜರುಗಿಸಿ ವಿಚಾರ ಪರಿಪ್ಲುತ ಭಾಷಣ ಮಾಡುತ್ತ ಈ ದೇಶದಲ್ಲಿ ಸಮತಾ ರಾಜ್ಯ ಬೇಕು ಸ್ಪೃಶ್ಯಾಸ್ಪೃಶ್ಯ ಭೇದವಳಿಯಬೇಕೆಂದು ಮುಂತಾಗಿ ಹೇಳಿ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದವರಿಗೆ ಮುಸಲ್ಮಾನರಿಗೆಮತ್ತು ಮಧ್ಯಮವರ್ಗದವರಿಗೆ ಪ್ರವೇಶ ನಿರಾಕರಿಸಬಾರದೆಂದು ವಿಧಿಸಿದ್ದರ ಬಗ್ಗೆ ಸ್ಪಷ್ಟೀಕರಣ ಮಾಡಿದರು. ಹರಿಜನ ಕನ್ಯಾ ಮಂದಿರದಂಥ ಪವಿತ್ರ ಕಾರ್ಯಕ್ಕೆ ತಾವೂ ಸಹಾಯ ಮಾಡುವದಾಗಿ ಹೇಳಿ ತಮಗೆ ಕೊಟ್ಟ ಬೆಳ್ಳಿಯ ತೆರಿಪೆಯನ್ನು ಲಿಲಾವಿಗೆ ಹಚ್ಚುವದಾಗಿ ಹೇಳಿದರು. ಅದನ್ನೂ ಶ್ರೀ ಜಹಾಗಿರದಾರರು ಕೊಟ್ಟ ಚಿನ್ನದ ಸರಿಪಳಿಯನ್ನೂ ಶ್ರೀ ದಿವಾಕರರು ಲಿಲಾವು ಮಾಡಲಾಗಿ ಮೊದಲನೆಯದು ೬೦೧ ರೂ. ಗೂ ಎರಡನೆಯದು ೩೫೧ ರೂ. ಗೂ ಲಿಲಾವಾದವು. ಆ ಹಣವನ್ನು ಕನ್ಯಾಮಂದಿರಕ್ಕೆ ಕೊಡಲಾಯಿತು. ಅನಂತರ ಶ್ರೀ ಕೆ. ಎಫ್. ಪಾಟೀಲರು ಮಾತಾಡಿದರು. ಶ್ರೀ ಸಜ್ಜನರು ಆಭಾರ ಮನ್ನಿಸಿದ ಬಳಿಕ ವಂದೇ ಮಾತರಂ ಗೀತೆಯೊಡನೆ ಸಮಾರಂಭ ಕೊನೆಗಂಡಿತು.

ಅನಂತರ ಅವರು ಬೇರೆ ಬೇರೆ ಸಂಸ್ಥೆಗಳಿಗೆ ಭೆಟ್ಟಿ ಕೊಟ್ಟರು. ಮಧ್ಯಾಹ್ನ ಶಾಸನಸಭೆಯ ಸದಸ್ಯರಿಗೆ ಅಧಿಕಾರಿಗಳಿಗೆ ಸಂದರ್ಶನವಿತ್ತರು. ಕಲೆಕ್ಟರರಲ್ಲಿ ಚಹಾಪಾನ ತೀರಿಸಿಕೊಂಡು ಸಾಯಂಕಾಲ ಗಾಡಿಯಿಂದ ಪುಣೆಗೆ ಹೋದರು.

ಮೈಸೂರು ಪ್ರತಿನಿಧಿ ಸಭೆಯ ವಿಷಾದಾಂತ ನಾಟಕ

ಆಹಾರ ಚರ್ಚೆಯಲ್ಲಿ ಅಡ್ಡಿ

ದಿವಾಣರ ಸಮಾರೋಪವಿಲ್ಲ !

ಮೈಸೂರ ಪ್ರಜಾಪ್ರತಿನಿಧಿ ಸಭೆಯ ಕೊನೆಯ ದಿನ ಆಹಾರ ಚರ್ಚೆಗೆ ಮೀಸಲಾಗಿತ್ತು. (ತಾ.೧೨) ಅನೇಕ ಸದಸ್ಯರು ಸರಕಾರದ ಆಹಾರ ಧೋರಣೆ, ಅಸಾಮರ್ಥ್ಯ, ಲಂಚಗುಳಿತನವನ್ನು ಟೀಕಿಸಿ ಮಾತಾಡಿದರು; ಆದರೆ ಕಾಂಗ್ರೆಸ ಸದಸ್ಯರು ತಮಗೆ ಚರ್ಚೆಯಲ್ಲಿ ಭಾಗವಹಿಸಲು ಕೊಟ್ಟ ಅವಕಾಶ ಸಾಲದೆಂದು ಅಸಂತುಷ್ಟರಾಗಿದ್ದರು. ಇದರ ನಡುವೆ ವಿಧಿಬಿಂದುವಿನ ಪ್ರಶ್ನೆಯೊಂದು ಎದ್ದು ಇಡಿ ಚರ್ಚೆಯ ಮುಖವನ್ನೆ ಹುಳಿಸಿ ಬಿಟ್ಟಿತು. ಚರ್ಚೆಯೇ ನಿಯಮಬಾಹ್ಯವೆಂದು ಕಾಂಗ್ರೆಸ ಸದಸ್ಯರೊಬ್ಬರು ಪ್ರತಿಬಂಧವೊಡ್ಡಿದರು. ಹೀಗಾಗಿ ಆಹಾರ ಚರ್ಚೆಗೆ ಉತ್ತರ ಕೊಡುತ್ತಿದ್ದ ಆಹಾರ ನಿರ್ದೇಶಕ ಶ್ರೀ ಸುಂದರರಾಯರು ಅರ್ಧದಲ್ಲೆ ಭಾಷಣವನ್ನು ಮುಗಿಸಿದರು. ದಿವಾನ ಅಧ್ಯಕ್ಷರು ರೂಢಿಯಂತೆ ಸಮಾರೋಪ ಭಾಷಣ ಮಾಡದೆ ಸಭೆಯನ್ನು ಕೊನೆಗೊಳಿಸಿಬಿಟ್ಟರು.

ಈ ಅಧಿವೇಶನದ ಇನ್ನೊಂದು ವಿಶೇಷವೆಂದರೆ ಮೊದಲಲ್ಲಿ ತಮಗೊದಗಿದ ಸೋಲುಗಳಿಂದ ಭಯಪಟ್ಟು ಸರಕಾರದವರು ತಮ್ಮ ಮಸೂದೆಗಳನ್ನು ಕೊನೆ ವರೆಗೂ ಮಂಡಿಸಲೇ ಇಲ್ಲ.

ಕೋರಮ್ ಇದ್ದಿಲ್ಲ

ಚರ್ಚೆ ಸಾಯಂಕಾಲ ೫ ಗಂಟೆಯ ವರೆಗೆ ಸರಾಗ ನಡೆಯಿತು. ಆಗ ಕಾಂಗ್ರೆಸ ನಾಯಕ ಶ್ರೀ ಕೆ. ಹನುಮಂತಯ್ಯನವರು ಸಭೆಯಲ್ಲಿ ಕಾಂಗ್ರೆಸ್ ಪಕ್ಷ ಇಷ್ಟು ದೊಡ್ಡದಿದ್ದರೂ ಇಬ್ಬರಿಗೇ ಮಾತಾಡಲು ಅವಕಾಶ ಕೇಳಿದೆವು. ಅವರಿಗೆ ಕೂಡ ಅಧ್ಯಕ್ಷರು ಅವಕಾಶ ಕೊಡುತ್ತಿರುವದಿಲ್ಲೆಂದು ನಿಷೇಧಿಸಿ, ಅದರಿಂದ ತಾವು ಸಭಿಕರಾಗಿ ಭಾಗವಹಿಸದೆ ಪ್ರೇಕ್ಷಕರಂತೆ ಸುಮ್ಮನಿರುವೆವೆಂದರು. ಚರ್ಚೆಗೆ ಉತ್ತರ ಕೊಡಲು ಸುಂದರರಾಯರು ಎದ್ದು ನಿಂತಾಗ ಸಭೆ ಬಹಳ ವಿರಳವಾಗಿ ಬಿಟ್ಟಿತ್ತು. ಕಾಂಗ್ರೆಸ ಸದಸ್ಯ ಶ್ರೀ ಬಿ ಎನ್ ಗುಪ್ತರು ಕೋರಂ ಇಲ್ಲವೆಂದು ಆಕ್ಷೇಪಿಸಿದರು. ಇದೆಯೆಂದರು ದಿವಾಣ ಅಧ್ಯಕ್ಷರು. ಶ್ರೀ ಗುಪ್ತರ ಒತ್ತಾಯದಿಂದ ಎಣಿಸಿ ನೋಡಲಾಗಿ ಸಾಕಷ್ಟು ಸದಸ್ಯರು ಇದ್ದಿಲ್ಲ. ಸ್ವಲ್ಪ ಕಾಯೋಣವೆಂದರು ಅಧ್ಯಕ್ಷರು. ಆಗಲೇ ಶ್ರೀ ಗುಪ್ತರು ತಮ್ಮ ವಿಧಿಬಿಂದುವನ್ನು ಮುಂದೊತ್ತಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಸಭೆ ತುಂಬಿತು. ಶ್ರೀ ಸುಂದರರಾಯರ ಭಾಷಣ ಆರಂಭವಾಯಿತು. ಆಗ ಕಾಂಗ್ರೆಸ ನಾಯಕ ಶ್ರೀ ಹನುಮಂತಯ್ಯನವರು ಪುನಃ ವಿಧಿಬಿಂದುವನ್ನೆತ್ತಿ ಕೋರಂ ಇಲ್ಲವೆಂದು ಗೊತ್ತಾದ ಮೇಲೆಯೂ ಸಭೆಯನ್ನು ಮುಂದೆ ಹಾಕದೆ ಅಧ್ಯಕ್ಷರು ಸುಮ್ಮನಿದ್ದದ್ದರಿಂದ ಈಗ ನಡೆದಿರುವ ವ್ಯವಹಾರವೇ ಕ್ರಮಬಾಹಿರವಾದುದೆಂದು ವಾದಿಸಿದರು. ಅಧ್ಯಕ್ಷರು ಅದರ ನಿರ್ಣಯ ಮಾಡದೆ "ಈಗ ಕೋರಂ ಇದೆ" ಯೆಂದಿಷ್ಟೇ ಹೇಳಿ ಸಭೆ ಸಾಗಿಸಿದ್ದರಿಂದ ಕಾಂಗ್ರೆಸ ಸದಸ್ಯರು ಅಧ್ಯಕ್ಷರು ನಿಯಮಗಳನ್ನು ದುರ್ಲಕ್ಷಿಸಿದ್ದರ ನಿಷೇಧಾರ್ಥ ಸಭೆಯಿಂದ ಹೊರಬಿದ್ದು ಹೋದರು. ಕಾಂಗ್ರೆಸ್ಸಿಗರಲ್ಲಿ ಶ್ರೀ ಗುಪ್ತ ಮತ್ತು ಇನ್ನೊಬ್ಬರು ಮಾತ್ರ ಉಳಿದು ಶ್ರೀ ಸುಂದರರಾಯರು ಕೊಡುವ ಉತ್ತರ ನಿಯಮಬಾಹ್ಯವಾದುದೆಂದು ವಾದಿಸುತ್ತ ನಡುವೆ ಅಡಚಣೆಯೊಡ್ಡಿದ್ದರಿಂದ ಮೇಲೆ ಹೇಳಿದಂತೆ ಸಭೆ ಹುಳ್ಳ ಹುಳ್ಳನೆ ಕೊನೆಗಂಡಿತು.

ಆಹಾರ ಚರ್ಚೆ

ಚರ್ಚೆಯನ್ನು ಪ್ರಾರಂಭಿಸಿದ ಶ್ರೀ ವೆಂಕಟಪ್ಪನವರು (ಕಾಂ) ಸರಕಾರದ ಅಸಡ್ಡೆಯ ಧೋರಣವನ್ನು ಖಂಡಿಸಿದರು. ದಸರಾ ಅಧಿವೇಶನದಲ್ಲಿ ಬರಗಾಲದ ಭಯವಿಲ್ಲೆಂದು ಸಾರಿದ್ದ ಸರಕಾರದ ಭ್ರಮೆ ಈಗ ದೂರವಾಗಿದೆ. ಇದು ಸರಕಾರದ ದೂರಾಲೋಚನೆಯ ಅಭಾವದ ನಿದರ್ಶನ. ಇಲ್ಲದ ಆಹಾರವನ್ನೆಲ್ಲಿಂದ ದೊರಕಿಸೋಣೆಂದು ಹೊಣೆ ಹಾರಿಸಿಕೊಳ್ಳಬೇಡಿರಿ, ಹೊಣೆ ಹೊತ್ತ ಮೇಲೆ ಎಲ್ಲಿಂದಾದರೂ ದೊರಕಿಸಿ ಪೂರೈಸಿರೆಂದು ನಿಷ್ಠುರ ನುಡಿದರು.

ಶ್ರೀ ಭೂಪಾಲಂ ಅವರು ಶಿವಮೊಗ್ಗೆಯೇ ಆಹಾರ ಬೆಳೆಯುವ ಮುಖ್ಯ ಭಾಗವಾಗಿದ್ದರೂ ಆ ಜಿಲ್ಲೆಗೇ ಸರಕಾರ ಲಕ್ಷ್ಯ ಕೊಟ್ಟಿಲ್ಲವೆಂದು ದೂರಿದರು. ರೈತನಿಗೆ ಹೆಚ್ಚು ಬೆಳೆಯಲು ಉತ್ತೇಜನ ದೊರೆಯುವಂತೆ ಪಲ್ಲಕ್ಕೆ ಹತ್ತು ರೂಪಾಯಿಯಷ್ಟು ಹೆಚ್ಚು ಬೆಲೆ ಕೊಡಬೇಕೆಂದು ಅವರ ಪ್ರತಿಪಾದನೆಯಾಗಿತ್ತು. ಚಿನ್ನದ ಗಣಿಯ ಒಡೆಯರಿಗೆ ಲಕ್ಷಾಂತರ ಹಣ ಪರಿಹಾರವೆಂದು ಕೊಟ್ಟ ಸರಕಾರ ರೈತರಿಗೇಕೆ ಕೊಡಬಾರದೆಂದು ಕೇಳಿದರವರು.

ಶ್ರೀ. ಎಂ ಶಂಕರ ಲಿಂಗೇಗೌಡರು ಅಂಕೆ ಸಂಖ್ಯೆಗಳ ಬಲದಿಂದ ಕಳೆದ ವರ್ಷ ಸರಾಸರಿಯ ಪ್ರಮಾಣದಲ್ಲೇ ಪೀಕು ಬಂದಿದೆಯೆಂದು ಸಿದ್ಧ ಮಾಡಿ ತೋರಿಸಿ ಹೀಗಿದ್ದರೂ ಈ ಕೋಲಾಹಲವೇಕೆಂದು ಪ್ರಶ್ನಿಸಿದರು. ಒಕ್ಕಲತನ ಖಾತೆಯವರು ಪ್ರಯತ್ನಿಸಿದ್ದರೆ ಎಲ್ಲ ಸರಿ ಹೋಗುತಿತ್ತೆಂದು ಅವರ ಅಭಿಪ್ರಾಯವಿತ್ತು.

ಆಹಾರ ನಿರ್ದೇಶಕ ಸುಂದರರಾಯರ ಉತ್ತರ ದೂರನ್ನೆಲ್ಲ ಕೃತಿಯ ಮೇಲೆ ಹೊರಿಸಿದಂತಿತ್ತು. ೫೦ ವರ್ಷಗಳಲ್ಲಿ ಇಂಥ ಪರಿಸ್ಥಿತಿ ಬಂದಿಲ್ಲವೆಂದ ಅವರು ದೂರಿಕೊಂಡರು. ೧೯೪೫ ಅಕ್ಟೋಬರದಲ್ಲಿ ಧಾನ್ಯ ಸಂಗ್ರಹ ಸಾಕಷ್ಟಿದ್ದುದರಿಂದ (೮೬೫೬೦೫ ಪಲ್ಲ) ದಸರಾ ಅಧಿವೇಶನಗಳಲ್ಲಿ ನ್ಯಾಯವಾಗಿ ಕ್ಷಾಮ ಭಯವಿಲ್ಲೆಂದು ಸಾರಲಾಗಿತ್ತು. ಆದರೆ ಮೈಸೂರ ಸಂಸ್ಥಾನದ ಬೆಳೆಗೆ ಮುಖ್ಯ ಆಧಾರವಾಗಿರುವ ಮೃಗ ಪಂಚಕ ಹಸ್ತಾ ಪಂಚಕ ಮಳೆಗಳಲ್ಲಿ ಮೊದಲನೆಯದು ಸರಿಯಾಗಿ ಆಗದೆ ಎರಡನೆಯದು ಏನೂ ಆಗದೆ ಇದ್ದುದರಿಂದ ಆಕಸ್ಮಾತ್ತಾಗಿ ಕ್ಷಾಮ ಪರಿಸ್ಥಿತಿಯುಂಟಾಯಿತೆಂದು ಅವರು ಸಾಧಿಸಿದರು. ಲಂಚಗುಳಿತನ ಹಿಡಿಯಲು ಪೋಲೀಸರು ಶ್ರಮ ವಹಿಸಿ ವರ್ಷಕ್ಕೆ ೪-೫ ನೂರು ಪ್ರಕರಣಗಳನ್ನು ಬೆಳಕಿಗೆ ತರಲಾಗುತ್ತಿದೆ. ಮಾನ್ಯ ಸದಸ್ಯರೂ ನಿರ್ದಿಷ್ಟ ಪ್ರಕರಣಗಳನ್ನು ಸರಕಾರದ ಗಮನಕ್ಕೆ ತಂದು ಸಹಕರಿಸಬೇಕು, ಎಂದರವರು. ಪಲ್ಲಕ್ಕೆ ೧೦ ರೂಪಾಯಿ ಹೆಚ್ಚು ಕೊಟ್ಟರೆ ೨॥ ಕೋಟಿ ರೂಪಾಯಿ ವೆಚ್ಚ ಬರುವದೆಂದು ಭೂಪಾಲಂರ ಸೂಚನೆಗೆ ಉತ್ತರ ಬಂತು. ಈಗ ೧೫ ಲಕ್ಷ ಪರಿಹಾರ ಕೊಡಲಾಗುತ್ತಿದೆ. ಇದಕ್ಕಿಂತ ಹೆಚ್ಚೇನು ಮಾಡಲಾದೀತು ?

ಇಷ್ಟರಲ್ಲಿ ಕೋಲಾಹಲವಾದುದರಿಂದ ಸಭೆ ಅವಸರ ಅವಸರವಾಗಿ ಮುಗಿಸಲ್ಪಟ್ಟಿತು.



ಮುಂಬಯಿ ಶೇರ ಪೇಟೆ

ತಾ. ೧೯

ಈ ವಾರ ಪುನಃ ಶೇರಪೇಟೆಯಲ್ಲಿ ಟಾಟಾಪಾಲುಗಳಿಗೆ ಏರಿಕೆ ಕಂಡುಬಂತು. ನಡುಗಾಲ ಸರಕಾರದ ಸಾರಿಕೆಯಿಂದ ಪೇಟೆಯಲ್ಲಿ ಹುರುಪುಂಟಾಯಿತು. ಟಾಟಾ ಡೆಫರ್ಡ ಪಾಲುಗಳು ಒಂದು ನಿಟ್ಟಿನಲ್ಲಿ ಕಳೆದವಾರಕ್ಕಿಂತ ಸುಮಾರು ೮೫ ರೂ. ಹೆಚ್ಚಿಕೊಂಡು ೩೨೦೦ ಕ್ಕೆ ಮುಟ್ಟಿತ್ತು. ಇಂದು ಅದು ೩೧೭೮—೦—೦ ರಲ್ಲಿದೆ ಆದರೆ ಡಾಯಿಂಗ ಪಾಲುಗಳು ೨೬೧೭—೮—೦ ಕ್ಕೆ ಮುಟ್ಟಿದರೂ ೨೫೭೫—೦—೦ ಕಳೆದ ವಾರಕ್ಕಿಂತ ತಗ್ಗಿನಲ್ಲಿ ನಿಂತಿದೆ. ಇತರ ಜವಳಿ ಪಾಲುಗಳೂ ಅಷ್ಟು ಒಳಿತಾಗಿ ಸಾಗಲಿಲ್ಲ. ಕೋಹಿನೂರು ೯೫೯—೦— ಕ್ಕಿಳಿದಿದೆ. ಸ್ವದೇಶಿ ೮೭೧—೦—೦ ರ ವರೆಗೇರಿದ್ದುದು ೮೫೭ ಕ್ಕಿಳಿದಿದೆ ಗೋಕಾಕ ೩೯೩—೮—೦ ರ ವರೆಗೂ ಇಳಿದು ೪೦೫—೦—೦ ರ ವರೆಗೇರಿ ೩೯೬—೦—೦ ಕ್ಕಿಳಿಯಿತು. ಬೇಲಾಪುರ ೩೪೧—೦—೦ ಕ್ಕೆ ಸುಧಾರಿಸಿದೆ. ಸಿಂಧ್ಯಸ್ಟೀಮ ೫೯—೮—೦ ಕ್ಕೇರಿದೆ. ಅಸೋಸಿಯೇಟೆಡ್ ಸಿಮೆಂಟ್ಸ ೨೬೩—೦—೦ ಕ್ಕೇರಿದೆ.

ಸೆಂಟ್ರಲ ಬ್ಯಾಂಕು ರೂ. ೧೪೫—೪—೦ ಕ್ಕೆ ಹಿಂದಿನ ವಾರದ ಸ್ಥಿತಿಯಲ್ಲೆ ಇದೆ. ಇಂಪೀರಿಯಲ ಬ್ಯಾಂಕ ೩೦೬೦—೦—೦ ರ ವರೆಗೇರಿದ್ದು ೩೦೧೫—೦—೦ ಕ್ಕಿಳಿದಿದೆ. ರಿಝರ್ವ ಬ್ಯಾಂಕು ೧೭೧—೮—೦ ಕ್ಕೇರಿ ೧೭೧—೦—೦ ರಲ್ಲಿದೆ.

ಜಿ. ಪಿ. ನೋಟು ೧೦೪—೨—೦; ೩॥ ಸಾಲಪತ್ರ ೧೦೩—೧೦—೦; ಎರಡೂ ತುಸು ಏರಿವೆ.

ಚಿನ್ನ-ಬೆಳ್ಳಿ

ಈ ವಾರಾದಿಯಲ್ಲ ೧೦೬—೦—೦ ಕ್ಕೆ ತುಸು ಸುಧಾರಿಸಿದ್ದ ಚಿನ್ನ ಮತ್ತೆ ೧೦೫—೦—೦ ಕ್ಕಿಳಿದಿದೆ. ಬೆಳ್ಳಿ (ತಯಾರಿ) ೧೭೮—೦—೦ ರ ವರೆಗೂ ಏರಿದ್ದು ಹಿಂದೇಟುತಿಂದು ೧೭೫—೮—೦ ಕ್ಕಿಳಿಯಿತು. ವಾಯದಾ ಬೆಳ್ಳಿ ೧೭೫—೧೨—೦ ಸಾವರೀನ ೬೮—೪—೦

ಅರಳೆ

ಅರಳೀಪೇಟೆಯಲ್ಲಿ ಆಶಾದಾಯಕ ವಾತಾವರಣವಿದೆ. ೪೪೧—೦—೦ ರ ವರೆಗೂ ಕಳೆದ ವಾರಾಂತ್ಯದಲ್ಲಿ ಇಳಿದು ಹೋಗಿದ್ದ ಜುಲೈ ವಾಯಿದೆಗೆ ಕರಾಚಿಯಲ್ಲಿ ಬೆಲೆಗಳೇರಿದ್ದರಿಂದ ಬಲ ದೊರೆತು ೪೪೯—೧೨—೦ ರ ವರೆಗೂ ಹೋಗಿ ೪೪೯—೮—೦ ರಲ್ಲಿ ಇಂದು ಕೊನೆಗಂಡಿತು. ಸಪ್ಟೆಂಬರ ವಾಯಿದೆ ೪೬೧—೪—೦.

ಎಣ್ಣೆಕಾಳು

ಶೇಂಗಾ	೧೩೬—೦—೦
ಅಗಸಿ	೧೨೬—೨—೦
ಅಗಸಿ ಎಣ್ಣೆ	೧೮—೨—೦

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ ರೂ.		೧೪—೧೬
ಅರಿಸಿಣ ಹೇರು	,,	೮೦—೯೧
ಮೆಣಸಿನಕಾಯಿ ಹೇರು	,,	೧೮೦—೨೦೦
ಶೇಂಗಾ (ಖಂಡಿ)	,,	೧೭೭—೪—೦
ದೇಶಿ ತಂಬಾಕು ಹೇರು		೧೨೫-೨೦೦
ಪಂಢರಪುರಿ	"	೨೦೦—೨೭೫
ತಂಬಾಕು ಅಕೋಳ (ಹೇರು)		೨೫೦—೩೭೫

ಹುಬ್ಬಳ್ಳಿ ಪೇಟೆ

ಜಯವಂತ ಹತ್ತಿ	ನಂ. ೧	೨೯೦-೯೫
,,	ನಂ. ೨	೨೮೦-೨೮೫
,,	ನಂ. ೩	೨೭೫-೨೮೦
ಅಪಲಂಡ ಹತ್ತಿ		೨೬೦-೨೮೫
ಜಿನ		೨೧೦-೨೧೭
ಸಾಜಿನ		೨೧೦-೨೧೨
ಡಬಲರೋಲರ		೨೦೫-೨೧೦

ಬೆಂಗಳೂರು-ಮೈಸೂರು

ಪೋಲೀಸ ಖಾತೆಯ ಕೆಳ ದರ್ಜೆಯ ನೌಕರರ ಸಂಬಳವನ್ನು ಪುನರ್ವಿಮರ್ಶಿಸಬೇಕೆಂದು ಮೈಸೂರು ಸರಕಾರದವರು ಅಜ್ಞಾಪಿಸಿದ್ದು ಆ ಬಗ್ಗೆ ಸಿದ್ಧವಾದ ಯೋಜನೆಗೆ ೮,೩೭,೦೦೦ ರೂಪಾಯಿ ವೆಚ್ಚ ಬರುವದೆಂದು ತಿಳಿಯುತ್ತದೆ.

ಮೈಸೂರು ಸಂಸ್ಥಾನದ ವ್ಯವಸಾಯ ಮಂತ್ರಿ ಶ್ರೀ ಎಂ. ಎ. ಶ್ರೀನಿವಾಸನ್ನರು ನಿವೃತ್ತಿಪೂರ್ವ ರಜೆಯ ಮೇಲೆ ಹೋಗಲಿರುವದರಿಂದ ಆ ಸ್ಥಾನಕ್ಕೆ ಕಂದಾಯ ಕಮೀಶನರ ಶ್ರೀ ಎಂ. ಶೇಷಾದ್ರಿಯವರನ್ನು ನೇಮಿಸಲಾಗಿದೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರ ಆಮಂತ್ರಣದ ಮೇರೆಗೆ ತಾ. ೧೬ ಕ್ಕೆ ಕಾಂಗ್ರೆಸ್ ಪ್ರಮುಖರ ಸಭೆಯೊಂದು ಬೆಂಗಳೂರು ಕಾಂಗ್ರೆಸ ಭವನದಲ್ಲಿ ಸೇರಿತ್ತು. ಕಾಂಗ್ರೆಸ್ ಕಾರ್ಯ ಸಮಿತಿಯ ಸದ್ಯದ ಮತ್ತು ಹೊಸದಾಗಿ ಆರಿಸಿ ಬಂದಿರುವ ಸದಸ್ಯರೂ ಮುಂದಿನ ವರ್ಷದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವವರೂ ಶಾಸನಸಭೆಗಳ ಕಾಂಗ್ರೆಸ್ ನಾಯಕರೂ ಬಂದಿದ್ದರು. ಮುಂದಿನ ವರ್ಷದ ಅಧ್ಯಕ್ಷರ ಆಯ್ಕೆ ಒಮ್ಮತದಿಂದ ಅವಿರೋಧವಾಗಿ ಆಗುವಂತೆ ಮಾಡಬೇಕೆಂಬ ವಿಷಯ ಚರ್ಚೆಯಾಗಿ ಈಗ ಹುರಿಯಾಳುಗಳಾಗಿ ಸಭೆಯಲ್ಲಿ ಹಾಜರಿರುವವರೆಲ್ಲರೂ ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲೊಪ್ಪಿದರು. ಹೊಸ ನಾಮಪತ್ರಗಳನ್ನು ಕರೆಯಲಾಗುವದು ಮತ್ತು ಮುಂದಿನ ಕಾರ್ಯ ಸಮಿತಿ ಸಭೆಯಲ್ಲಿ (ತಾ. ೨೪) ಅಧ್ಯಕ್ಷತೆಗೆ ಯಾರನ್ನು ನಿಲ್ಲಿಸಬೇಕೆಂಬ ಬಗ್ಗೆ ತೀರ್ಮಾನವಾಗುವದು

ದಕ್ಷಿಣ ಕನ್ನಡ

ಸಂಕುಚಿತ ಜಾತೀಯತೆ, ಸಾಮಾಜಿಕ ಮತ್ತು ಆರ್ಥಿಕ ವೈಷಮ್ಯಗಳನ್ನು ದೂರೀಕರಿಸುವ ಉದ್ದೇಶದಿಂದ ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವ ದಕ್ಷಿಣ ಕನ್ನಡ ಯುವಜನ ಕಾಂಗ್ರೆಸ್ಸಿನ ಪರಿಷತ್ತೊಂದು ಜುಲೈ ತಿಂಗಳಲ್ಲಿ ಮಂಗಳೂರಲ್ಲಿ ಸೇರಲಿದೆಯೆಂದು ತಿಳಿಯುತ್ತದೆ. ಕಾಂಗ್ರೆಸ್ ಧ್ಯೇಯದಲ್ಲಿ ವಿಶ್ವಾಸವಿರುವ ಈ ತರುಣ ಸಂಸ್ಥೆಯಲ್ಲಿ ಯಾವದೇ ಬಗೆಯ ಜಾತೀಯ ಚಟುವಟಿಕೆಯಲ್ಲಿ ಭಾಗವಹಿಸದ ೧೮ ವರ್ಷಕ್ಕೆ ಮಿಕ್ಕಿದ ತರುಣ ತರುಣಿಯರಿಗೆ ಸದಸ್ಯರಾಗಲು ಅವಕಾಶವಿದೆ.

ದಕ್ಷಿಣ ಕನ್ನಡ ಮತ್ತು ಕೊಡಗು ಅಡಿಕೆ ಬೇಸಾಯಗಾರರ ಸಂಘದ ಮಹಾಸಭೆಯೊಂದು ತಾ. ೯ ಜೂನಕ್ಕೆ ಮಂಗಳೂರಲ್ಲಿ ಸೇರಿ ಸದಸ್ಯ ಸಂಖ್ಯೆಯನ್ನು ಭರದಿಂದ ಹೆಚ್ಚಿಸಬೇಕೆಂದು ನಿರ್ಣಯಿಸಿದ್ದಲ್ಲದೆ ಅಡಿಕೆ ತೋಟಗಾರರ ವಶದಲ್ಲಿ ಬೇಸಾಯಗಾರರಿಗೆ ಬೇಕಾದ ಆಹಾರ ಧಾನ್ಯದ ಸಂಗ್ರಹವನ್ನು ಇರಿಸಿಕೊಳ್ಳಲು ಸರಕಾರ ಅವಕಾಶ ಕೊಡಬೇಕೆಂದು ಮ.ಂತಾಗಿ ಗೊತ್ತುವಳಿಯಾದವು.

ವಿಷಯ-... ಸೀದಾ ಕ್ಷೇತ್ರಗಳಲ್ಲಿ ಹಾಗೂ ಸೀದಾ ಅನ್ವಯಿಸದ ಕ್ಷೇತ್ರಗಳಲ್ಲಿ ಬೆಲ್ಲದ ಹಂಚಿಕೆಯ ಮೂಲ ಪರಿಮಾಣ

ನಂ ಡಬ್ಲ್ಯು ಎ. ಅರ್. ಜಿ. ೮೨.
ಧಾರವಾಡ, ೧೮ನೇ ಜೂನ ೧೯೪೬

ಆಜ್ಞೆ

ಈ ಕಚೇರಿಯ ೧೧-೬-೪೬ನೇ ಆಜ್ಞೆ ನಂ. ಡಬ್ಲ್ಯು ಎ. ಅರ್. ಜಿ. ೮೨ನೇದ್ದರ ಕಲಮು ೪ (೧) ನ್ನನುಸರಿಸಿ, ಧಾರವಾಡ ಜಿಲ್ಹೆಯ ಮ್ಯಾಜಿಸ್ಟ್ರೇಟರು ಕೆಳಗಿನಂತೆ ವಿಧಿಸುತ್ತಾರೆ:-

೨೩ ನೇ ಜೂನ ೧೯೪೬ ರಿಂದ ಮುಂದೆ ಈ ಜಿಲ್ಹೆಯೊಳಗಿನ ಧಾರವಾಡ, ಗದಗ, ಹಾವೇರಿ, ಮತ್ತು ರಾಣೇಬೆನ್ನೂರ ಸೀದಾ ಪಟ್ಟಣಗಳಲ್ಲಿ ಮತ್ತು ಸೀದಾ ಅನ್ವಯಿಸದ ಕ್ಷೇತ್ರಗಳಲ್ಲಿ ಪ್ರತಿಯೊಬ್ಬ ವಯಸ್ಕನಿಗೆ ಬೆಲ್ಲದ ಸೀದಾದ ಪಾಕ್ಷಿಕ ಹಂಚಿಕೆಯ ಪರಿಮಾಣವು ಎರಡು ಯುನಿಟ್ಟುಗಳಾಗುತ್ತಿದ್ದು ಪ್ರತಿಯೊಂದು ಯುನಿಟ್ಟಿನ ಪ್ರಮಾಣವು ೪ ಔಂಸಗಳು.

ಹುಬ್ಬಳ್ಳಿ ಸೀದಾ ಪಟ್ಟಣದಲ್ಲಿ ಹಂಚಿಕೆಯ ಪರಿಮಾಣವು ಎರಡು ಯುನಿಟ್ಟುಗಳಾಗುವದು ಮತ್ತು ಸೀದಾ ಕಾರ್ಡಿನ ಮೇಲಿನ ಪ್ರತಿಯೊಂದು ಯುನಿಟ್ಟಿಗೆ ಪ್ರತಿಯೊಂದು ವಾರಕ್ಕೆ ದೊರೆಯತಕ್ಕ ಪರಿಮಾಣವು ೨ ಔಂಸಗಳಾಗುವದು.

ಆರುವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಮೇಲಿನ ಪ್ರಮಾಣದ ಅರ್ಧದಷ್ಟು ಅಂದರೆ ಒಂದು ಯುನಿಟ್ಟು ಕೊಡತಕ್ಕದ್ದು.

ಈ ಆಜ್ಞೆಯನ್ನು ಎಲ್ಲ ಅಧಿಕೃತ ಸೀದಾ ಅಂಗಡಿಗಳಿಗೆ ಮತ್ತು ಹಳ್ಳಿಯ ಹಂಚಿಕೆ ಅಂಗಡಿಗಳಿಗೆ ತಿಳಿಸತಕ್ಕದ್ದು ಹಾಗೂ ಅದಕ್ಕೆ ಯೋಗ್ಯ ಪ್ರಚಾರ ಕೊಡತಕ್ಕದ್ದು ಮತ್ತು ಅದರ ಅಮಲಬಜಾವಣೆಯನ್ನು ನೋಡಿಕೊಳ್ಳತಕ್ಕದ್ದು.

ವಿ. ಟಿ. ದೆಹೆಜಿಯಾ
ಜಿಲ್ಹಾ ಮ್ಯಾಜಿಸ್ಟ್ರೇಟ, ಧಾರವಾಡ

ಹುದುಗಲಾರದ ದುಃಖ

✲ ✲ ✲ ✲ ✲ ✲ ವಸಂತ ಕುರುಂದವಾಡ ✲ ✲ ✲ ✲ ✲ ✲

ಹುದುಗಲಾರದ ದುಃಖ ನಗೆಯಲ್ಲಿ ಹುದುಗಿರಿಸಿ, ... ಮಮತಾಜಳನೆ ಹುಗಿದು; ತಾಜಮಹಾಲನು ಕಟ್ಟೆ, ಆ ದುಃಖ ಹುದುಗಬಹುದೆ? ....

ನೆರೆಮನೆಯಿಂದ ದುಃಖಪೂರಿತ ರಾಗ ಅಲೆ ಅಲೆಯಾಗಿ ಕಿವಿಯ ತೆರೆಗೆ ಬಂದು ಹಾಯುತ್ತಿತ್ತು. ನಾನು ಆರಾಮ ಖುರ್ಚಿಯೊಂದರ ಮೇಲೆ ಹಾಗೆಯೇ ಒರಗಿದ್ದೆ. ರಾಗವು ಮತ್ತೂ ಒಮ್ಮೆ ಮೊರೆಯಿತು. "ಮಮತಾಜಳನೆ ಹುಗಿದು, ತಾಜಮಹಾಲನು ಕಟ್ಟೆ ಆ ದುಃಖ ಹುದುಗಬಹುದೇ?" ಅಹುದು ನಿಜ; ಎನ್ನಿಸಿತು. ನನಗೆ ತಿಳಿಯದಂತೆಯೇ ಬಿಸಿಬಿಸಿಯಾದ ಕಂಬನಿಗಳು ನನ್ನ ಕೈಯ ಮೇಲೆ ಉದುರಿದ್ದವು! ಹಾಗೆಯೇ 'ರಾಗ' ವಿಚಾರಕ್ಕೆ ತೊಡಗಿಸಿತು.

ಐದು ವರ್ಷಗಳ ಹಿಂದಿನ ಕಾಲಕ್ಕೆ ನನ್ನ ವಿಚಾರ ತಿರುಗಿತು— ಅಕ್ಕನ ಲಗ್ನದ ವಿಷಯವದು.

ಅಪ್ಪ ದಿನಾಲು ವರ ಶೋಧಿಸಿ ತರುವುದು. ಒಂದೂ ಬಗೆಹರಿಯದಂತಾಗುವುದು. ಮುಂತಾದ ನೂರಾರು ವಿಚಾರಗಳು.

ಕಡೆಗೆ ಅಕ್ಕನಿಗೆ ಹಳ್ಳಿಯ ವರನೊಬ್ಬನೊಡನೆ ಮದುವೆಯಾಯಿತು. ಮನೆ ತುಂಬಿಸುವ ಕಾಲಕ್ಕೆ ನಮಗೆಲ್ಲ ತಾಳಲಾರದ ವೇದನೆಯಾಗಿತ್ತು. ವಿಶೇಷವೆಂದರೆ, ಅಕ್ಕನಿಗೂ ಅಣ್ಣನಿಗೂ ಅಷ್ಟಕಷ್ಟೇ ಇದ್ದಿತಾದರೂ ಆ ಕಾಲಕ್ಕೆ "ಹೋಗಿ ಬರುತ್ತೇವೆ" ಎಂದು ಹೇಳಲೂ ಆಗದೇ ಬರಿಯ ಬಿಕ್ಕುತ್ತ "ಹೋಗಿ .... ಬರುತ್ತೇವೆ" ಎಂಬ ಶಬ್ದದಿಂದ ಮುಂದೆ ಹೇಳಲಾರದೇ ಕಣ್ಣೀರು ಸುರಿಸುತ್ತಾ ನಿಂತಿದ್ದನು.

ಮಾವನ ಮನೆಯಲ್ಲಿ ತನ್ನ ಅತ್ತೆ ಮಾವಂದರಿಗೆ ಒಂದು ದಿನವೂ ಅಕ್ಕ ಎದುರು ಹೋದವಳಲ್ಲ. ಯಾವಾಗಲೂ ಏನು ಅಂದರೂ ಬೈದರೂ ತಾಳಿಕೊಂಡು ಇರುತ್ತಿದ್ದಳು.

ಭಾವ ತುಂಬ ಒಳ್ಳೇಯವರು. ವಿಶಾಲವಾದ ಹೃದಯ. ಅತ್ತೆ ಮಾವಂದಿರ ಕಾಟವನ್ನು ಸ್ವಲ್ಪವೂ ಹಚ್ಚಿಕೊಳ್ಳದೆ ಆಕೆ ಇದ್ದುದಕ್ಕೆ ಪತಿಯೂ ಒಂದು ಕಾರಣವಾಗಿದ್ದರು.

ಬೇಸಿಗೆಯ ರಜೆಯಲ್ಲಿ ನಾವೆಲ್ಲರೂ ಅಲ್ಲಿ ವಸ್ತಿ ಹಾಕುವದು ವಾಡಿಕೆಯಾಗಿದ್ದಿತು. ನಾವು ಇದಕ್ಕೆ ತಪ್ಪಿದರೆ, ಭಾವ ಕರೆಯಲಿಕ್ಕೆಯೇ ಬಂದು ಬಿಡುಸವರು.

ನಮಗೂ ಅಲ್ಲಿ ಇರುವದು ಬಹಳ ಇಷ್ಟ. ಯಾಕಂದರೆ, ಅದು ಹಳ್ಳಿ; ವರ್ಷವೂ ಶಹರದ ಗಡಿಬಿಡಿ, ಯಾವಾಗಲೂ ಮೋಟಾರಿನ ಶಬ್ದ, ಜನರ ಗಲಾಟೆ, ಇವುಗಳನ್ನು ತಪ್ಪಿಸಿ ಸ್ವಲ್ಪ ದಿನವಾದರೂ ಶಾಂತಿಯನ್ನು ದೊರಕಿಸಬೇಕೆಂದು ಮನಸ್ಸು ಹಾತೊರೆಯುತ್ತಿತ್ತು. ಇಷ್ಟಲ್ಲದೆ ಅಲ್ಲಿಯ ಬೇಸಿಗೆಯ ಸಂಜೆ ಮುಂಜಾವುಗಳು ಬಲು ರಮಣೀಯವಾದವುಗಳು. ಇವುಗಳೊಡನೆ ಭಾವನೊಡನೆ ಅಕ್ಕನ ಜತೆಗೆ ಇರುವ ಹಂಬಲು ಬೇರೆ.

ಭಾವ ಹಳ್ಳಿಯಲ್ಲಿದ್ದರೂ ಕಗ್ಗನಲ್ಲ. ಮೆಟ್ರಿಕ್ ವರೆಗೂ ಅವನ ಅಭ್ಯಾಸವಾಗಿತ್ತು. ಮುಂದೆ ಆತನ ತಾಯಿ ತೀರಿಕೊಂಡಳು. ಅದ್ದರಿಂದ ಅವನು ತನ್ನ ಅಭ್ಯಾಸವನ್ನು ಅಷ್ಟಕ್ಕೇ ನಿಲ್ಲಿಸಬೇಕಾಯಿತು. ಮುಂದೆ ಕೂಡ ಅವನಿಗೆ ಅವಕಾಶವಿತ್ತು. ಆದರೆ, ಅವನ ಮಲತಾಯಿ ಗಂಡನ ಕಿವಿಯೂದಿದುದರಿಂದ ಅಷ್ಟಕ್ಕೇ ಕಲಿಯುವದು ನಿಂತಿತು. ಶಹರದಲ್ಲಿ ಭಾವ ಕೆಲಸ ಹಿಡಿಯಬಹುದಿತ್ತು. ಆದರೆ, ಅವನಿಗೆ ಯಾವುದಕ್ಕೂ ಕೊರತೆಯಿರಲಿಲ್ಲ. ಅದ್ದರಿಂದಲೇ ಅವನು ಸ್ವತಃ ಕಮತ ಸಾಗಿಸಲು ತೊಡಗಿದ.

ನಾವು ದಿನಾಲು ಸಂಜೆಯಾದೊಡನೆ ನಮಗೆ ನೀರು ಹೊರುವ ಅಭ್ಯಾಸವಿಲ್ಲದಿದ್ದರೂ ಭಾವನೊಡನೆ ಕೊಡ ತೆಗೆದುಕೊಂಡು ಹಳ್ಳದಲ್ಲಿಯ ವರ್ತಿಯೆಡೆಗೆ ನಡೆಯುತಿದ್ದೆವು — ಅಲ್ಲಿ ಸಿಹಿ ನೀರಿನ ಬಾವಿ ಇರಲಿಲ್ಲವೆಂತಲ್ಲ; ಆದರೆ ಅವು ಬೇಸಿಗೆಯಲ್ಲಿ ಬತ್ತಿ ಹೋಗುತ್ತಿದ್ದವು.

ನೀವು ವರ್ತಿ ಎಂದರೆ ಏನೆಂದು ಕೇಳಬಹುದು. ವರ್ತಿ ಎಂದರೆ ಹಳ್ಳದಲ್ಲಿ ನೀರು ಬೇಸಿಗೆಯಲ್ಲಿ ಬತ್ತಿದಾಗ ಕುಡಿಯುವ ನೀರಿಗಾಗಿ ಸಣ್ಣ ಸಣ್ಣ ಗುಂಡಿಗಳನ್ನು ತೋಡುತ್ತಾರೆ.

ವರ್ತಿಯಲ್ಲಿ ನಾವು ಎಲ್ಲರೂ ನಮ್ಮ ತೆಂಗಿನ ಚಿಪ್ಪಿನಿಂದ ನೀರು ತುಂಬಿಸುತ್ತಿದ್ದೆವು. ಹಾಗೆಯೇ ನಾವು ಎಷ್ಟು ಹೊತ್ತಿನವರೆಗೆ ಕೂಡ್ರುತ್ತಿದ್ದೆವೊ ತಿಳಿಯದು! ಕುಂಕುಮ ಬಣ್ಣದ ಮುಗಿಲನ್ನು ನೋಡುತ್ತ ವೇಳೆ ಎಷ್ಟು ಹೋಗುತ್ತಿತ್ತೊ! ಭರಮ ಮನೆಯಾಳು ಬಂದು ಎಚ್ಚರಿಕೆ ಕೊಟ್ಟಾಗಲೇ ನಮಗೆ ಎಚ್ಚರ!

ಒಂದೊಂದು ಸಂಜೆ ನಾವು ನೆರೆಯೂರಿಗೊ ಊರ ಹೊರಗೊ ಅಡ್ಡಾಡಿ ಬರುತ್ತಿದ್ದೆವು. ಆಗ ಭಾವ ತಮ್ಮ ಊರಿನ ಸುದ್ದಿ, ಸುಖಗಳನ್ನು ಹೇಳುತ್ತಿದ್ದ. ಒಮ್ಮೊಮ್ಮೆ ರಾಜಕೀಯ ಕಡೆಗೂ ಸುದ್ದಿ ಹೊರಳುತ್ತಿತ್ತು. ಭಾವನಲ್ಲಿದ್ದ ಸಾಹಿತ್ಯ ಅಭಿರುಚಿ ಸ್ವಲ್ಪವಲ್ಲ. ನಾವು ಯಾವ ವಿಷಯವನ್ನೆತ್ತಿದರೂ ಆವನು ಸದಾ ಸಿದ್ಧನಾಗಿಯೇ ಅವೆಲ್ಲಕ್ಕೂ ಸರಿಯಾದ ವಿಷಯ ಜೋಡಿಸುತ್ತಿದ್ದ.

ನಾವು ಮುಸುಕು ಸಂಜೆಯಾಗುತ್ತಲೂ ಹಳ್ಳಿಯೆಡೆಗೆ ಕಾಲು ಹಾಕುತ್ತಿದ್ದೆವು. ಹಳ್ಳಿಯಲ್ಲಿ ಎಲ್ಲೆಲ್ಲೂ ಬೀಸುಕಲ್ಲಿನ ರಾಗ. ಅದರ ಜತೆಗೆ ಹಳ್ಳಿಯ ಹೆಣ್ಣುಗಳ ಇಂಪಾದ 'ಜನಪದ' ಸ್ವರ; ಅವರ ಜೀವನವನ್ನು ನುಗ್ಗಿ, ಸುಖದುಃಖಗಳನ್ನು ಎಳೆದು ಹೊರಗೆ ತರುತ್ತಿತ್ತು.

ನನಗಾಗ ಒಮ್ಮೊಮ್ಮೆ ನಿಟ್ಟುಸಿರು, ಒಮ್ಮೊಮ್ಮೆ ದುಃಖ; ಸುಖಗಳ ಅನುಭವವಾಗುತ್ತಿತ್ತು.

ಮನೆ ಸೇರಿದಾಗ ಅಕ್ಕ ಸವಿಯಾದ ಅಡಿಗೆ ಮಾಡಿರುತ್ತಿದ್ದಳು. ಅದು ನನಗೆ ಬಳಲಿಕೆಯಿಂದ ಇನ್ನೂ ಹೆಚ್ಚಾಗಿ ರುಚಿಸುತ್ತಿತ್ತು.

ಮಲಗುವಾಗಲೂ ಹರಟೆ, ಕತೆಯೊಂದಿಗೆ ನಿದ್ದೆ ಬರುತ್ತಿತ್ತು.

೦ ೦ ೦

ನಮ್ಮಲ್ಲಿಯೇ ಈಸಾರಿ ಅಕ್ಕ ಬಂದಿದ್ದಳು. ಆಕೆಯ ಸೀಮಂತವೂ ಇಲ್ಲಿಯೇ ಆಯಿತು. ಅಕ್ಕನ ಚೊಚ್ಚಿಲ ಬಸಿರದು.

ಭಾವ ನೆನೆಸುತ್ತಿದ್ದ ಆ ಒಂದು ದಿನವೂ ಬಂತು. ಅಕ್ಕ ಬಹಳ ಹೊರಳಾಡುತ್ತಿದ್ದಳು ಹೊಟ್ಟೆ ನೋವೆಂದು. 'ನರ್ಸ'ನ್ನು ಕರೆಸಿದ್ದಾಯಿತು. ಸ್ವಲ್ಪ ಹೊತ್ತಿನಲ್ಲಿಯೇ ಅವ್ವ ಬಂದು ಭಾವನ ಜನಿವಾರ ಬೇಡಿದಳು. ಭಾವ ಕೇಳಿದ 'ಗಂಡೋ ಹೆಣ್ಣೋ?' ಎಂದು. ಅವ್ವ ಏನನ್ನೂ ಹೇಳದೆ ಜನಿವಾರ ತೆಗೆದುಕೊಂಡು ಹೋಗಿಬಿಟ್ಟಳು.

ನಂತರ ತುಸು ವೇಳೆಗೆ ನನ್ನ ತಂಗಿ 'ಪೇಢೇ ಕೊಡು ಭಾವಾ' ಎಂದಳು. ಆಗ ತಿಳಿದು ಬಂತು ಗಂಡು ಎಂದು. ಭಾವನಿಗೆ ನಾನೂ ಅದೇ ಪ್ರಶ್ನೆ ಕೇಳಿದೆ. ಭಾವನಾದರೂ ಹಿಂದು ಮುಂದು ನೋಡಲಿಲ್ಲ. ಅಂಗಡಿಗೆ ಹೊರಟೇ ಬಿಟ್ಟ. ಸ್ವಲ್ಪ ಹೊತ್ತಿನಲ್ಲಿಯೇ ನಮ್ಮ ಕೈಯಲ್ಲೆಲ್ಲ ಪೇಢೆ ಉಂಡೆಗಳು ಕಾಣಿಸಿಕೊಂಡವು.

೦ ೦ ೦

ಮೂರು ವರುಷಗಳ ವರೆಗೂ ನಾವು ಭಾವನಲ್ಲಿಗೆ ಹೋಗಿರಲಿಲ್ಲ. ನಾಲ್ಕನೆಯ ವರುಷ ಮತ್ತೆ ಹೋಗಬೇಕಾಗಿ ಬಂತು. ಈ ಸಾರಿ ಭಾವ ಓಲೆ ಹಾಕಲೇ ಇಲ್ಲ; ಕರೆಯಲು ಬಂದೇ ಬಿಟ್ಟ. ನಮ್ಮ ಗಂಟುಮೂಟೆಗಳನ್ನು ಕಟ್ಟಿಕೊಂಡೆವು. ನಾನು ನನ್ನ ಅರಿವೆಗಳನ್ನು ಆಗಸನಿಂದ ತಂದೆ, ಆಯಿತು ಮರುದಿವಸವೇ ಗಾಡಿ ಹತ್ತಿದೆವು ಗಾಡಿ, ಮೋಟರು ಯಾವುದೂ ಭಾವನೂರಿನ ವರೆಗೂ ಇಲ್ಲ. ಅದ್ದರಿಂದ ನಾವು '....ಳ' ಸ್ಟೇಶನ್ನಿಗೆ ಇಳಿದೆವು.

ಅಲ್ಲಿಯೇ ಮಧ್ಯಾಹ್ನದ ಊಟ ಮುಗಿಸಿದೆವು. ಭಾವನ ಹೇಳಿಕೆಯಂತೆ ಭರಮ ಚಕ್ಕಡಿ ತೆಗೆದುಕೊಂಡು ಬಂದಿದ್ದ. ಭರಮ 'ಹಲ್ಯಾ' ಎಂದ. ಚಕ್ಕಡಿ ನಾಗಾಲೋಟದಿಂದ ಓಡತೊಡಗಿತು. ನಮಗೆ ಧಡಕಿಯಿಂದ ಒಬ್ಬರಿಗೊಬ್ಬರು ತಿಕ್ಕಾಟ ಮುಕ್ಕಾಟಗಳಾಗುತ್ತಿತ್ತು. ಒಬ್ಬರಿಗೊಬ್ಬರ ತಲೆಗೆ ಢಿಕ್ಕಿ ಕೊಡುತ್ತಿತ್ತು.

ಬಿಸಿಲು ಉಗ್ರವಾಗಿತ್ತಾಗ. ಹಕ್ಕಿಗಳ 'ಕಿಲಿಬಿಲಿ'ಯಿಂದ ಸ್ಥಳ ಶಾಂತವಾಗಿದ್ದರೂ ಎಲ್ಲೊ ಗಿಡಗಳ ಮೇಲೆ ಕಾಗೆ, ಗೊರವಂಕಗಳು ಗೂಡಿನಿಂದಲೋ ಟೊಂಗೆಗಳಲ್ಲಿ ಕುಳಿತೋ, ತಮ್ಮ ಮಧ್ಯಾಹ್ನ ರಾಗವನ್ನೆತ್ತಿದ್ದವು.

ಊರು ಮುಟ್ಟಿದಾಗ ಒಬ್ಬೊಬ್ಬರೇ ಊಟ ಮುಗಿಸಿ ಹೊಟ್ಟೆಯ ಮೇಲೆ ಕೈಯಾಡಿಸುತ್ತ ಹೊರ ಜಗಲಿಗೆ ಬರುತ್ತಿದ್ದರು. ಕೆಲವರು ಚಕ್ಕಡಿ ಯಾರದೋ ಎಂದು ನಿಟ್ಟಿಸುತ್ತಲೇ ಇದ್ದರು.

ನಾನೇ ಮೊದಲು ಚಕ್ಕಡಿಯಿಂದ ಇಳಿದೆ. ಸಾಮಾನೆತ್ತಲು ಕೈಯಿಕ್ಕಿದೆ. ಆದರೆ ಭರಮ ಅದಕ್ಕೆ ಬಿಡದೇ ತಾನೇ ಗಂಟುಮೂಟೆ ಒಳಗಿರಿಸಿದ.

ಎತ್ತುಗಳು ಹಕ್ಕಿಯೊಳಕ್ಕೆ ಕೊರಳಗಂಟೆ ಬಾರಿಸುತ್ತ ಹೊಕ್ಕವು. ಗಂಟೆಯ ಸದ್ದು ಕೇಳಿದೊಡನೆ ಮಗುವೊಂದು "ಅಪ್ಪ ಬಂದಾ" ಎಂದು ತೊದಲಿಸುತ್ತ ಪುಟಪುಟು ಹೆಜ್ಜೆಯಿಟ್ಟು ಒಳಗೋಡಿತು.

ಅಕ್ಕ ಇದನ್ನು ಕೇಳಿ ಹೊರಗೆ ಬಂದಳು "ಕೈಕಾಲು ತೊಳೆಯಿರಿ. ವಾಸೂ ಎಷ್ಟು ಸೊರಗಿಯೋ?" ಎಂದಳು. ನಾನು 'ಎಲ್ಲಿ! ಸೊರಗೇನೇss" ಎಂದೆನ್ನುತ್ತ ಕಾಲು ತೊಳೆದು, ಅಡಿಗೆ ಮನೆ ಹೊಕ್ಕೆ. ನಮ್ಮ ತಮ್ಮ ಶಿವು ಕೂಡ ಕಾಲು ತೊಳೆದು ಮಣೆಯ ಮೇಲೆ ಕುಳಿತ.

ನಮ್ಮ ಊಟ ಮುಗಿಯಿತು. ಎಲ್ಲರೂ ಶಾಂತರಾದೆವು. "ಭಾವ, ಅಜ್ಜನೆಲ್ಲಿ?" ಎಂದೆ ಭಾವ "ಎಲ್ಲೋ ಹೋಗಿರಬೇಕು" ಎಂದ ಚಿಕ್ಕಮ್ಮನೂ ಇರಲಿಲ್ಲ ಮನೆಯಲ್ಲಿ.

ನಾವು ಹಾಗೆಯೇ ಮಾತನಾಡುತ್ತ ಕುಳಿತುಕೊಂಡೆವು. ಮಾತಿಗೆ ಮಾತು ಬೆಳೆದು ಅದು ಹಿಂದಿನ ಎಂದರೆ ಭಾವನ ಲಗ್ನದ ಸುದ್ದಿಗೆ ಬಂತು. ಭಾವ ಅಕ್ಕನಿಗೆ ಹೇಳಿದ "ನಿನಗಿಂತ ಮೊದಲು ಈ ಊರೊಳಗೆ ಇದ್ದಾಳಲ್ಲ 'ರಿಂದಿ' ಅವಳ ತೋರಿಸಿದ್ರು........" ಎಂದು ಮುಂತಾಗಿ ತನಗೆ ತೋರಿಸಿದ ಎಷ್ಟೊ ಕನ್ಯಾಗಳ, ಅವರ ಮನೆತನ, ತಾನು ನಿರಾಕರಿಸಿದ್ದು, ಮುಂತಾದ ಎಲ್ಲ ವಿಷಯ ಹೇಳುತ್ತ 'ರಿಂದಿ'ಗೆ ಬಂದು ಹತ್ತಿದ್ದ. ಈಕೆಯ ಗುಣ ವಿಮರ್ಶೆಯೂ ಆಯಿತು. ಭಾವನ ಚಿಕ್ಕಮ್ಮನ ಸಂಬಂಧಿಕಳಂತೆ ಈ ರಿಂದಿ. ಅದಕ್ಕಾಗಿ ಅದೆಷ್ಟು ಸಾರಿಯೋ ಚಿಕ್ಕಮ್ಮ ಭಾವನಿಗೆ ಒತ್ತಾಯಪಡಿಸಿದ್ದಳಂತೆ; ಒಬ್ಬನೇ ಕುಳಿತಾಗ ಚಹಾ ಕೊಡಲೊ ಏನೋ ಎಂಬಂತೆ ಇವನ ಕೋಣೆಗೆ ಕಳುಹಿದ್ದಳಂತೆ; ಆದರೆ ಇವೆಲ್ಲಕ್ಕೂ ಭಾವ ಯೋಗ್ಯ ಉಪಾಯವನ್ನೇ ಮಾಡಿದನಂತೆ-ರಿಂದಿ ಕೋಣೆಯೊಳಕ್ಕೆ ಬಂದೊಡನೆಯೇ ಅಲ್ಲಿಯೇ ಇಟ್ಟು ಬಿಡು ಎಂದಿಷ್ಟೇ ಹೇಳಿ ಹೊರಗೆ ಬಂದು ನಿಲ್ಲುತ್ತಿದ್ದನಂತೆ.

ಇದಕ್ಕಾಗಿಯೇ ಭಾವನ ಮೇಲೂ ಅಕ್ಕನ ಮೇಲೂ ಚಿಕ್ಕಮ್ಮ ವಿಷ ಕಾರುತ್ತಿದ್ದಳು ಎಂಬುದು ನನಗೆ ಅಷ್ಟೆಲ್ಲ ಹೇಳಿದ ಮೇಲೆ ಹೊಳೆಯಿತು.

"ನಾವೆಲ್ಲ ಇಲ್ಲಿಗೆ ಬರುವುದು ಹಾಗಾದರೆ ಅಜ್ಜ ಚಿಕ್ಕಮ್ಮರಿಗೆ ಇಷ್ಟವಿಲ್ಲವೆಂದಾಯಿತಲ್ಲ!" ಎಂದೆ ನಾನು.

"ಇಲ್ಲ; ಎಳಷ್ಟೂ ಇಲ್ಲ." ಎಂದಳು ಅಕ್ಕ ಭಾವನೂ ದನಿಗೂಡಿಸಿದ.

೦ ೦ ೦ ೦ ೦

ಅಕ್ಕ ಈ ಸಾರಿ ಮತ್ತೆ ಬಸರಿ ಎಂದು ಭಾವ ಪತ್ರ ಬರೆದಿದ್ದ. ಮತ್ತು ಮನೆಯಲ್ಲಿ ಯಾರೂ ಕೆಲಸ ನೋಡಿಕೊಳ್ಳಲು ಇಲ್ಲವೆಂದೂ ಅದಕ್ಕಾಗಿ ಪತ್ರ ಕಂಡೊಡನೆ ಅವ್ವನನ್ನೊಡಗೊಂಡು ಎಲ್ಲರೂ ಬರಬೇಕೆಂದಿದ್ದಿತು.

ನಾನು, ಅವ್ವ, ತಮ್ಮ ಶಿವೂ ಎಲ್ಲರೂ ಒಮ್ಮೆಲೆ ಊಟ ಮುಗಿಸಿ ರೈಲು ನಿಲ್ದಾಣಕ್ಕೆ ನಡೆದೆವು. ಅಪ್ಪನಿಗೆ "ಹೋಗಿ ಬರುತ್ತೇವೆ" ಎಂದು ಹೇಳಿ ಗಾಡಿ ಹತ್ತಿದೆವು. ಗಾಡಿ ನಿಧಾನವಾಗಿ ಹೊರಟು ಮುಂದೆ ಹೋದಂತೆ, ವೇಗ ಹೆಚ್ಚಿತು. ಗಾಡಿಯೊಡನೆ ನನ್ನ ಮನಸ್ಸು ಮುನ್ನೂರು ಮೈಲು ಓಡುತ್ತಿತ್ತು!

"....ಳ" ಸ್ಟೇಶನ್ ಬಂತು. ಇಳಿದೆವು. ಚಕ್ಕಡಿ ಹತ್ತಿದೆವು. ಇಷ್ಟು ವೇಳೆಯ ವರೆಗೂ ನೂರು ಮೈಲು ವೇಗದಲ್ಲಿದ್ದೆವು. ಈ ಚಕ್ಕಡಿಯ ನಿಧಾನ ನಡೆ, ಅದರ "ಧಡಕ್"ಧಡಕ್" ಶಬ್ದ; ನನ್ನ ಮುನ್ನೂರು ಮೈಲು ಓಡುವ ಮನಸ್ಸನ್ನ ತಡೆದು ನಿಲ್ಲಿಸಲಿಲ್ಲ! "ಧಡಕ್ ಧಡಕ್" ಎಂದು ಅದ್ದು ಹಾಯಲಿಲ್ಲ!!

ಗಂಟು ಇಳುಹಿ ಮನೆ ಹೊಕ್ಕೆವು. ನೋಡಿದೆ; ಮನೆ ಸ್ವಲ್ಪ ನಿಶ್ಶಬ್ದವಾಗಿತ್ತು. ಮಗು. ಎಲ್ಲೊ ಹೋಗಿರಬೇಕು ಎಂದುಕೊಂಡೆ. "ಅಕ್ಕಾ" ಎಂದು ಕೂಗಿದೆ "ಯಾಕೋ ವಾಸು?" ಎಂದು ಕೋಣೆಯಿಂದ ಧ್ವನಿ ಬಂತು. ನನಗೆ ಅಕ್ಕ ಹೆತ್ತಿದ್ದಾಳೆನಿಸಿತು.

ಅಂದು ಕಳೆಯಿತು. ಮರು ದಿನ ಮಧ್ಯಾಹ್ನ ಅಕ್ಕನ ಹತ್ತಿರವೇ ಕುಳಿತಿದ್ದೆ. ಮಗು ತನ್ನ ಪುಟ್ಟ ಕೈಕಾಲುಗಳನ್ನು ಅಲ್ಲಾಡಿಸುತ್ತಲೂ ಕರಿಯ ಕಣ್ಣುಗಳನ್ನು ಚಲಿಸುತ್ತಲೂ ಇತ್ತು. "ಎಷ್ಟು ದಿನವಾಯಿತು ಅಕ್ಕ?" ಎಂದೆ. "ಹತ್ತು ದಿನ ಹಾದಿ ಕಾಯ್ದರೂ ಒಬ್ಬರೂ ಬರಲಿಲ್ಲ. ಇವರ್ಕ ಮಾಡಿದ್ರು; ಇಷ್ಟು ಅಗ್ತದs ಅಂತ ಗೊತ್ತಿತ್ತು; ಸುಮ್ನ ನಮ್ಮೂರಿಗೆ ನಡೀರಿ, ಅವರೇನು ಹೇಳತಾರs; ಅಂತ ಬಡಕೊಂಡೆ. ಕೇಳಬೇಕಲ್ಲಾ?.... ಸುಮ್ನ ಏನು ಅವರಿಗೆ ಅನ್ನೋದು ಮುಖ್ಯ ನನ್ನ ದುರ್ದೈವ ಎಂದು ನಿಟ್ಟುಸಿರು ಬಿಟ್ಟಳು.

ಸ್ವಲ್ಪ ಹೊತ್ತಿನ ಮೇಲೆ ಅಕ್ಕ ಮಲಗಿಕೊಂಡಲ್ಲೇ ಮೈ, ಕೈ ಸೆಟೆಸಹತ್ತಿದಳು. ಹಾಗೆಯೇ ನಾಲಿಗೆಯನ್ನು ಹೊರಗೆ ಚಾಚಿ ಕಣ್ಣುಗಳನ್ನು ದೊಡ್ಡವು ಮಾಡಿ, ದುರುಗುಟ್ಟಿ ನೋಡುತ್ತ ವಿಕಾರವಾಗಿ ಕೂಗತೊಡಗಿದಳು. ಇದೇನು ಗೃಹಚಾರ ಎಂದು ನಾನು "ಹೀಗೇಕೆ ಅಕ್ಕ?" ಎಂದೆ. ಆಕೆ ಮಾತನ್ನೇ ಆಡಲಿಲ್ಲ. ತನ್ನದೇ ಠೀವಿಯಿಂದ ಮತ್ತೆ ಕೂಗಿದಳು. ನಾನು ಗಾಬರಿಯಿಂದ ಒಳಗೆ ಬಂದು ಅವ್ವನಿಗೆ ಹೇಳಿದೆ. ಭಾವನೂ ಕೇಳಿದ. ಎಲ್ಲರೂ ನಡುಗಿದರು.

ಕೋಣೆಯಲ್ಲಿ ನಾನು ಭಾವ ಅವ್ವ ಬಂದಾಗ ಅಕ್ಕ ಎದ್ದು ಕುಳಿತಿದ್ದಳು. ನಾಲಿಗೆಯನ್ನು ಹಿರಿದು; ದೊಡ್ಡದಾಗಿ ಕಣ್ಣು ತೆರೆದು.... ಅದೇ ಠೀವಿ ಮಹಾಕಾಳಿಯಂತೆ, ದುರ್ಗಿಯಂತೆ ಕಂಡಳಾಗ ಅಕ್ಕ! ಭಾವ ಇಷ್ಟು ಗಟ್ಟಿಗರು ಧೈರ್ಯಸ್ಥರಾದರೂ ಹಣೆಯ ಮೇಲೆ ಬೆವರು ಕಾಣಿಸಿಕೊಂಡಿತು ಅದನ್ನು ನೋಡಿ.

"ದೆವ್ವ ಬಡಿದಿದೆ." ಎಂದರು. ಮೊಚ್ಚೆ, ಕೆರಗಳಿಂದ ಹೊಡೆಯಲು ಹೋದರು ಅವರೆಲ್ಲ. ನನಗೆ ನೋಡುವುದಾಗಲಿಲ್ಲ.

"ನೀ ಯಾರು ಹೇಳಿತೀಯೋ ಹೊಡೀಲೋ?" ಎಂದು ಭಾವ ಗದರಿಸಿದ. ಅದರೇನು? "ನನ್ನ ಹೆಸರು ನಿಮಗೆ ತಿಳಿಯದೇ" ಎಂದೇ ಆಕೆ ಮರು ಪ್ರಶ್ನೆ ಕೇಳಿದಳು; ಅಂತಹ ಅರಿವಿಲ್ಲದಿದ್ದಾಗ ಕೂಡ!!

ಅಂದು ಯಾರಿಗೂ ಊಟವೇ ಹೋಗಲಿಲ್ಲ. ಊಟದ ಕಾಟ ತೀರಿಸಿದ ನಂತರ ಭಾವ "....ಳ" ಊರಿಗೆ ಆಳು ಕೊಟ್ಟು ಕಳುಹಿಸಿದ.

ಸಂಜೆಗೆ "....ಳ" ಊರಿನಿಂದ ಡಾಕ್ಟರು ಬಂದರು. "ವಿಷಮಜ್ವರ, ಸನ್ನಿ ಅದು" ಎಂದು ಚುಚ್ಚು ಮದ್ದೊಂದನ್ನು ಕೊಟ್ಟು ಹೊರಟು ಹೋದರು.

"ಯೋಗ್ಯ ಉಪಚಾರವಿಲ್ಲದ್ದರಿಂದ ಶೀತವಾಗಿ ಜ್ವರ ಬಂದಿದೆ. ನಾನೇಕೆ ಬೇಗನೆ ಬರಲಿಲ್ಲವೋ?" ಎಂದು ಅವ್ವ ಗೋಳಾಡಿದಳು.


ಸಂಜೆಯಾಯಿತು. ನಿನ್ನೆಯೇ '....ಳ' ಊರಿನಿಂದ ತಂತಿ ಕೊಟ್ಟಿದ್ದಿತು ಅಪ್ಪನಿಗೆ. ಅವನೂ ಸಂಜೆಗೆ ಬಂದು ಮುಟ್ಟಿದ.

ದೂರ ದೂರದಿಂದ ಕತ್ತಲೆಯು ಕವಿದು ಬಂತು. ಜಗುಲಿಯಲ್ಲಿ ಚಿಮಣಿ ತನ್ನ ಮುಂದವಾದ ಮಂಕು ಬೆಳಕನ್ನು ಕೆಡಹಿತು.

ನಾನೂ ಅವ್ವನೂ ಅಕ್ಕನ ಹೊರಸಿನ ಬಳಿಯಲ್ಲಿಯೇ ಕುಳಿತಿದ್ದೆವು. ಅಕ್ಕ ಈಗ ಕಣ್ಣು ತೆರೆದಿದ್ದಳು. ಕಣ್ಣಿಂದ ಹನಿಗಳನ್ನುದುರಿಸಿ ನಮ್ಮ ಕಡೆಗೆ ದೀರ್ಘ ಶೂನ್ಯದೃಷ್ಟಿಯನ್ನೊಮ್ಮೆ ಬೀರಿದಳು. "ಯಾಕ ಅಳತೀ ಅಕ್ಕ?" ನಾನು ಉದ್ವೇಗದಿಂದಲೇ ಕೇಳಿದೆ. ಆಕೆಗೆ ಮಾತನ್ನು ಆಡಲು ಬರಲೇ ಇಲ್ಲ.

ಅಕ್ಕ "ಘುರ್ ಘುರ್" ಎಂದು ಎತ್ತು ಮುಸುಕಿದಂತೆ ಮುಸುಕಿದಳು. ನನಗೆ ಸಂಶಯವಾಯಿತು. ಭಾವನನ್ನು ಕೂಗಿದೆ. ಭಾವ ಓಡುತ್ತಲೇ ಬಂದ. ಬಂದವನೇ ಒಮ್ಮೆ ಎಂದೂ ಅಳದ ಅಳು ಅತ್ತ! ಇಷ್ಟೆಲ್ಲ ಅದರೂ ಅಜ್ಜ, ಚಿಕ್ಕಮ್ಮ ಒಳಗೆ ಬಂದು ನೋಡಲೂ ಇಲ್ಲ!!

—೧೬ನೇ ಪುಟ ನೋಡಿರಿ



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜೂನ ತಾ. ೨೪ ರಿಂದ ೩೦ ರ ವರೆಗೆ

ಮೇಷ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ. ಆದರೆ ಪ್ರಾಪಂಚಿಕ ಸುಖ ಕಡಮೆಯೇ. ಮಕ್ಕಳಲ್ಲಿ ಒಬ್ಬರ ಉನ್ನತಿಯಾದರೆ ಎರಡನೆಯವರ ಅಪಕರ್ಷ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಮಂದ ಆದರೆ ಪ್ರತಿಷ್ಠೆ ಮತ್ತು ಲೌಕಿಕ ಉತ್ತಮ. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರವು ಉತ್ತಮ. ಭರಣಿಗೆ ತೊಂದರೆ ಕಡಮೆ. ತಾ. ೨೪—೨೫—೨೬—೨೭ ಅನುಕೂಲ.

ವೃಷಭ

ಪ್ರಕೃತಿ ಮತ್ತು ರತಿಸುಖ ಅನುಕೂಲ. ಹೆಂಡತಿಗೂಡ ಮೇಲಿಂದ ಮೇಲೆ ವಾಗ್ಯುದ್ಧ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಮತ್ತು ಮಕ್ಕಳಲ್ಲಿ ಉದಯೋನ್ಮುಖ ಸಂಗತಿಗಳು. ಬಂಧುವರ್ಗದವರಲ್ಲಿ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಬಹಳ ಧಾರ್ಮಿಕ ಕೃತ್ಯಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಮಿತ್ರ ಸುಖ ಉತ್ತಮ. ಕೆಲವೊಂದು ಚೈನಿಯ ಸಂಗತಿಗಳಲ್ಲಿ ಅನಾಹುತ ಕಾರಣದಿಂದ ವಿರಸ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ರೋಹಿಣಿಗೆ ಹೆಚ್ಚು ಅನುಕೂಲ. ತಾ. ೨೭·೨೯–೩೦ ಅನುಕೂಲ.

ಮಿಥುನ

ಪ್ರಕೃತಿ ಉತ್ತಮ ಮತ್ತು ಸ್ತ್ರೀಸುಖ ಮನಸಿನಂತೆ ಆದರೆ ಮನೆಯಲ್ಲಿ ಉಳಿದವರ ಗೂಡ ಬಹಳ ಕಲಹ. ಉದ್ಯೋಗದಲ್ಲಿ ಪ್ರಗತಿ ಕಡಮೆ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವೆಚ್ಚ ಬಹಳ ಆದರೆ ಅದರಲ್ಲಿಯ ಹೇತು ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಆರಿದ್ರಾಕ್ಕೆ ಹೆಚ್ಚು ಅನುಕೂಲ. ತಾ. ೨೪ ೨೫ ೨೯ ೩೦ ಅನುಕೂಲ.

ಕರ್ಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೆ ಮನೆಯಲ್ಲಿ ಒಬ್ಬರು ಮನಸ್ಸಿನ ವಿರುದ್ಧ ವೆಚ್ಚ ಮಾಡುವದರಿಂದ ಹಣಕ್ಕೆ ಕತ್ತರಿ ಬಹಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಬಹಳ ಉತ್ತಮ. ಆದರೆ ಹೆಚ್ಚು ವೆಚ್ಚದಿಂದ ನಾಲ್ಕು ದುಡ್ಡು ಕೂಡ ಶಿಲಕು ಉಳಿಯಬೇಕಾದರೆ ಸಾಕು ಬೇಕಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ಪ್ರತಿಪಕ್ಷಿಗಳ ಜೋರು ಹೆಚ್ಚೇ, ಪ್ರವಾಸಾದಿ ಕೆಲಸ ಹಿತಕರ. ಪುಷ್ಯಕ್ಕೆ ತೊಂದರೆ ಕಡಮೆ. ತಾ. ೨೪ ೨೫ ೨೬ ೨೭ ಅನುಕೂಲ.

ಸಿಂಹ

ಪ್ರಕೃತಿ ಉತ್ತಮ ಆದರೆ ಸ್ತ್ರೀಸುಖದಲ್ಲಿ ಬಹಳ ವಿರಸ. ಉಳಿದ ಪ್ರಾಪಂಚಿಕ ಸುಖ ಮೇಲೆ ನೋಡಲಿಕ್ಕೆ ಒಳ್ಳೆದೆನಿಸಿದರೂ ಒಳಗೊಳಗೆ ಮನಸ್ಸು ಉದ್ವಿಗ್ನ ಮತ್ತು ಅಸ್ವಸ್ಥವೇ ಉಳಿಯುವದು. ಉದ್ಯೋಗದಲ್ಲಿ ಉತ್ತಮ ಪ್ರಗತಿ ಆದರೆ ಪ್ರತಿಷ್ಠೆ ಮತ್ತು ಲಾಭ ಕುಂದುತ್ತಲೆ ಹೋಗುವುದು. ಮಿತ್ರತ್ವದಲ್ಲಿ ವಿರೋಧ. ನೆರೆಹೊರೆಯವರು ಮತ್ತು ಆಪ್ತಜನರಿಂದ ಅಪ್ರಿಯವೆನಿಸುವ ಸಂಗತಿಗಳನ್ನು ಮಾಡುವ ಬಗ್ಗೆ ಒಂದೇಸವನೆ ದುರಾಗ್ರಹ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸ ಅನುಕೂಲ, ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಪೂರ್ವಾಕ್ಕೆ ತೊಂದರೆ ಕಡಮೆ. ತಾ. ೨೪ ೨೫ ೨೬ ಅನುಕೂಲ.

ಕನ್ಯಾ

ಪ್ರಕೃತಿ ಬಹಳ ಉತ್ತಮ ಅದರಂತೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಮನಸ್ಸಿನಂತೆ. ಮಕ್ಕಳಲ್ಲಿ ಒಬ್ಬರ ಪ್ರಶಂಸನೀಯ ಉನ್ನತಿ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ತುಂಬ; ಆದರೆ ಖರ್ಚು ವಿಪರೀತ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಆದರೆ ಶತ್ರುಗಳ ಜೋರು ಒಂದೆಸವನೆ. ಪ್ರವಾಸಾದಿ ಕೆಲಸ ಸುಖಕರ. ಹಸ್ತಾಕ್ಕೆ ಹೆಚ್ಚು ಅನುಕೂಲ. ತಾ. ೨೭ ೨೮ ೨೯ ೩೦ ಅನುಕೂಲ.

ತುಲಾ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ ಉಳಿದ ವಿಷಯಗಳಲ್ಲಿ ಹೆಚ್ಚು ಕಡಮೆ ತೊಂದರೆಯೇ. ಮಕ್ಕಳು ಜನರಿಗೆ ಪ್ರಿಯ ಆದರೆ ಮನೆಯಲ್ಲಿಯ ಜನರಿಗೆ ಅಪ್ರಿಯವಾಗುವಂಥ ವರ್ತನೆ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಬಹಳ ಉತ್ತಮ. ಪ್ರತಿಯೊಂದು ಕೆಲಸದಲ್ಲಿ ದಯಾಶೀಲವೃತ್ತಿ ಆದರೆ ಕೆಲವು ಧೂರ್ತರು ಅದರ ದುರ್ಲಾಭ ಪಡೆಯುವ ಪೇಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ಪ್ರವಾಸಾದಿ ಕೆಲಸ ಬಹಳ ಹಿತದ್ದು, ಸ್ವಾತಿಗ ತೊಂದರೆ ಕಡಮೆ. ತಾ. ೨೪ ೨೫ ೨೯ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ ಆದರೆ ಉಭಯತರ ವಿಚಿತ್ರ ಲಹರಿಯಿಂದ ಸಹವಾಸದಲ್ಲಿಯ ಜನರಿಗೆ ಸಾಕುಬೇಕಾಗಿ ಹೋಗುವದು. ಉದ್ಯೋಗದಲ್ಲಿ ಪ್ರಗತಿ ಬಹಳ ಕಡಮೆ ಆದರೆ ಪ್ರತಿಷ್ಠೆ ಮತ್ತು ಲಾಭ ತುಂಬ. ಪ್ರತಿಯೊಂದು ಕೆಲಸದಲ್ಲಿ ಸ್ವಕೀಯರಿಗಿಂತ ಪರಕೀಯರ ಸಹಾಯ ವಿಶೇಷ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ತಾ. ೨೭—೨೮—೩೦ ಅನುಕೂಲ.

ಧನು

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಅನುಕೂಲ. ಆದರೂ ಸ್ತ್ರೀ ಸುಖದಲ್ಲಿ ವಿರಸ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಯ ಸ್ಥಿತಿ ಬಹಳ ಸೂಕ್ಷ್ಮ. ಮಹತ್ವದ ಕೆಲಸಗಳಲ್ಲಿ ಪಕ್ಷಪಾತದಿಂದ ವರ್ತಿಸಿದ ಲೋಕಾಪವಾದ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ನೀವೇ ಹಿಮ್ಮೆಡುವದು. ಆದರೆ ಪರಭಾರೆ ಒಂದು ಕಾರಣ ಸಂಭವಿಸಿ ಶತ್ರುಗಳು ಬಹಳ ಹಾನಿ ಹೊಂದುವರು. ಮಿತ್ರ ಸುಖ ಅನುಕೂಲ, ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಪೂರ್ವಾಷಾಢಾಕ್ಕೆ ತೊಂದರೆ ಕಡಮೆ. ತಾ. ೨೪—೨೫—೨೮—೨೯ ಅನುಕೂಲ.

ಮಕರ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ. ಆದರೆ ಅವಳ ತವರುಮನೆಯವರಿಂದ ಅನಾದರದ ವರ್ತನ. ಮಕ್ಕಳಿಂದ ಭಯಪ್ರದ ಸಾಹಸದ ಕೆಲಸಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಆದರೆ ಸರಕಾರಿ ಕೆಲಸದಲ್ಲಿ ತೊಂದರೆ. ಮಿತ್ರಸುಖ ಸಾಮಾನ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ಪ್ರವಾಸಾದಿ ಕೆಲಸ ಹಿತಕರ. ಶ್ರವಣಾಕ್ಕೆ ತೊಂದರೆ ಕಡಮೆ. ತಾ. ೨೬—೨೭—೨೮ ಅನುಕೂಲ.

ಕುಂಭ

ಪ್ರಕೃತಿಗೆ ಅಸ್ವಸ್ಥತೆ. ಹೆಂಡತಿಯಿಂದ ವಿರೋಧ ಮತ್ತು ಹಟಮಾರಿತನ. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಕಡಮೆಯಾಗ ಹತ್ತಿದ ಭಾಸ ಉದ್ಯೋಗದಲ್ಲಿ ಪ್ರಗತಿ ಕಡಮೆಯೆ. ಜನರಲ್ಲಿ ಅನಾದರ ಆದರೆ ದ್ರವ್ಯಲಾಭ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕೇವಲ 'ಶಾಬ್ದಿಕ' ವಿಜಯ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಶತತಾರಿಕೆಗೆ ತೊಂದರೆ ಕಡಮೆ. ತಾ. ೨೪—೨೫—೨೯ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಉಳಿದ ಪ್ರಾಪಂಚಿಕ ಸುಖವು ಕಡಮೆಯೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಆದರೆ ಪ್ರತಿಯೊಂದು ಕೆಲಸದಲ್ಲಿ ಎರಡನೆಯವರ ಮರ್ಜಿಯನ್ನವಲಂಬಿಸಿ ಮಾಡಬೇಕಾದ ಯೋಗ— ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸಾದಿ ಕೆಲಸ ಹಿತಕರ. ಉತ್ತರಾ ಭಾದ್ರಪದಕ್ಕೆ ತೊಂದರೆ ಕಡಮೆ. ತಾ. ೨೪—೨೫—೨೬—೨೭ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ, ಪ್ರಕಟವಾಯಿತು

ಈ ವಾರದ ಕಥೆ

೧೫ ನೇ ಪುಟದಿಂದ ಮುಂದರಿದುದು

"ಅಕ್ಕ" ಎಂದೆ ಸ್ವಲ್ಪ ಜೋರಿನಿಂದಲೇ ಅಳುವ ಧಾಟಿಯಲ್ಲಿ.... "ಹುಂ?" ಎಂದು ಅಂಥ ಪರಿಸ್ಥಿತಿಯಲ್ಲಿಯೂ 'ಓ' ಕೊಟ್ಟಳು!!

ಬರಬರುತ್ತ ಭಾವ, ಅವ್ವ, ನನ್ನ ಅಳುವ ಹೆಚ್ಚಾಯಿತು. ಆದರ ಆಕೆಯ ಶ್ವಾಸ ಕ್ರಮೇಣ ಭಾವನ ತೊಡೆಯ ಮೇಲೆ ತಲೆ ಇಟ್ಟಂತೆಯೇ ಕಡಿಮೆಯಾಗಿ ಕೊನೆಗೊಮ್ಮೆ, ಆ ಮುಖವನ್ನು ಆಕೆ ಎತ್ತಲಾರದಂತೆ ಜಡವಾಗಿ ಮಾಡಿ ಬಿಟ್ಟಳು!

ಮುಖ ನೋಡಿದೆ. ಸಾವು ಅಕ್ಕನ ಮುಖವನ್ನು ಎಷ್ಟು ವಿಕಾರ ಪಡಿಸಿದ್ದಿತಲ್ಲ???—ನೋಡದಾದ! ಮುಖ ತಿರುಗಿಸಿ ಕೈಗಳಿಂದ ಮುಖವನ್ನು ಅತಿ ಗಟ್ಟಿಯಾಗಿ ಮುಚ್ಚಿಕೊಂಡು ಬಿಟ್ಟೆ!

ಅಪ್ಪ, ಇನ್ನು ಕೆಲ ಊರ ಪ್ರಮುಖರು ಮುಂದಿನ ಕಾರ್ಯ ಮಾಡಲು ತೊಡಗಿದರು. ಎಲ್ಲರೂ ಬಂದು ಅವ್ವನಿಗೆ ಸಮಾಧಾನ ಹೇಳತೊಡಗಿದರು. ಅಜ್ಜನ ಗೆಳೆಯನೊಬ್ಬ "ಉಳಿಕೀದೆಲ್ಲಾ ಹ್ಯಾಂಗರ ಸಾಗತದ್ರಿ ನಿಮ್ಮದ್ರಿ ಭಾಳ ಕಷ್ಟ ಆತು ಮುಪ್ಪಿನ ಕಾಲಕ್ಕಿ" ಎಂದುದಕ್ಕೆ "ಇವಳಿಲ್ದಿದ್ರಿ ಮತ್ತೊಬ್ಬಳು ಬರತಾಳಿಽಽ!! ಎಂದ ಅಜ್ಜ. ಇದನ್ನು ಕೇಳಿ ನನಗೆ ಕಾಸಿ ಕೆಂಪಾದ ಕಬ್ಬಿಣ ಸಲಾಕೆಯನ್ನು ಹೊಟ್ಟೆಗೆ ಚುಚ್ಚಿದಂತಾಯಿತು!

ರಾತ್ರಿ ಸುಮಾರು ಎರಡು ಗಂಟೆಯಾಗಿರಬಹುದು. ದಹನ ಸಂಸ್ಕಾರ ಮುಗಿಸಿ ಅಪ್ಪ ಬಂದ.

"ಕಟಿಗಿ ಸಾಕಾದವೇನ್ರಿ?"

"ಸಾಕಾಗದೇನು ಜಾಲಿ ಬಡ್ಡಿ ಅವು; ಈಗಾಗಲೇ ಬೆಂದು ಹೋಗಿರಬಹುದು." "ಆಯ್ಯೋಽಽ" ಎನಿಸಿತು. ಜೀವವಿರುವರೆಗಷ್ಟೇ ನಮ್ಮ ಅಕ್ಕ; ಜೀವ ಹೋದ ಮೇಲೆ "ಪ್ರೇತ"ಎಂದು ಕರೆಯಲಾಗುವದು!!

ಸ್ನಾನಕ್ಕೆ ನೀರು ಹಾಕತೊಡಗಿದರು ನೆರೆಮನೆಯ ಪುಟ್ಟಕ್ಕ. ಎಲ್ಲೆಡೆಯಲ್ಲಿಯೂ ಹೊರಗೆ ನಿಶ್ಶಬ್ದವಾಗಿತ್ತು. ಗಿಡಗಳೂ ಮೌನವಾಗಿದ್ದವು. ಕಾರ್ಗತ್ತಲೆ ಅಣಕಿಸುವಂತಿತ್ತು!

ಆದರೆ, ಆ ಮೌನವನ್ನೂ ವಜ್ರ ಶಾಂತಿಯನ್ನೂ ಭೇದಿಸಿ,

"ಆಯ್ಯೋ ಹೋದ್ಯಾಽಽಽ....?" ಎಂದು ಅವ್ವನ ರೋದನ ಮಾತ್ರ ಎಲ್ಲೆಡೆಗೂ ಪ್ರತಿಧ್ವನಿ ಕೊಡುತ್ತಿತ್ತು.

○ ○ ○ ○ ○

ಏರು ಧ್ವನಿಯಲ್ಲಿ "ಮಮತಾಜಳನೆ ಹುಗಿದು, ತಾಜ ಮಹಾಲನು—ಕಟ್ಟೆ ಆ ದುಃಖ ಹುದುಗಬಹುದೇ—???" ರಾಗ ಗಾಳಿಯಲ್ಲಿ ಬೆರೆತು ಎಲ್ಲೆಡೆಯಲ್ಲಿಯೂ ವ್ಯಾಪಿಸಿತು.

"ಮಾಸಣ್ಣ ಅಳುತೀಯಾ?" ಎಂದಿತು ತಬ್ಬಲಿ ಮಗು.

"ಆ ದುಃಖ ಹುದುಗಬಹುದೇ?"